ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 14 ಶುಕ್ರವಾರ 2024

₹4

ಸಂಪುಟ: 45 | ಸಂಚಿಕೆ: 59 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ವಕೀಲರ ಸಂಘಕ್ಕೆ ಸಂಸದ ಯದುವೀರ್ ಭೇಟಿ

ಲಾ ಗೈಡ್ ಬಳಗದ ವತಿಯಿಂದ ಸಂಸದರಿಗೆ ಅಭಿನಂದನೆ



ಮೈಸೂರು ವಕೀಲರ ಸಂಘಕ್ಕೆ ಭೇಟಿ ನೀಡಿದ್ದ ಸಂಸದ ಯದುವೀರ್ ಒಡೆಯರ್ ಅವರನ್ನು ಲಾ ಗೈಡ್ ಬಳಗದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಜೂ.13(ಎಸ್‌ಬಿಡಿ)– ಮೈಸೂರು–ಕೊಡಗು ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಗುರುವಾರ ಮೈಸೂರು ವಕೀಲರ ಸಂಘಕ್ಕೆ ಭೇಟಿ ನೀಡಿದ್ದರು.

ಮೊದಲು ನ್ಯಾಯಾಲಯದ ಆವರಣದಲ್ಲಿ ಯದುವೀರ್ ಅವರು ಚುನಾವಣೆಯಲ್ಲಿ ಗೆಲುವಿಗೆ ಸಹಕರಿಸಿದ ವಕೀಲರಿಗೆ ಕೃತಜ್ಞತೆ ಸಲ್ಲಿಸಿ, ನಂತರ ವಕೀಲರ ಸಂಘಕ್ಕೆ ಭೇಟಿ ನೀಡಿ, ಅಧ್ಯಕ್ಷ ಎಸ್. ಲೋಕೇಶ್ ಅವರೊಂದಿಗೆ ಕೆಲಕಾಲ ಚರ್ಚಿಸಿದರು. ಈ ವೇಳೆ ಕಾನೂನು ಸಂಶೋಧನಾ ಕೇಂದ್ರ ಹಾಗೂ ಕೇಂದ್ರೀಯ ಕಾಲೇಜು, ನೂತನ ಶೌಚಾಲಯ, ಕ್ಯಾಂಟಿನ್ ಡಿಜಿಟಲೀರಣ, ಗ್ರಂಥಾಲಯಕ್ಕೆ ಪುಸ್ತಕಗಳು, ವಕೀಲರಿಗೆ ಟೋಲ್ ಫ್ರೀ ಸೇರಿದಂತೆ ಹಲವು ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಸಂಘದ ವತಿಯಿಂದ ನೀಡಲಾಯಿತು. ಹಾಗೆಯೇ ಲಾ ಗೈಡ್ ಬಳಗದ ವತಿಯಿಂದ ಸಂಸದರಿಗೆ ಮೈಸೂರು ಪೇಟ ತೊಡಿಸಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್, ವಕೀಲರ ಸಂಘದ ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಹಿರಿಯ ವಕೀಲ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ, ಸಂಘದ ಹಾಲಿ ಕಾರ್ಯದರ್ಶಿ ಸುಧೀರ್, ಉಪಾಧ್ಯಕ್ಷ ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಭರತ್, ಮಹಿಳಾ ಕಾರ್ಯದರ್ಶಿ ವಿನೋದ್, ಖಜಾಂಚಿ ಚರಣ್, ಅನಂತ್ ಅನಂತು, ಸಂತೋಷ್, ಗೋಪಾಲ್ ಗೌಡ, ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಹೆಬ್ಬಾಳ ಕಾಲೋನಿಯ ನಿರಾಶ್ರಿತರಿಗೆ ನ್ಯಾಯ ಒದಗಿಸುವಂತೆ ದಸಂಸ ಪ್ರತಿಭಟನೆ

ಮೈಸೂರು, ಜೂ.13(ಜಿಎ)–ಮೈಸೂರಿನ ಹೆಬ್ಬಾಳ ಕಾಲೋನಿಯ ನಿರಾಶ್ರಿತರಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ದಸಂಸ ಮೈಸೂರು ಜಿಲ್ಲಾ ಶಾಖೆ ವತಿಯಿಂದ ಗುರುವಾರ ಮೈಸೂರು ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ರಾಜ್ಯ ಸಂಘಟನಾ ಸಂಚಾಲಕ ಕೆ.ನಂಜಪ್ಪ ಬಸವನಗುಡಿ ಮಾತನಾಡಿ, ಹೆಬ್ಬಾಳ ಕಾಲೋನಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಸರ್ವೇ ನಂಬರ್ 151ರಲ್ಲಿ ಕಳೆದ 45 ವರ್ಷಗಳಿಂದ ಸುಮಾರು 80 ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದರು. ಆದರೆ, 2009ರಲ್ಲಿ 34 ಕುಟುಂಬಗಳಿಗೆ ಮಾತ್ರ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಡಿಪಿಆರ್ ಮಾಡಿಸಿ ಕೆಲವರನ್ನು ಕೈ ಬಿಟ್ಟು ಬಿ.ಎಂ.ಶ್ರೀನಗರದ ಅಂಬೇಡ್ಕರ್ ಜ್ಞಾನಲೋಕದಲ್ಲಿ 34 ಮನೆಗಳನ್ನು ವಿತರಿಸಲಾಯಿತು. ಆದರೆ ಇನ್ನೂ ಕೆಲವು ಮನೆಗಳು ಕೈಬಿಟ್ಟಿದ್ದರಿಂದ ಅದೇ ಗುಡಿಸಲುಗಳಲ್ಲಿ ನಿರಾಶ್ರಿತರು ವಾಸಿಸುತ್ತಿದ್ದರು. ಈಗ ತಾಲೂಕು ಆಡಳಿತ ಸರ್ವೆ ಕಾರ್ಯವನ್ನು ಕೈಗೆತ್ತಿಕೊಂಡಿದ್ದು ಗುಡಿಸಲಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಯಾವುದೇ ಮಾಹಿತಿಯನ್ನು ಕೊಡದೆ ಏಕಾಏಕಿ ಸರ್ವೆ ಮಾಡಿ ನಿಜವಾದ ನಿರಾಶ್ರಿತರಿಗೆ ಅನ್ಯಾಯವಾಗಿದೆ ಎಂದರು. ಈ ವೇಳೆ ತಹಸಿಲ್ದಾರ್ ಮಹೇಶ್ ಅವರಿಗೆ ಮನವಿ ಸಲ್ಲಿಸಿದರು. ನಂತರ ಮಾತನಾಡಿದ ತಹಸೀಲ್ದಾರ್, ನಾನೇ ಖುದ್ದಾಗಿ ಬಂದು ಸ್ಥಳ ಪರಿಶೀಲಿಸಿ ನಿರಾಶ್ರಿತರಿಗೆ ನೆಲೆ ಕಲ್ಪಿಸಿ ಕೊಡುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ರಾಜ್ಯ ಸಂಚಾಲಕ ನಿಂಗರಾಜ್ ಮಲ್ಲಾಡಿ, ಯುವ ಮುಖಂಡರಾದ ಸಿ.ಮೋಹನ್ ಕುಮಾರ್ ಚಂದ್ರಕುಮಾರ್, ಕುಪ್ಪಸ್ವಾಮಿ, ಲೋಕೇಶ್, ರಾಮ್‌ಕುಮಾರ್, ಮಂಗಳಮ್ಮ, ಸರೋಜಮ್ಮ, ಲಕ್ಷ್ಮಿ, ಪುಷ್ಪ, ಸುಕನ್ಯ ಸೇರಿದಂತೆ ನೂರಾರು ನಿರಾಶ್ರಿತರು ಪಾಲ್ಗೊಂಡಿದ್ದರು.



ಮೈಸೂರಿನ ಹೆಬ್ಬಾಳ ಕಾಲೋನಿಯ ನಿರಾಶ್ರಿತರಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ದಸಂಸ ಮೈಸೂರು ಜಿಲ್ಲಾ ಶಾಖೆ ವತಿಯಿಂದ ಪ್ರತಿಭಟನೆ ನಡೆಸಿ, ನಂತರ ತಹಸೀಲ್ದಾರ್ ಮಹೇಶ್ ಅವರಿಗೆ ಮನವಿ ಸಲ್ಲಿಸಲಾಯಿತು.

ಜೂ.16, ಸ್ವರಾಲಯ ಸಾಂಸ್ಕೃತಿಕ ಹಬ್ಬ

ಮೈಸೂರು, ಜೂ.13(ಜಿಎ)–ಮೈಸೂರಿನ ಸ್ವರಾಲಯ ಸಂಗೀತ ಸಂಸ್ಥೆಯಿಂದ ಕನ್ನಡ–ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಗಾನ ಭಾರತಿ ವೀಣೆ ಶೇಷಣ್ಣ ಭವನದಲ್ಲಿ ಜೂ.16ರಂದು ಸಂಜೆ 4ಕ್ಕೆ ಸ್ವರಾಲಯ ಸಾಂಸ್ಕೃತಿಕ ಹಬ್ಬ ಆಯೋಜಿಸಲಾಗಿದೆ.

ಸಂಸ್ಥೆ ಸ್ಥಾಪಕಿ ಸುಮಾ ಹರಿನಾಥ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಸಂಗೀತ ಶಿಕ್ಷಕಿ ಶಶಿಕಲಾ ಚಂದ್ರಶೇಖರ್ ಕಾರ್ಯಕ್ರಮ ಉದ್ಘಾಟಿಸುವರು. ಅಮ್ಮ ರಾಮಚಂದ್ರ ಅವರಿಂದ ಜನಪದ ಗೀತೆಗಳ ಗಾಯನ, ಸ್ಪಂದನಾ ಹಾಗೂ ಸ್ನೇಹಾ ಅವರಿಂದ ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ. ಸಂಗೀತ ಶಿಕ್ಷಕಿ ಭಾಗ್ಯಲಕ್ಷ್ಮಿ ಅತಿಥಿಯಾಗಿ ಭಾಗವಹಿಸುವರು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಉಪಾಧ್ಯಕ್ಷೆ ಜಯಶ್ರೀ ತೋಳ್ಪಾಡಿ, ಕಾರ್ಯದರ್ಶಿ ಎಚ್.ಎಸ್.ಶ್ರೀಕಾಂತಾಮಣಿ, ಖಜಾಂಚಿ ಶುಭಾ ಗಣೇಶ್, ಕಾನೂನು ಸಲಹೆಗಾರ ಕೆ.ವಿ.ವಾಸು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ 'ಲಕ್ಷ ವೃಕ್ಷ ಯೋಜನೆ ಕಾರ್ಯಕ್ರಮ'

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಉದ್ಘಾಟನೆ



ಮೈಸೂರು, ಜೂ.13(ಜಿಎ)– ಮೈಸೂರಿನ ರಾಜೀವ್ ಸ್ನೇಹ ಬಳಗ ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಜೂ.15ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ 'ಲಕ್ಷ ವೃಕ್ಷ ಯೋಜನೆ ಕಾರ್ಯಕ್ರಮ' ಆಯೋಜಿಸಲಾಗಿದೆ. ಬಳಗದ ಸದಸ್ಯ ಬಿ.ಎಲ್. ಭೈರಪ್ಪ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಕುಂದೂರು ಮಠದ ಡಾ.ಶರತ್ ಚಂದ್ರ ಸ್ವಾಮಿ ಸಾನ್ನಿಧ್ಯ ವಹಿಸಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಅರಣ್ಯ ಸಚಿವ ಈಶ್ವರ್ ಖಂಡ್ರೆ ಸಸಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ಅವರು ಸಸ್ಯ ಸಂಭ್ರಮ ಕಿರು ಹೊತ್ತಿಗೆ ಬಿಡುಗಡೆ ಮಾಡುವರು ಎಂದರು.

ಕಾರ್ಯಕ್ರಮದಲ್ಲಿ ಸಸ್ಯ ಸಂರಕ್ಷಕರಾದ ರಾಮೇಗೌಡ, ವಿ.ಶ್ರೀನಿವಾಸರಾಜು ಅವರಿಗೆ 'ಸಿರಿ ಸಂವರ್ಧನ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮುಖ್ಯ ಅತಿಥಿಗಳಾಗಿ ಸಚಿವ ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಪತ್ರಕರ್ತ ರವಿ ಹೆಗಡೆ ಭಾಗವಹಿಸಲಿದ್ದು, ಕಾಂಗ್ರೆಸ್ ಮುಖಂಡ ಮತ್ತು ಮುಡಾ ಮಾಜಿ ಅಧ್ಯಕ್ಷರೂ ಆದ ಹೆಚ್.ವಿ.ರಾಜೀವ್ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಸ್ನೇಹ ಬಳಗದ ಪ್ರಮುಖರಾದ ಮಾಜಿ ನಗರಪಾಲಿಕೆ ಸದಸ್ಯ ಕೆ.ವಿ.ಮಲ್ಲೇಶ್, ಜಯಂತ್, ವಾಸು, ವೆಂಕಟೇಶ್ ಉಪಸ್ಥಿತರಿದ್ದರು.

ಜೂ.16, ರಮಾಬಾಯಿ ಅಂಬೇಡ್ಕರ್ ಮಹಿಳಾ ಸಮಾಜದಿಂದ ಅಂಬೇಡ್ಕರ್ ಜನ್ಮದಿನ ಆಚರಣೆ

ಮೈಸೂರು, ಜೂ.13(ಜಿಎ)–ರಮಾಬಾಯಿ ಅಂಬೇಡ್ಕರ್ ಮಹಿಳಾ ಸಮಾಜದಿಂದ ಜೆ.ಪಿ.ನಗರದ ಪುಟ್ಟರಾಜ ಗವಾಯಿಗಳ ಕ್ರೀಡಾಂಗಣದಲ್ಲಿ ಜೂ.16ರಂದು ಮಧ್ಯಾಹ್ನ 2 ಗಂಟೆಗೆ ಡಾ.ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮದಿನ ಹಾಗೂ ಸಂಘದ ಐದನೇ ವಾರ್ಷಿಕೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷೆ ಲೀಲಾವತಿ ಯಲಕ್ಕಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉರಿಲಿಂಗ ಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಮುಡಾ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡರಾದ ಹೆಚ್.ವಿ.ರಾಜೀವ್ ಅಧ್ಯಕ್ಷತೆ ವಹಿಸಲಿದ್ದು, ಸಮಾಜ ಸೇವಕ ಅಹಿಂದ ಜವರಪ್ಪ, ನಗರ ಪಾಲಿಕೆ ಮಾಜಿ ಸದಸ್ಯೆ ಶಾರದಮ್ಮ ಭಾಗ ವಹಿಸುವರು ಎಂದರು. ಸಂಘದ ಕಾರ್ಯ ದರ್ಶಿ ಶಮಾ ಮಾತನಾಡಿ, ನಮ್ಮ ಸಮಾಜದಲ್ಲಿ 90 ಸದಸ್ಯರಿದ್ದು, ಅಂಬೇಡ್ಕರ್ ಅವರ ಮಾರ್ಗವನ್ನು ಅನುಸರಿಸಿ, ನೊಂದ ಮಹಿಳೆಯರಿಗೆ ಉಚಿತ ಕಾನೂನು ಸಲಹೆ, ಪೊಲೀಸರಿಂದ ರಕ್ಷಣೆ ಒದಗಿಸುವ ಕಾರ್ಯ ಮಾಡುತ್ತಿದ್ದೇವೆ. ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ ಸಂಘಕ್ಕೆ ಒಂದು ಶಾಶ್ವತ ಕಟ್ಟಡವನ್ನು ನಿರ್ಮಿಸಲು ಸರ್ಕಾರ ಸಹಕರಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಗೌರವ ಅಧ್ಯಕ್ಷ ಎನ್.ವಿ.ರಮೇಶ್ ಇದ್ದರು.



ವಿಚ್ಛೇದನ ಕೋರಿ ನಟ ದುನಿಯಾ ವಿಜಯ್ ಸಲ್ಲಿಸಿದ್ದ ಅರ್ಜಿ ವಜಾ



ಬೆಂಗಳೂರು,ಜೂ.13–2018ರಲ್ಲಿ ಪತ್ನಿಯಿಂದ ವಿಚ್ಛೇದನ ಕೋರಿ ಕೋರ್ಟ್‌ಗೆ ನಟ ದುನಿಯಾ ವಿಜಯ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ನಾಗರತ್ನ ಮತ್ತು ದುನಿಯಾ ವಿಜಯ್ ಅವರ ಸಂಸಾರದಲ್ಲಿ ಹಲವು ವರ್ಷಗಳ ಹಿಂದೆಯೇ ಬಿರುಕು ಮೂಡಿತ್ತು ಆದ್ದರಿಂದ 2018ರಲ್ಲಿ ವಿಜಯ್ ಅವರು ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಮಕ್ಕಳ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಅವರು ಸಿದ್ಧರಿದ್ದಾರೆ. ಅಲ್ಲದೇ, ಪತ್ನಿಗೆ ಜೀವನಾಂಶ ನೀಡಲು ಕೂಡ ಅವರು ಒಪ್ಪಿದ್ದಾರೆ. ಆದರೆ, ಪ್ರತಿ ಬಾರಿ ಕೋರ್ಟ್‌ನಲ್ಲಿ ವಿಚಾರಣೆ ನಡೆದಾಗ ನಾಗರತ್ನ ಅವರು ಪತಿಯನ್ನು ಬಿಡಲು ಒಪ್ಪಿಕೊಳ್ಳಲಿಲ್ಲ. ಪತ್ನಿ ನಾಗರತ್ನ ಮೇಲಿನ ಆರೋಪಗಳನ್ನು ಸಾಬೀತುಪಡಿಸಲು ವಿಜಯ್‌ರಿಂದ ಸಾಧ್ಯವಾಗದ ಹಿನ್ನೆಲೆಯಲ್ಲಿ ದುನಿಯಾ ವಿಜಿ ಅವರ ಅರ್ಜಿಯನ್ನು ವಜಾಗೊಳಿಸಿ ಫ್ಯಾಮಿಲಿ ಕೋರ್ಟ್ ಆದೇಶ ಹೊರಡಿಸಿದೆ.

ಮೈಸೂರು ಮಹಾನಗರಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಲು ತಯಾರಿ ನಡೆಸಿದ್ದ ನಾಗರಾಜ್

ಮೈಸೂರು,ಜೂ.13– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತ ಆರೋಪಿಗಳ ಪೈಕಿ ಒಬ್ಬನಾದ ನಾಗರಾಜ್ ನಟ ದರ್ಶನ್ ನೆರವಿನಿಂದ ಇಲ್ಲಿನ ನಗರ ಪಾಲಿಕೆ ಚುನಾವಣೆಯಲ್ಲಿ ಕಣಕ್ಕಿಳಿಯಲು ತಯಾರಿ ನಡೆಸಿದ್ದ ಎಂಬ ಸಂಗತಿ ಹೊರಬಿದ್ದಿದೆ. ಹಲವು ವರ್ಷಗಳಿಂದ ದರ್ಶನ್‌ಗೆ ಆಪ್ತನಾಗಿದ್ದ 41 ವರ್ಷ ವಯಸ್ಸಿನ ನಾಗರಾಜ್, ಮೂಲತಃ ತಿ.ನರಸೀಪುರದವನಾಗಿದ್ದು, ಮೈಸೂರಿನ ರಾಮಕೃಷ್ಣನಗರದ ನಿವಾಸಿಯಾಗಿದ್ದ. ದರ್ಶನ್ ಸಹಕಾರದಿಂದ ಕಾಂಗ್ರೆಸ್‌ನಿಂದ ಟಿಕೆಟ್ ಪಡೆದು ವಾರ್ಡ್ ನಂ.21 (ಗಂಗೋತ್ರಿ)ರಿಂದ ಸ್ಪರ್ಧಿಸಬೇಕು ಎಂಬ ತಯಾರಿ ನಡೆಸಿದ್ದ. ಅದಕ್ಕಾಗಿ ಕಾಂಗ್ರೆಸ್ ಕಾರ್ಯಕ್ರಮಗಳಲ್ಲೂ ಆಗಾಗ ಕಾಣಿಸಿಕೊಳ್ಳುತ್ತಿದ್ದ ಎಂದು ತಿಳಿದುಬಂದಿದೆ.

ಹಿಂದೆ ಪೆಟ್ರೋಲ್ ಬಂಕ್ ಒಂದರಲ್ಲಿ ಕೆಲಸ ಮಾಡುತ್ತಿದ್ದ ನಾಗರಾಜ್, ಸ್ನೇಹಿತರ ಮೂಲಕ ದರ್ಶನ್ ಆಪ್ತವಲಯಕ್ಕೆ ಸೇರಿಕೊಂಡಿದ್ದ. 15 ವರ್ಷಗಳಿಂದಲೂ ದರ್ಶನ್ ವ್ಯವಸ್ಥಾಪಕನಂತೆ ಕೆಲಸ ಮಾಡುತ್ತಿದ್ದ. ತಿ.ನರಸೀಪುರ ರಸ್ತೆಯ ಕೆಂಪಯ್ಯನಹುಂಡಿಯ ಬಳಿ ಇರುವ ದರ್ಶನ್ ತೋಟದ ಮನೆಯ ನಿರ್ವಹಣೆಯನ್ನೂ ನೋಡಿಕೊಳ್ಳುತ್ತಿದ್ದ. ದರ್ಶನ್ ಅಭಿಮಾನಿ ಸಂಘಗಳಿಗೆಲ್ಲ ಸಂಪರ್ಕ ಸೇತುವೆಯೂ ಆಗಿದ್ದ.

ಕಳೆದ ವರ್ಷ, ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಸಂರಕ್ಷಿತವೆಂದು ಗುರುತಿಸಲಾದ ಪಟ್ಟೆತಲೆ ಹೆಬ್ಬಾತುಗಳನ್ನು (ಬಾರ್ ಹೆಡೆಡ್ ಗೂಸ್) ತೋಟದ ಮನೆಯಲ್ಲಿ ಕೂಡಿ ಹಾಕಿ, ಸಾಕಿದ ಆರೋಪದ ಮೇರೆಗೆ ಅರಣ್ಯಾಧಿಕಾರಿಗಳು ದರ್ಶನ್ ಹಾಗೂ ಅವರ ಪತ್ನಿ ವಿಜಯಲಕ್ಷ್ಮಿ ಜೊತೆ ನಾಗರಾಜ್ ವಿರುದ್ಧ ಕೂಡ ಪ್ರಕರಣ ದಾಖಲಿಸಿದ್ದರು. ಎಫ್‌ಐಆರ್‌ನಲ್ಲಿ ಆತನನ್ನು ದರ್ಶನ್ ವ್ಯವಸ್ಥಾಪಕ ಎಂದು ಉಲ್ಲೇಖಿಸಲಾಗಿತ್ತು.

ಎರಡು ತಿಂಗಳ ಗರ್ಭಿಣಿ ಆತ್ಮಹತ್ಯೆ

ಮೈಸೂರು, ಜೂ.13(ಎಂಕೆ)– ಎರಡು ತಿಂಗಳ ಗರ್ಭಿಣಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿರುವ ಘಟನೆ ಮೈಸೂರಿನ ಮಾನಸಿನಗರ (ರಿಂಗ್ ರಸ್ತೆ ಸಮೀಪ)ದಲ್ಲಿ ನಡೆದಿದೆ. ಬೆಂಗಳೂರು ಮೂಲದ ಸೌಮಶ್ರೀ(24) ಆತ್ಮಹತ್ಯೆ ಮಾಡಿಕೊಂಡವರಾಗಿದ್ದು, ಏಳು ತಿಂಗಳ ಹಿಂದೆಯಷ್ಟೇ ಮಾನಸಿನಗರದ ಮಂಜುನಾಥ್ ಎಂಬಾತನನ್ನು ವಿವಾಹವಾಗಿದ್ದ ಇವರು ಎರಡು ತಿಂಗಳ ಗರ್ಭಿಣಿಯಾಗಿದ್ದರು ಎನ್ನಲಾಗಿದೆ. ಗುರುವಾರ ಮಧ್ಯಾಹ್ನ ಮನೆಯಲ್ಲಿ ಯಾರು ಇಲ್ಲದ ವೇಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಮೃತ ದೇಹವನ್ನು ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದೆ ಎಂದು ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಾಗ್ಪುರ: ಸ್ಫೋಟಕ ತಯಾರಿಕಾ ಕಾರ್ಖಾನೆಯಲ್ಲಿ ಸ್ಫೋಟ, ಐವರು ಕಾರ್ಮಿಕರ ಸಾವು

ನಾಗ್ಪುರ: ಮಹಾರಾಷ್ಟ್ರದ ನಾಗ್ಪುರ ಬಳಿಯ ಸ್ಫೋಟಕ ತಯಾರಿಕಾ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಕನಿಷ್ಠ ಐವರು ಕಾರ್ಮಿಕರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ನಾಗ್ಪುರ ದಿಂದ 25 ಕಿ.ಮೀ. ದೂರದಲ್ಲಿರುವ ಹಿಂಗ್ನಾ ಪೊಲೀಸ್ ಠಾಣೆ ವ್ಯಾಪ್ತಿಯ ಧಮ್ನಾ ಗ್ರಾಮದ ಚಾಮುಂಡಿ ಸ್ಫೋಟಕ ಪ್ರೈವೇಟ್ ಲಿಮಿಟೆಡ್‌ನಲ್ಲಿ ಈ ಘಟನೆ ನಡೆದಿದೆ. ಸ್ಫೋಟದಲ್ಲಿ ಕನಿಷ್ಠ ಐವರು ಕಾರ್ಮಿಕರು ಸಾವನ್ನಪ್ಪಿದ್ದು, ಇಡೀ ಫ್ಯಾಕ್ಟರಿ ಬೆಂಕಿ ಯಿಂದ ಸುಟ್ಟು ಹೋಗಿದೆ. ಕಾರ್ಮಿಕರು ಸ್ಫೋಟಕಗಳನ್ನು ಪ್ಯಾಕ್ ಮಾಡುತ್ತಿದ್ದಾಗ ಮಧ್ಯಾಹ್ನ 1 ಗಂಟೆಗೆ ಸ್ಫೋಟ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ



ಬಿ.ಬಿ. ರಾಜಶೇಖರ್

ಮೈಸೂರು, ಜೂ.13– ಮೈಸೂರಿನ ಬಂಬೂ ಬಜಾರ್ (ನ್ಯೂ ಸಯ್ಯಾಜಿರಾವ್ ರಸ್ತೆ) ನಿವಾಸಿ ಬಿ.ಬಿ.ರಾಜಶೇಖರ್ (ಆಯಿಲ್ ಮಿಲ್) ಗುರುವಾರ ಬೆಳಗ್ಗೆ ನಿಧನರಾದರು. ಮೃತರಿಗೆ 87 ವರ್ಷ ವಯಸ್ಸಾಗಿತ್ತು.

ಇವರು ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬನ್ನಿಮಂಟಪ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಸವೇಗೌಡ




ಮೈಸೂರು, ಜೂ.13– ಮೈಸೂರು ತಾಲೂಕು ಇಲವಾಲ ಹೋಬಳಿಯ ದೊಡ್ಡಮಾರಗೌಡನಹಳ್ಳಿಯ ಬಸವೇಗೌಡ ಅವರು ಇಂದು ನಿಧನರಾಗಿದ್ದು, ಇವರ ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಪೂರ್ವಾಹ್ನ 11.30 ಗಂಟೆಗೆ ಸ್ವಗ್ರಾಮ ದೊಡ್ಡಮಾರಗೌಡನಹಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ.

ನೀಟ್‌ನಲ್ಲಿ ಗ್ರೇಸಿಂಗ್ ಅಂಕ ಪಡೆದಿದ್ದ 1,563 ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ

ಹೊಸದಿಲ್ಲಿ, ಜೂ.13– ರಾಷ್ಟ್ರಮಟ್ಟದಲ್ಲಿ ನಡೆಯುವ ವೈದ್ಯಕೀಯ ಪ್ರವೇಶ ಪರೀಕ್ಷೆಯ 2023–24ನೇ ವರ್ಷದ ಪರೀಕ್ಷೆಯಲ್ಲಿ ಕೃಪಾಂಕ ಪಡೆದು ಉತ್ತಮ ರ‍್ಯಾಂಕಿಂಗ್ ಗಳಿಸಿದ್ದ 1563 ಅಭ್ಯರ್ಥಿಗಳಿಗೆ ಮರುಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಈ ಅಭ್ಯರ್ಥಿಗಳಿಗೆ ಜೂ. 23ರಂದು ಮತ್ತೊಂದು ಪರೀಕ್ಷೆ ನಡೆಸುವುದಾಗಿ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ (ಎನ್‌ಟಿಎ) ನಿರ್ಧರಿಸಿದೆ.

ಈ ಕುರಿತಂತೆ ಮಾಧ್ಯಮಗಳಿಗೆ ವಿವರಣೆ ನೀಡಿರುವ ಎನ್‌ಟಿಎ ಅಧಿಕಾರಿಯೊಬ್ಬರು, ಕೃಪಾಂಕಗಳ ಆಧಾರದಲ್ಲಿ ಉತ್ತಮ ರ‍್ಯಾಂಕಿಂಗ್ ಪಡೆದ ಅಭ್ಯರ್ಥಿಗಳಿಗೆ ಕೃಪಾಂಕಗಳಿಲ್ಲದೆ ಅವರು ನೈಜವಾಗಿ ಗಳಿಸಿರುವ ಅಂಕಗಳನ್ನು ಒಪ್ಪಿಕೊಳ್ಳುವಂತೆ ಅಥವಾ ಮರು ಪರೀಕ್ಷೆ ಎದುರಿಸುವುದು ಎಂಬ ಎರಡು ಆಯ್ಕೆಗಳನ್ನು ನೀಡಲಾಗಿದೆ. ಮರು ಪರೀಕ್ಷೆ ಬಯಸುವ ವಿದ್ಯಾರ್ಥಿಗಳಿಗೆ ಜೂ. 23ರಂದು ಪರೀಕ್ಷೆ ನಡೆಸಲಾಗುವುದು ಎಂದು ಹೇಳಲಾಗಿದೆ. ಆ ಮರು ಪರೀಕ್ಷೆಗಳ ಫಲಿತಾಂಶ ಜೂ. 30ರಂದು ಪ್ರಕಟಗೊಳ್ಳುತ್ತದೆ ಎಂದರು. ವೈದ್ಯಕೀಯ ಸ್ನಾತಕ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳಿಗಾಗಿ ರಾಷ್ಟ್ರಮಟ್ಟದಲ್ಲಿ ನಡೆಯುವ ಪ್ರವೇಶ ಪರೀಕ್ಷೆಯಾದ ನೀಟ್, ಈ ವರ್ಷ ಮೇ 5ರಂದು ನಡೆದಿತ್ತು. ಜೂ. 14ರಂದು ಘೋಷಣೆಯಾಗಬೇಕಿದ್ದ ಫಲಿತಾಂಶ, ಜೂನ್ 4ರಂದೇ ಘೋಷಣೆಯಾಯಿತು. ಫಲಿತಾಂಶ ಹೊರಬಿದ್ದಾಗ 67 ಮಂದಿಗೆ, ಪರೀಕ್ಷೆಗೆ ಪೂರ್ಣ ಅಂಕಗಳಾದ 720 ಅಂಕಗಳು




ಲಭಿಸಿದ್ದು ಅನೇಕರಿಗೆ ಅಚ್ಚರಿಯುಂಟು ಮಾಡಿತ್ತು. ಅದಕ್ಕೆ ಕಾರಣ, ನೀಟ್ ಪ್ರವೇಶ ಪರೀಕ್ಷೆಯ ಮೌಲ್ಯ ಮಾಪನ ಮಾಡುವ ವೇಳೆ 1,563 ಅಭ್ಯರ್ಥಿಗಳಿಗೆ ನೀಡಲಾಗಿದ್ದ ಕೃಪಾಂಕ (ಗ್ರೇಸ್ ಮಾರ್ಕ್ಸ್). ನೀಟ್ ಪರೀಕ್ಷೆಯ ದಿನ ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳಿಗೆ ತಪ್ಪು ಪ್ರಶ್ನೆ ಪತ್ರಿಕೆಯು ವಿತರಣೆಯಾಗಿದ್ದವು. ಇನ್ನೂ ಕೆಲವು ಕಡೆ ನೀಟ್ ಅಭ್ಯರ್ಥಿಗಳಿಗೆ ನೀಡಲಾಗುವ ಉತ್ತರ ಪತ್ರಿಕೆ (ಒಎಂಆರ್ ಶೀಟ್) ಹರಿದುಹೋಗಿದ್ದವು. ಅದು ಗಮನಕ್ಕೆ ಬಂದ ಕೂಡಲೇ ಆ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಂದ ತಪ್ಪು ಉತ್ತರ ಪ್ರಶ್ನೆಪತ್ರಿಕೆಗಳು ಹಾಗೂ ಹರಿದು ಹೋಗಿದ್ದ ಉತ್ತರ ಪತ್ರಿಕೆಯನ್ನು ಹಿಂಪಡೆದು ಅಲ್ಲಿ ಸರಿಯಾದ ಪ್ರಶ್ನೆ ಪತ್ರಿಕೆ ಹಾಗೂ ಸರಿಯಾದ ಉತ್ತರ ಪತ್ರಿಕೆಗಳನ್ನು ನೀಡಲಾಗಿತ್ತು.

ಕೆಲವು ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಸಮಯ ವ್ಯರ್ಥವಾದ ಕಾರಣ, ಆ ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳಿಗೆ ಕೃಪಾಂಕಗಳನ್ನು ನೀಡಲಾಗಿತ್ತು. ಕೃಪಾಂಕವನ್ನು ನೀಟ್ ಪರೀಕ್ಷೆ ನಡೆಸುವ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರದ ಸಲಹಾ ಸಮಿತಿಯು ಕೈಗೊಂಡಿತ್ತು. ಅದರ ಪರಿಣಾಮವಾಗಿ, 67 ಮಂದಿಗೆ ಶೇ. 100ರಷ್ಟು ಅಂಕಗಳು ಸಿಕ್ಕಿದವು. ಅದರ ವಿರುದ್ಧ ದೇಶದ ನಾನಾ ಭಾಗಗಳಲ್ಲಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳು ರೊಚ್ಚಿಗೆದ್ದರು. ಸಾಮಾನ್ಯವಾಗಿ ನೀಟ್ ಪರೀಕ್ಷೆಯಲ್ಲಿ ಎಷ್ಟೇ ಬುದ್ಧಿವಂತರಾದರೂ ಹೀಗೆ ಶೇ. 100ರಷ್ಟು ಅಂಕಗಳು ಸಿಗುವುದು ಸಾಧ್ಯವಿಲ್ಲ. ಕೇವಲ ಕೃಪಾಂಕ ಮಾತ್ರದಿಂದಲೇ ಶೇ. 100ಕ್ಕೆ 100ರಷ್ಟು ಅಂಕ ಪಡೆಯುವಂಥ ಮಾದರಿ ಸರಿಯಾದ ಪರೀಕ್ಷಾ ಮಾದರಿಯಲ್ಲ ಎಂದು ಹೇಳಿ ಕೆಲವು ರಾಜ್ಯಗಳ ವಿದ್ಯಾರ್ಥಿಗಳು ಅಲ್ಲಿನ ನ್ಯಾಯಾಲಯದ ಮೆಟ್ಟಿಲೇರಿದ್ದರು. ಸುಮಾರು ಏಳು ರಾಜ್ಯಗಳಲ್ಲಿ ಈ ವಿಚಾರವಾಗಿ ಕೇಸ್‌ಗಳು ದಾಖಲಾದವು. ಇದೇ ಮಂಗಳವಾರದಂದು, ಸುಪ್ರೀಂಕೋರ್ಟ್, ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರಕ್ಕೆ ತಾಕೀತು ಮಾಡಿ, ವಿದ್ಯಾರ್ಥಿಗಳ ಆಕ್ಷೇಪಣೆಗಳಿಗೆ ಪೂರಕವಾಗಿ ಕ್ರಮ ಕೈಗೊಳ್ಳುವಂತೆ ಸೂಚಿಸಿತ್ತು. ಆ ಹಿನ್ನೆಲೆಯಲ್ಲಿ, ಜೂ. 10, 11 ಹಾಗೂ 12ರಂದು ಸಭೆ ನಡೆಸಿದ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರದ ಸಲಹಾ ಸಮಿತಿಯ ಸದಸ್ಯರು, ಕೃಪಾಂಕಗಳನ್ನು ಹಿಂಪಡೆದು, ಆ ಕೃಪಾಂಕಗಳನ್ನು ಪಡೆದ 1,563 ವಿದ್ಯಾರ್ಥಿಗಳಿಗೆ ಹೊಸದಾಗಿ ಪರೀಕ್ಷೆ ಬರೆಯಲು ಸೂಚಿಸುವ ನಿರ್ಧಾರ ಕೈಗೊಂಡಿದ್ದಾರೆ. ಅದನ್ನು ಸುಪ್ರೀಂಕೋರ್ಟ್‌ಗೂ ತಿಳಿಸಿದ್ದಾರೆ.

ಲಲಿತ ಕಲಾ ಕಾಲೇಜಿನಲ್ಲಿ ಬಿಪಿಎ ಕೋರ್ಸ್‌ಗೆ ಪ್ರವೇಶಾತಿ

ಮೈಸೂರು, ಜೂ.13(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯ ಅಧೀನದ ಲಲಿತ ಕಲಾ ಕಾಲೇಜಿನಲ್ಲಿ 3 ವರ್ಷದ ಬಿಪಿಎ ಪ್ರದರ್ಶಕ ಕಲೆಗಳ ಕೋರ್ಸ್‌ಗೆ ಪ್ರವೇಶಾತಿ ಆರಂಭವಾಗಿದೆ. ಕರ್ನಾಟಕ ಸಂಗೀತ, ಭರತನಾಟ್ಯ, ನಾಟಕಶಾಸ್ತ್ರ, ಗಮಕ ಹಾಗೂ ಮೃದಂಗ ವಿಷಯಗಳ ಅಧ್ಯಯನವನ್ನು ಕೋರ್ಸ್ ಒಳಗೊಂಡಿದೆ. ಈ ಕೋರ್ಸ್ ನಲ್ಲಿ ಪ್ರಯೋಗ ಹಾಗೂ ಶಾಸ್ತ್ರಗಳೆರಡನ್ನು ಅಧ್ಯಯನ ಮಾಡಬಹುದು. ಹಾಸ್ಟೆಲ್ ಸೌಲಭ್ಯ ಮತ್ತು ವಿದ್ಯಾರ್ಥಿ ವೇತನ ಸಹ ಅರ್ಹ ವಿದ್ಯಾರ್ಥಿಗಳಿಗೆ ಲಭ್ಯವಿದೆ. ಪ್ರವೇ ಶಾತಿಗೆ ಕನಿಷ್ಠ ವಿದ್ಯಾರ್ಹತೆ ಪಿಯುಸಿ ಅಥವಾ ಸಮನಾಂತರ ಕೋರ್ಸ್ ಆಗಿದೆ. ಜೊತೆಗೆ ಈ ಕಲಾ ವಿಭಾಗದಲ್ಲಿ ಮುಂದೆ ಸ್ನಾತಕೋತ್ತರ ಪದವಿ, ಪಿಹೆಚ್.ಡಿ ಅಧ್ಯಯನ ಮಾಡುವ ಅವಕಾಶವೂ ಇದೆ. ಹೆಚ್ಚಿನ ಮಾಹಿತಿಗೆ ದೂ.ಸಂ. 0821–2419586, ಮೊ.ಸಂ. 87228 56848, 98805 46829 ಅನ್ನು ಸಂಪರ್ಕಿಸಬಹುದೆಂದು ಕಾಲೇಜಿನ ಪ್ರಾಂಶುಪಾಲರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.06.2024 ಶುಕ್ರವಾರ, ಮಳೆ ನಕ್ಷತ್ರ: ಮೃಗಶಿರ, 08.06.2024 ರಿಂದ 21.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ತೀವ್ರ ತಲೆನೋವು, ಮೈಗ್ರೇನ್ ತಲೆನೋವು, ಪಾರ್ಕಿನ್‌ಸನ್ಸ್ ಕಾಯಿಲೆಯ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಸಮಾಜ ಕಾರ್ಯ ಅಧ್ಯಯನ ವಿಭಾಗ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕೆ.ಆರ್. ಆಸ್ಪತ್ರೆ ರಕ್ತನಿಧಿ ಕೇಂದ್ರ, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ:** ವಿಶ್ವ ರಕ್ತದಾನಿಗಳ ದಿನಾಚರಣೆ–2024, ರಕ್ತದಾನಿಗಳ ಹಬ್ಬ, ಉದ್ಘಾಟನೆ: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ಜಿಲ್ಲಾ ಏಡ್ಸ್ ಪ್ರತಿಬಂಧಕ ಹಾಗೂ ನಿಯಂತ್ರಣ ಘಟಕಾಧಿಕಾರಿ ಡಾ.ಮೊಹಮ್ಮದ್ ಸಿರಾಜ್ ಅಹಮದ್, ಕೆ.ಆರ್.ಆಸ್ಪತ್ರೆ ರಕ್ತನಿಧಿ ಅಧಿಕಾರಿ ಡಾ.ಕುಸುಮಾ, ಪತ್ರಿಕೋದ್ಯಮ ವಿಭಾಗದ ಅಧ್ಯಕ್ಷೆ ಡಾ.ಸ್ವಪ್ನ, ಪ್ರೊ.ಪ್ರಮೋದ್ ಎಂ.ಗವಾರಿ, ಬಿ.ಸವಿತಾ, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಅಧ್ಯಕ್ಷತೆ: ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಮ್ಯಾನೇಜಿಂಗ್ ಟ್ರಸ್ಟಿ ಲಯನ್ ಎಸ್.ಇ. ಗಿರೀಶ್, ಎಕ್ಸಿಕ್ಯೂಟಿವ್ ಟ್ರಸ್ಟಿ ಲಯನ್ ಸಿ.ಜಿ.ಮುತ್ತಣ್ಣ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ:** ಮಹಿಳಾ ದಿನಾಚರಣೆ ಮತ್ತು ನಿಲಯ ವಾರ್ಷಿಕೋತ್ಸವ, ಉದ್ಘಾಟನೆ: ಶಾಸಕ ಹರೀಶ್‌ಗೌಡ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ನೂತನ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಟಿ.ಎಸ್. ಶ್ರೀವತ್ಸ, ಎಚ್.ಎಂ.ಗಣೇಶ್‌ಪ್ರಸಾದ್, ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ, ಮೈಸೂರು ವಿವಿ ಆಡಳಿತಾಧಿಕಾರಿ ಪ್ರೊ.ಎಸ್.ಟಿ.ರಾಮಚಂದ್ರ, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 3.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ:** ಶುಕ್ರವಾರದ ಉಪನ್ಯಾಸ ಮಾಲಿಕೆ–9, ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಸಂವಹನ ಕೌಶಲ್ಯಗಳು, ಕುರಿತು ಮೈಸೂರು ವಿವಿ ಶಿಕ್ಷಣ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎಂ. ಪುಷ್ಪ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರೊ.ಚಂದ್ರಶೇಖರ, ಸ್ಥಳ: ಡಾ.ರಂಗನಾಥನ್ ಸಭಾಂಗಣ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ, ಸಂಜೆ 4ಕ್ಕೆ.

■ **ಪುಣ್ಯಕೋಟಿ ಸೇವಾ ಟ್ರಸ್ಟ್, ಐಶ್ವರ್ಯ ಫೌಂಡೇಷನ್, ವಿ.ಎನ್. ಡೆವಲಪರ್ಸ್, ಎಸ್‌ಎಲ್‌ವಿ ಬುಕ್ ಏಜೆನ್ಸಿ, ಲಲಿತ ಇನ್ಫ್ರಾ ಸೆಲ್ಯೂಷನ್ :** ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸ್ಥಳ: ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಎದುರು, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

■ **ಗಾನಭಾರತಿ :** ಶ್ರೀಮತಿ ಸುಗುಣಮ್ಮ ದಯಾಳು ಮತ್ತು ಜಿ. ಮಹಾಲಕ್ಷ್ಮಮ್ಮ ಸಂಸ್ಮರಣಾ ಸಂಗೀತ ಕಛೇರಿ, ವಿದುಷಿ ಸ್ಫೂರ್ತಿರಾವ್ ಅವರಿಂದ ಗಾಯನ, ಸ್ಥಳ: ಗಾನಭಾರತೀ ಸಭಾಂಗಣ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಡಾ. ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಶೈಲೇಶ್‌ರಾಜ್ ಅರಸ್, ಮುಖ್ಯಸ್ಥರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ. ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ– ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಯೋಗೋತ್ಸವ : ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ. 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಸಿ.ವಿ. ಶೃತಿ–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಪಿ. ಎಸ್. ರಂಜನಿ, 12.45 ಕಾದಂಬರಿ ವಿಹಾರ–ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್, 1.20 ಭಾವಗೀತೆಗಳು–ಹಂಸಿನಿ. ಎಸ್.ಕುಮಾರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎನ್.ವಿ. ಸತ್ಯನಾರಾಯಣ–ಕೊಳಲು ವಾದನ, 4.00 ಮಹಿಳಾರಂಗ–ಸಖೀ ಸಂವಾದ, ಪ್ರಸ್ತುತಿ: ಕೆ.ಬಿ. ಮೀನಾ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ–ಮುಂಗಾರಿಗೆ ಸೂಕ್ತವಾದ ಭತ್ತದ ತಳಿಗಳು. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕರಾದ ಡಾ.ಎನ್. ಶಿವಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಕನ್ನಡ ಭಾರತಿ: ಡಾ. ನಾಗರಾಜ ಶರ್ಮಾ ಅವರೊಂದಿಗೆ ಸಂವಾದ. ಸಂದರ್ಶಕರು: ಡಾ. ಮೈಸೂರು ಉಮೇಶ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಎಂ.ಬಾಲಮುರಳೀಕೃಷ್ಣ–ಹಾಡುಗಾರಿಕೆ, 10.00 ತತ್ವ ಸಂಚಾರ : ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 14 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 59 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪತ್ರಿಕಾ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ.ಹೆಚ್.ಸಿ. ಕರಿಯಣ್ಣ ಬಿನ್ ಸಿ.ಕರಿಯಣ್ಣ ಮತ್ತು ಮಂಜುಳ ಗಿರೀಶ್ ವಾಸ: ಕೆಂಗೇರಿ ಉಪನಗರ, ಬೆಂಗಳೂರುರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು, ಅದರ ಮಾಲೀಕರಾದ ಶ್ರೀ ಮಹದೇವಪ್ಪ ಬಿನ್. ಶ್ರೀ ಲೇಟ್ ಕಣ್ಣಿ ಚಾಮಯ್ಯ #871. 26ನೇ ಕ್ರಾಸ್. ವಿದ್ಯಾರಣ್ಯಪುರಂ, ಮೈಸೂರು 570008 (ಶ್ರೀ ಮಹದೇವಪ್ಪ ನವರ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರದ ಸಂಖ್ಯೆ RD5018882834349) ಆಗಿದ್ದು, ಸದರಿ ಮಹದೇವಪ್ಪ ರವರಿಂದ ಖರೀದಿ ಮಾಡಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಸಾರ್ವಜನಿಕರಿಗೆ ಅಥವಾ ಇತರೆ ಯಾವುದೇ ವ್ಯಕ್ತಿಗಳಿಗಾಗಲೀ ಯಾವುದೇ ರೀತಿಯ ಹಕ್ಕು, ಬಾಧ್ಯತೆ, ಹಿತಾಸಕ್ತಿ, ಅಧಿಕಾರ ಅಥವಾ ಯಾವುದೇ ರೀತಿಯ ಕರಾರುಗಳು, ಆಕ್ಷೇಪಣೆ ಗಳು, ಸಿವಿಲ್ ವ್ಯಾಜ್ಯಗಳು ಇದ್ದಲ್ಲಿ ವಕೀಲರ ವಿಳಾಸಕ್ಕೆ ಈ ನೋಟೀಸ್ ಪ್ರಕಟಣೆ ಯಾದ 21 ದಿನಗಳೊಳಗಾಗಿ ದಾಖಲೆ ಸಮೇತ ಸಲ್ಲಿಸತಕ್ಕದ್ದು. ಒಂದು ವೇಳೆ ಸದರಿ ಸಮಯದ ಒಳಗೆ ಯಾವುದೇ ಆಕ್ಷೇಪಣೆಗಳು ಬರದಿದ್ದಲ್ಲಿ, ಸ್ವತ್ತು ಖರೀದಿಸಲು ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಪರಿಗಣಿಸಿ, ನನ್ನ ಕಕ್ಷಿದಾರರು ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತಾರೆ. ಒಂದು ವೇಳೆ ಸದರಿ ಸ್ವತ್ತು ಖರೀದಿಯಾದ ನಂತರ ಯಾವುದೇ ರೀತಿಯ ಆಕ್ಷೇಪಣೆಗಳು ಬಂದಲ್ಲಿ, ಸದರಿ ಆಕ್ಷೇಪಣೆಗಳು ನಮ್ಮ ಕಕ್ಷಿದಾರರಿಗೆ ಬಾಧ್ಯಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಬೇಕಾಗಿ ವಿನಂತಿ.

ಷೆಡ್ಯೂಲ್ ವಿವರ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾಟೂರು ಗ್ರಾಮದ ಸ.ನಂ.243/3ಸಿರ ವಿಸ್ತೀರ್ಣ 1 ಎಕರೆ 8 ಗುಂಟೆ ಭೂಪರಿವರ್ತಿತ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ–ಪಾ.ಪಿ.1, ಪಶ್ಚಿಮಕ್ಕೆ–ಪಾ.ಪಿ.3ಎ,3ಬಿ, ಉತ್ತರಕ್ಕೆ – ಮುರಡಗಳ್ಳಿ ಗಡಿ, ದಕ್ಷಿಣಕ್ಕೆ – ಬ್ಲಾಕ್1

Sd/- **RAMESH M.G.**, B.A.L., LL.B.
Advocate, KAR1848/2019
No. 1411/1, 1st Floor, 6th Cross, Thyagaraja Road, Mysuru, Mob: 9606268696
ಸ್ಥಳ: ಮೈಸೂರು ದಿ: 13–06–2024

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ಲಾಯರ್ ಸರ್, ನನಗೆ ಗಂಡ ಬೇಕು.
ಲಾಯರ್ : ಡೈವೋರ್ಸ್ ಆಗಿ ಆರು ತಿಂಗಳಾಗಿಲ್ಲ. ಮತ್ತೆ ಗಂಡ ಬೇಕು ಅಂತೀಯಲ್ಲಮ್ಮ?
ಹೆಂಡ್ತಿ : ಅವನ ಖುಷಿನಾ ನನ್ನ ಕೈಯಲ್ಲಿ ನೋಡೋಕ್ಕೆ ಆಗ್ತಾ ಇಲ್ಲ?

ಮೈಸೂರು ಮಿತ್ರ

ಶುಕ್ರವಾರ, 14 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸತ್ಯಕ್ಕಾಗಿ ಯಾವುದನ್ನು ಬೇಕಾದರೂ ತ್ಯಾಗ ಮಾಡಿ. ಆದರೆ, ಯಾವುದಕ್ಕೂ ಸತ್ಯವನ್ನು ತ್ಯಾಗ ಮಾಡಬೇಡಿ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತನ್ನ ಮೊಸರನ್ನು ಯಾರೂ ಹುಳಿ ಅನ್ನುವುದಿಲ್ಲ.

ನಿಮ್ಮ ಪತ್ರಗಳು

ಪಂಡಿತ್ ರಾಜೀವ್ ತಾರಾನಾಥ್ ಮಹಾನ್ ಸಾಧಕ

ಮಾನ್ಯರೆ,



ದೇಶ ಮತ್ತು ವಿದೇಶಗಳಲ್ಲಿ ಸರೋದ್ ವಾದಕರಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿ ಮತ್ತು ಮನ್ನಣೆ ಗಳಿಸಿದ್ದ ಪ್ರಖ್ಯಾತ ಸರೋದ್ ವಾದಕ, ಸಂಗೀತ ನಿರ್ದೇಶಕ ಡಾ. ರಾಜೀವ್ ತಾರಾನಾಥ್ ನಮ್ಮನ್ನಗಲಿದ್ದಾರೆ. ಸರೋದ್ ವಾದಕರಾಗಿ ಕೀರ್ತಿಯ ಉತ್ತುಂಗ ಏರಿದ್ದ ಡಾ. ತಾರಾನಾಥ್ ತಮ್ಮ 92ನೇ ವಯಸ್ಸಿನಲ್ಲಿ ಇಹಲೋಕದ ಜಂಜಾಟಗಳಿಗೆ ವಿದಾಯ ಹೇಳಿ ಅನಂತದಲ್ಲಿ ಲೀನವಾಗಿದ್ದಾರೆ. ಒಂದು ಸಾಮಾನ್ಯ ತಂತಿ ವಾದ್ಯಕ್ಕೆ ಜಾಗತಿಕ ಮನ್ನಣೆ ಗಳಿಸಿಕೊಟ್ಟ ಹಿರಿಮೆಗೂ ಸಹ ಅವರು ಪಾತ್ರರಾಗಿದ್ದಾರೆ.

ರಾಯಚೂರು ಜಿಲ್ಲೆಯ ಪಂಡಿತ್ ತಾರಾನಾಥ ಮತ್ತು ಸುಮತಿ ಬಾಯಿ ದಂಪತಿ ಪುತ್ರರಾಗಿ 1932ರ ಅಕ್ಟೋಬರ್ 17 ರಂದು ಜನಿಸಿದ್ದ ಡಾ.ರಾಜೀವ್ ತಾರಾನಾಥ್, ತಮ್ಮ ಪ್ರಾರಂಭಿಕ ಸಂಗೀತ ಪಾಠಗಳನ್ನು ತಮ್ಮ ತಂದೆಯವರಿಂದ ಪಡೆದ ಬಳಿಕ ಕೇವಲ ಒಂಬತ್ತು ವರ್ಷದವರಿದ್ದಾಗಲೇ ತಮ್ಮ ಪ್ರಥಮ ಸಂಗೀತ ಕಛೇರಿ ನೀಡಿ ದಾಖಲೆ ಬರೆದಿದ್ದರು. ತಮ್ಮ 20ನೇ ವಯಸ್ಸಿನಲ್ಲಿ ಆಕಾಶವಾಣಿಯಲ್ಲಿ ಸಂಗೀತಗಾರನಾಗಿ ಹಾಡುತ್ತಿದ್ದರು.

ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಎಂ.ಎ. ಮತ್ತು ಪಿಹೆಚ್.ಡಿ ಪದವಿಗಳನ್ನು ಪಡೆದಿದ್ದ ಡಾ.ರಾಜೀವ್ ತಾರಾನಾಥ್, ಕೆಲಕಾಲ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರೂ ಸಹ, ಸಂಗೀತ ಕ್ಷೇತ್ರದ ಮೇಲಿನ ಸೆಳೆತದಿಂದ ತಮ್ಮ ಉನ್ನತ ಹುದ್ದೆ ತ್ಯಜಿಸಿ ಹೆಚ್ಚಿನ ಸಾಧನೆಗಾಗಿ ಕಲ್ಕತ್ತಾಗೆ ತೆರಳಿ ಅಲ್ಲಿ ಪಂಡಿತ್ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಬಳಿ ಶಿಷ್ಯತ್ವ ಪಡೆದಿದ್ದರು. ನಂತರದ ವರ್ಷಗಳಲ್ಲಿ ಪಂಡಿತ್ ರವಿಶಂಕರ್ ಮತ್ತು ಅನ್ನಪೂರ್ಣ ದೇವಿಯವರ ಬಳಿ ಸಹ ಶಿಷ್ಯತ್ವ ಪಡೆದರು. ಇಡೀ ವಿಶ್ವವೇ ಮೆಚ್ಚಿ ಬೆರಗಾಗುವಂತಹ ಸಂಗೀತ ಕಛೇರಿಗಳನ್ನು ವಿಶ್ವಾದ್ಯಂತ ನಡೆಸಿಕೊಟ್ಟಿದ್ದ ಪಂಡಿತ್ ರಾಜೀವ್ ತಾರಾನಾಥ್, ಓರ್ವ ಶ್ರೇಷ್ಠ ಹಾಗೂ ಸೃಜನಶೀಲ ಸಂಗೀತ ನಿರ್ದೇಶಕರಾಗಿ ಸಹ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ.

ಕನ್ನಡದ ಚಿತ್ರಗಳಾದ 'ಸಂಸ್ಕಾರ', 'ಪಲ್ಲವಿ', 'ಅನುರೂಪ', 'ಆಗಂತುಕ' ಮುಂತಾದ ಚಿತ್ರಗಳಿಗೆ ಹಾಗೂ ಮಲಯಾಳಂನ 'ಕಾಂಚನ ಸೀತಾ' ಎಂಬ ಚಿತ್ರಕ್ಕೆ ಸಹ ಇವರು ಸಂಗೀತ ನೀಡಿದ್ದಾರೆ. ಪದ್ಮಶ್ರೀ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ವಿದ್ವಾನ್ ಸೇರಿದಂತೆ ಹಲವಾರು ಪುರಸ್ಕಾರಗಳಿಗೆ ಭಾಜನರಾಗಿದ್ದ ಪಂಡಿತ್ ರಾಜೀವ್ ನಾಥ್, ತಮ್ಮ ಅಪೂರ್ವ ಮತ್ತು ಅತ್ಯಮೂಲ್ಯ ಕೊಡುಗೆಗಳ ಮೂಲಕ ದೇಶದ ಸಂಗೀತ ಮತ್ತು ಸಾಂಸ್ಕೃತಿಕ ರಾಯಭಾರಿಯಾಗಿದ್ದರು. ಇಂತಹ ಮಹಾನ್ ಸಾಧಕನ ಅಗಲಿಕೆ ಇಡೀ ದೇಶಕ್ಕೆ, ಸಂಗೀತ ಲೋಕಕ್ಕೆ ಹಾಗೂ ಸಂಗೀತ ಪ್ರೇಮಿಗಳಿಗೆ ಅಪಾರವಾದ ನಷ್ಟವನ್ನುಂಟು ಮಾಡಿದೆ. ಅವರ ಆತ್ಮಕ್ಕೆ ಶಾಂತಿ ಕೋರೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದನಗರ, ಮೈಸೂರು

ಮೃತ್ಯುಶೂಲವಾದ ರಸ್ತೆಯ ಗಾಜಿನ ಚೂರುಗಳು




ಮಾನ್ಯರೆ,

ಮೈಸೂರು ನಗರದಲ್ಲಿ ದಿನದಿಂದ ದಿನಕ್ಕೆ ಅಪಘಾತಗಳು ಹೆಚ್ಚಾಗುತ್ತಿದ್ದು, ಅದರಂತೆಯೇ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವುದು ಅತ್ಯಂತ ಅವಶ್ಯಕ. ನಗರದ ಅನೇಕ ಕಡೆಗಳಲ್ಲಿ ಕೆಲವು ಸಂದರ್ಭಗಳಲ್ಲಿ ಅಪಘಾತವಾದಲ್ಲಿ ವಾಹನದ ಗಾಜು ಒಡೆದು ಹೋಗುವುದು ಸರ್ವೇಸಾಮಾನ್ಯ. ಆದರೆ, ಆ ಒಡೆದ ಗಾಜಿನ ಚೂರುಗಳನ್ನು ಕೂಡಲೆ ರಸ್ತೆಯಿಂದ ತೆರವುಗೊಳಿಸುವುದು ಮುಖ್ಯ ಕರ್ತವ್ಯವಾಗಿರುತ್ತದೆ. ಹೆಚ್ಚು ಸಂಚಾರ ದಟ್ಟಣೆಯಿರುವ ಜಾಗಗಳಾದ ಹೆಬ್ಬಾಳು, ಸೂರ್ಯ ಬೇಕರಿ, ಬಸವನಗುಡಿ, ಮೇಟಗಳ್ಳಿ, ರಿಂಗ್‌ರೋಡ್, ದಟ್ಟಗಳ್ಳಿ, ಗಂಗೋತ್ರಿ ರಸ್ತೆ ಸೇರಿದಂತೆ ಬನ್ನಿಮಂಟಪದಂತಹ ಅನೇಕ ಕಡೆಗಳಲ್ಲಿ ರಸ್ತೆ ಅಪಘಾತವಾದಾಗ ವಾಹನದ ಒಡೆದ ಗಾಜಿನ ಚೂರುಗಳು ಬಿದ್ದ ಸ್ಥಳದಲ್ಲಿಯೇ ಬಿದ್ದಿರುತ್ತದೆ. ಅದರ ಮೇಲೆ ಕೆಲವು ವಾಹನಗಳು ಓಡಾಡಿ ಮತ್ತಿನ್ನಷ್ಟು ಚೂರಾಗಿ ಪಾದಚಾರಿಗಳಿಗೆ ಹಾಗೂ ದ್ವಿಚಕ್ರ ವಾಹನ ಸವಾರರಿಗೆ ಮೃತ್ಯು ಕಂಟಕವಾಗಿ ಪರಿವರ್ತನೆಗೊಂಡಿದೆ. ರಸ್ತೆಯಲ್ಲಿ ಕೆಲವೊಮ್ಮೆ ಮೂಕ ಪ್ರಾಣಿಗಳು ಕೂಡ ಓಡಾಡುತ್ತವೆ. ಆ ಚೂರುಗಳ ಮೇಲೆ ಕಾಲಿಟ್ಟರೆ ಕೆಲವೊಮ್ಮೆ ಗಾಯಗಳಾಗಿರುವ ಸಂದರ್ಭಗಳು ಉಂಟು. ಆದ್ದರಿಂದ ಪಾಲಿಕೆಯ ನಿಗದಿತ ವಾರ್ಡಿನ ಅಧಿಕಾರಿಗಳು ಕೂಡಲೇ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ಯಶಸ್. ಆರ್, ಪತ್ರಕರ್ತ, ಮೈಸೂರು.

ಗಾಂಧಿಚೌಕದಲ್ಲಿ ಚರಂಡಿ ನೀರು ಹರಿದು ಕಿರಿಕಿರಿ



ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ಗಾಂಧಿಚೌಕ ವೃತ್ತದಲ್ಲಿರುವ ಸುಮಂಗಲಿ ಸಿಲ್ಕ್ ಮುಂಭಾಗದಲ್ಲಿ ಒಳಚರಂಡಿ ನೀರು ರಸ್ತೆಯ ಮೇಲೆ ಹರಿದು ಗಬ್ಬು ನಾರುತ್ತಿದೆ. ದಿನನಿತ್ಯ ಸಾವಿರಾರು ಜನ ಓಡಾಡುವ ಜನನಿಬಿಡ ರಸ್ತೆಯ ದುಸ್ಥಿತಿ ಈ ರೀತಿ ಇದ್ದರೂ ನಗರಪಾಲಿಕೆ ಆರೋಗ್ಯ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಕೂಡಲೇ ನಗರಪಾಲಿಕೆ ಆಯುಕ್ತರು ಗಮನಹರಿಸಿ ಒಳಚರಂಡಿ ನೀರಿನ ದುರ್ನಾತದಿಂದ ಮುಕ್ತಿ ನೀಡಬೇಕೆಂದು ಮನವಿ.

–ಎಂ. ರಾಮಕೃಷ್ಣ, ಎಸ್‌ಟಿ ಮೋರ್ಚಾ ಅಧ್ಯಕ್ಷ, ಪಡುವಾರಹಳ್ಳಿ, ಮೈಸೂರು.



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಭಾರತದ ಶಾಂತಿಪಾಲನಾ ಪಡೆ ನಾಯಕಿ ಮೇಜರ್ ರಾಧಿಕಾಸೇನ್‌ಗೆ ವಿಶ್ವಸಂಸ್ಥೆ ಪ್ರಶಸ್ತಿ





ಮೇಜರ್ ರಾಧಿಕಾ ಸೇನ್

ಪ್ರಜಾಸತ್ತಾತ್ಮಕ ಗಣರಾಜ್ಯ ಕಾಂಗೋ (ಡಿಆರ್‌ಸಿ) ದಕ್ಷಿಣ ಆಫ್ರಿಕಾದ ಎರಡನೇ ಮತ್ತು ಜಗತ್ತಿನ ಹನ್ನೊಂದನೇ ಅತೀ ದೊಡ್ಡ ದೇಶವಾಗಿದೆ. 1960ರಲ್ಲಿ ಬೆಲ್ಜಿಯಂನಿಂದ ಕಾಂಗೋ ಸ್ವಾತಂತ್ರ್ಯ ಪಡೆಯಿತು. ಅಂದಿನಿಂದ ಈ ದೇಶ ನಿರಂತರವಾಗಿ ರಾಜಕೀಯ ಅಸ್ಥಿರತೆ, ಅರಾಜಕತೆ, ಜನಾಂಗೀಯ ಹಿಂಸೆ, ಅಂತರ್ಯುದ್ಧಗಳಿಂದ ಜರ್ಜರಿತವಾಗಿದೆ. ಶಾಂತಿ ಮರೀಚಿಕೆಯಾಗಿದೆ.

ಸ್ವಾತಂತ್ರ್ಯಾ ನಂತರ ಪ್ರಧಾನಿಯಾದ ಲುಮುಂಬಾರ ಹತ್ಯೆಯೊಂದಿಗೆ 1965ರ ದಂಗೆಯ ನಂತರ ಮೊಬುಟು ಸೇಸೆ ಸೇಕೊರವರು 1997ರಲ್ಲಿ ನಡೆದ ಪ್ರಥಮ ಕಾಂಗೋ ಯುದ್ಧದಲ್ಲಿ ಪದಚ್ಯುತಿಯಾಗುವವರೆಗೆ ಕ್ರೂರ ಸರ್ವಾಧಿಕಾರಿಯಾಗಿ ಆಡಳಿತ ನಡೆಸಿದರು. 1998ರಿಂದ 2003ರವರೆಗೆ ನಡೆದ ಎರಡನೇ ಕಾಂಗೋ ಯುದ್ಧದಲ್ಲಿ ಸುಮಾರು 54 ಲಕ್ಷ ಜನರು ಸಾವಿಗೀಡಾದರು. ಜೋಸೆಫ್ ಕಬೀಲಾ ಅಧ್ಯಕ್ಷರಾಗುವುದರೊಂದಿಗೆ ಯುದ್ಧ ಕೊನೆಗೊಂಡಿತು. ಕಬೀಲಾರ 2001ರಿಂದ 2019ರವರೆಗಿನ ಆಳ್ವಿಕೆಯಲ್ಲಿ ಮಾನವ ಹಕ್ಕಿನ ಉಲ್ಲಂಘನೆ ಭಾರಿ ಪ್ರಮಾಣದಲ್ಲಾಯಿತು. ದೇಶದಲ್ಲಿ ವಿರೋಧಿಗಳ ನಾಪತ್ತೆ, ಚಿತ್ರಹಿಂಸೆ, ನಿರಂಕುಶತೆ, ಬಲವಂತದ ಸೆರೆಮನೆ ಶಿಕ್ಷೆ, ನಾಗರಿಕ ಸ್ವಾತಂತ್ರ್ಯದ ಹನನ ವ್ಯಾಪಕವಾಗಿತ್ತು.

ಕಬಿಲಾ ನಂತರ ಅಧ್ಯಕ್ಷರಾದ ಫೆಲಿಕ್ಸ್ ಟ್ಶಿಸೆಕೆಡಿ ಅವರ ಅವಧಿಯಲ್ಲಿ 2015ರಿಂದ ಉತ್ತರ ಶಿವು ಪ್ರದೇಶ ಸಶಸ್ತ್ರ ಪಡೆಗಳ ಸಂಘರ್ಷದ ತಾಣವಾಗಿದೆ. ಎರಡು ದಶಕಗಳಿಂದ ನಡೆಯುತ್ತಿರುವ ಅಂತರ್ಯುದ್ಧಗಳು, ಸಂಘರ್ಷಗಳಿಂದ ದೇಶದ ಸುಮಾರು 6 ಲಕ್ಷ ಕಾಂಗೋ ಪ್ರಜೆಗಳು ನಿರಾಶ್ರಿತರಾಗಿ ನೆರೆಯ ದೇಶಗಳಲ್ಲಿ ವಾಸಿಸುತ್ತಿದ್ದಾರೆ. ಎರಡು ಮಿಲಿಯ ಮಕ್ಕಳು ಹಸಿವಿನಿಂದ ಸಾಯುವ ಅಪಾಯದಲ್ಲಿದ್ದಾರೆ. ಈ ಅಂತರ್ಯುದ್ಧದಿಂದ 45 ಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ.

ಎರಡನೇ ಮಹಾಯುದ್ಧದ ನಂತರ ಕಾಂಗೋದಲ್ಲಿನ ಯುದ್ಧವನ್ನು ಅತ್ಯಂತ ಭೀಕರ ರಕ್ತ–ಸಿಕ್ತ ಯುದ್ಧವೆಂದು ಪರಿಗಣಿಸಲಾಗಿದೆ. 2009ರಲ್ಲಿ ದಿ ನ್ಯೂಯಾರ್ಕ್ ಟೈಮ್ಸ್ ವರದಿಯಂತೆ ಕಾಂಗೋ ದೇಶದಲ್ಲಿ ಪ್ರತಿ ತಿಂಗಳು ಸುಮಾರು 45 ಸಾವಿರ ಜನರು ಸಾಯುತ್ತಿದ್ದಾರೆ. ಸಾವಿನ ಸಂಖ್ಯೆಯು ವ್ಯಾಪಕವಾದ ರೋಗ ಮತ್ತು ಬರಗಾಲದಿಂದಾಗಿದೆ. ಸಾವನ್ನಪ್ಪಿದವರಲ್ಲಿ ಅರ್ಧದಷ್ಟು ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಎಂಬ ವರದಿಗಳಿವೆ. ಶಸ್ತ್ರಧಾರಿ ಬಂಡುಕೋರ ಗುಂಪುಗಳು ನಾಗರಿಕರನ್ನು ಕೊಲ್ಲುವುದು, ಆಸ್ತಿ ನಾಶ, ವ್ಯಾಪಕ ಲೈಂಗಿಕ ಹಿಂಸೆಯಿಂದ ಸಾವಿರಾರು ಜನರು ವಿಶೇಷವಾಗಿ ಹೆಣ್ಣು ಮಕ್ಕಳು ತಮ್ಮ ವಾಸಸ್ಥಳಗಳಿಂದ ಪಲಾಯನ ಮಾಡುತ್ತಿದ್ದಾರೆ. ಕಾಂಗೋದಲ್ಲಿ ಪ್ರತಿ ವರ್ಷ 40 ಸಾವಿರಕ್ಕೂ ಹೆಚ್ಚು ಹೆಣ್ಮಕ್ಕಳ ಮೇಲೆ ಅನಾಚಾರವಾಗುತ್ತಿವೆ. 2018–19ರಲ್ಲಿ ಕಾಂಗೋದಲ್ಲಿ ವಿಶ್ವದಲ್ಲೇ ಅತ್ಯಧಿಕ ಮಟ್ಟದಲ್ಲಿ ಲೈಂಗಿಕ ದೌರ್ಜನ್ಯ ನಡೆದಿವೆ. 2018ರಲ್ಲಿ ಕಾಂಗೋದ ಸ್ತ್ರೀರೋಗ ತಜ್ಞ ಡೆನಿಸ್ ಮುಕ್ವೆಯವರು ಲೈಂಗಿಕ ಹಿಂಸೆಯನ್ನು ಯುದ್ಧ ಮತ್ತು ಸಶಸ್ತ್ರ ಸಂಘರ್ಷದ ಅಸ್ತ್ರವಾಗಿ ಬಳಸುವುದನ್ನು ಕೊನೆಗೊಳಿಸುವ ಪ್ರಯತ್ನ ಮಾಡಿದ್ದಕ್ಕೆ ನೊಬೆಲ್ ಶಾಂತಿ ಪ್ರಶಸ್ತಿ ಪಡೆದರು.

ಈ ರೀತಿ ಯುದ್ಧ ಪೀಡಿತ ಪ್ರದೇಶಗಳಲ್ಲಿ ಅಂತರ್ಯುದ್ಧಗಳಿಂದ ಜರ್ಜರಿತವಾಗಿರುವ ದೇಶಗಳಲ್ಲಿ ಶಾಂತಿ, ಸುವ್ಯವಸ್ಥೆಗಳ ಮರುಸ್ಥಾಪನೆಗೆ ವಿಶ್ವಸಂಸ್ಥೆಯು ಶಾಂತಿಪಾಲನಾ ಪಡೆಗಳನ್ನು ನಿಯೋಜಿಸುತ್ತದೆ. ಈ ಶಾಂತಿಪಾಲನಾ ಪಡೆಗಳು ಅರಾಜಕತೆ ಇರುವ ದೇಶಗಳಲ್ಲಿ ಪರಸ್ಪರ ಯುದ್ಧ ಮಾಡುತ್ತಿರುವ ಬಂಡುಕೋರ ಪಡೆಗಳ ದಾಳಿಗಳನ್ನು ಹಿಮ್ಮೆಟ್ಟಿಸುವುದು, ಯುದ್ಧೋನ್ಮಾದವನ್ನು ನಿಯಂತ್ರಿಸುವುದು, ನಾಗರಿಕರ ಮಾನ, ಪ್ರಾಣ ರಕ್ಷಿಸಿ ವಲಸೆ ಅಥವಾ ಪಲಾಯನವಾಗದಂತೆ ತಡೆಯುವುದು, ಹಿಂಸೆ ಪೀಡಿತರಿಗೆ ಅವಶ್ಯಕ ವಸ್ತುಗಳನ್ನು ನೀಡಿ ಬದುಕು ಕಟ್ಟಿಕೊಳ್ಳಲು ಅವಕಾಶ ಸುರಕ್ಷೆಯನ್ನು ನೀಡುವಂತಹ ಕಾರ್ಯಗಳನ್ನು ಈ ಶಾಂತಿಪಾಲನಾ ಪಡೆಗಳು ನಿರ್ವಹಿಸುತ್ತವೆ. ಶಾಂತಿಪಾಲನಾ ಪಡೆಗಳು ಸೀಮಿತ ಬಲ ಪ್ರಯೋಗಗಳ ಮೂಲಕ ಶಾಶ್ವತ ಶಾಂತಿಗೆ ಪೂರಕವಾದ ಪರಿಸ್ಥಿತಿಗಳನ್ನು ಸೃಷ್ಟಿಸುತ್ತವೆ. ಯುದ್ಧ ಪೀಡಿತ ಪ್ರದೇಶಗಳಲ್ಲಿ ಸಾವುಗಳನ್ನು ಕಡಿಮೆ ಮಾಡುವುದು. ಯುದ್ಧ ಇತರ ಪ್ರದೇಶಗಳಿಗೆ ವಿಸ್ತರಿಸದಂತೆ ತಡೆಯುವುದು, ಶಾಂತಿಪಾಲಕರು ಸಂಘರ್ಷದ ನಂತರ ಶಾಂತಿ ಪುನಃಸ್ಥಾಪನೆ ಒಪ್ಪಂದಗಳ ಅನುಷ್ಠಾನ, ನಾಗರಿಕ ಸರಕಾರ ಸ್ಥಾಪನೆಗೆ ಪೂರಕ ವಾತಾವರಣ ಕಲ್ಪಿಸುವುದು. ವಿಶ್ವಸಂಸ್ಥೆಯ ಈ ಶಾಂತಿಪಾಲಕ ಸೈನಿಕರು, ಸಾಮಾನ್ಯವಾಗಿ ತಿಳಿ ನೀಲಿ ಬಣ್ಣದ ಬೆರೆಟ್ ಅಥವಾ ಹೆಲ್ಮೆಟ್‌ಗಳನ್ನು ಧರಿಸುವುದರಿಂದ ಇವರನ್ನು ಬ್ಲೂ ಬೆರೆಟ್ಸ್ ಅಥವಾ ಬ್ಲೂ ಹೆಲ್ಮೆಟ್‌ಧಾರಿಗಳು ಎಂದು ಕರೆಯಲಾಗುತದೆ.

ಜಗತ್ತಿನ ಯುದ್ಧಪೀಡಿತ ಹತ್ತಾರು ದೇಶಗಳಲ್ಲಿ ಶಾಂತಿ ಸ್ಥಾಪನೆಗೆ ವಿಶ್ವಸಂಸ್ಥೆಗೆ ಭಾರತೀಯ ಸೇನಾ ಪಡೆಗಳು ಸಹಕಾರ ನೀಡಿವೆ. ಭಾರತೀಯ ಶಾಂತಿಪಾಲನಾ ಪಡೆಗಳು ತಮ್ಮ ಕಾರ್ಯ ವೈಖರಿಯಿಂದ ವಿಶ್ವದ ಗೌರವಕ್ಕೆ ಪಾತ್ರವಾಗಿವೆ.

ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ ಸ್ಥಿರತೆಗಾಗಿ ವಿಶ್ವಸಂಸ್ಥೆ ಕೈಗೊಂಡ ಕಾರ್ಯಾಚರಣೆಯಲ್ಲಿ ಭಾರತೀಯ ಶಾಂತಿಪಾಲನಾ ಪಡೆ ಅದ್ಭುತವಾಗಿ ಕಾರ್ಯನಿರ್ವಹಿಸಿವೆ. ಈ ಶಾಂತಿಪಾಲನಾ ಪಡೆಯ ನೇತೃತ್ವ ವಹಿಸಿರುವ **ಮೇಜರ್ ರಾಧಿಕಾಸೇನ್‌ಗೆ** ವಿಶ್ವಸಂಸ್ಥೆಯ ಪ್ರತಿಷ್ಠಿತ **ಜೆಂಡರ್ ಅಡ್ವೋಕೇಟ್ ಆಫ್ ದಿ ಇಯರ್** (2023) ಪ್ರಶಸ್ತಿಗೆ ಆಯ್ಕೆ ಮಾಡಿತು. ಶಾಂತಿ ಕಾರ್ಯಾಚರಣೆಯ ಮಿಲಿಟರಿ ವ್ಯವಹಾರಗಳ ಕಚೇರಿಯು ಈ ಪ್ರಶಸ್ತಿಯನ್ನು 2016ರಲ್ಲಿ ಆರಂಭಿಸಿತು. ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯ 1325ರ ಶಾಂತಿ ಮತ್ತು ಭದ್ರತೆ ಕುರಿತಾದ ತತ್ವಗಳನ್ನು ಪ್ರೇರೇಪಿಸುವ ಮಹಿಳಾ ಮಿಲಿಟರಿ ಶಾಂತಿ ಪಾಲಕರಿಗೆ ವೈಯಕ್ತಿಕವಾಗಿ ಈ ಪ್ರಶಸ್ತಿ ನೀಡಲಾಗುತ್ತದೆ. ಯುದ್ಧ ಪೀಡಿತ ಪ್ರದೇಶಗಳಲ್ಲಿ ಲೈಂಗಿಕ ಹಿಂಸಾಚಾರದಿಂದ ಮಹಿಳೆಯರು ಮತ್ತು ಯುವತಿಯರನ್ನು ರಕ್ಷಿಸಲು ಮಾಡುವ ಪ್ರಯತ್ನಗಳನ್ನು ಈ ಪ್ರಶಸ್ತಿ ನೀಡುವಾಗ ಗಮನಿಸಲಾಗುತ್ತದೆ.

ಮೇ ರಾಧಿಕಾಸೇನ್ ಜೀವನ ಗಾಥೆ: ಪ್ರಾಕೃತಿಕ ಸೌಂದರ್ಯ ಭೂಮಿಯಾದ ಹಿಮಾಚಲ ಪ್ರದೇಶದಲ್ಲಿ 1993ರಲ್ಲಿ ಮೇಜರ್ ರಾಧಿಕಾ ಸೇನ್ ಜನಿಸಿದರು. ವಿದ್ಯಾರ್ಥಿ ದೆಸೆಯಿಂದಲೇ ಅವರಿಗೆ ಉನ್ನತ ಉದ್ದೇಶ ಮತ್ತು ಜೀವನದಲ್ಲಿ ಏನಾದರೂ ಮಹತ್ವದ ಸಾಧನೆ ಮಾಡಬೇಕೆಂಬ ತುಡಿತ ಹೊಂದಿದ್ದರು. ಮೇ ಸೇನ್‌ರವರು ಜೈವಿಕ ತಂತ್ರಜ್ಞಾನದಲ್ಲಿ ಇಂಜಿನಿಯರ್ ಪದವಿಯ ನಂತರ ಮುಂಬೈನ ಐಐಟಿಯಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ ತನ್ನ ದೇಶಕ್ಕೆ ಸೇವೆ ಸಲ್ಲಿಸಬೇಕೆಂಬ ಮತ್ತು ಜಗತ್ತಿನಲ್ಲಿ ಬದಲಾವಣೆ ತರಬೇಕೆಂಬ ದಿಟ್ಟ ನಿರ್ಧಾರದಿಂದ ಸಶಸ್ತ್ರ ಪಡೆಗಳನ್ನು ಸೇರಿದರು.

ಮೇ. ಸೇನ್‌ರ ಕರ್ಮಭೂಮಿಯಾದ ಕಾಂಗೋ: 2023, ಮಾರ್ಚ್‌ನಲ್ಲಿ ವಿಶ್ವಸಂಸ್ಥೆಯ ಸ್ಟೆಬಿಲೈಸೇಷನ್ ಮಿಷನ್‌ನ ಭಾಗವಾಗಿ ಭಾರತೀಯ ಬೆಟಾಲಿಯನ್‌ನ ಎಂಗೇಜ್‌ಮೆಂಟ್ ಪ್ಲಾಟೂನ್‌ನ ಕಮಾಂಡರ್ ಆಗಿ ಮೇಜರ್ ಸೇನ್‌ರನ್ನು ಯುದ್ಧಪೀಡಿತ ಕಾಂಗೋ ದೇಶಕ್ಕೆ ನಿಯೋಜಿಸಲಾಯಿತು. ಮೇ ಸೇನ್‌ರವರು ಏಪ್ರಿಲ್ 2024ರವರೆಗೆ ಕಾಂಗೋದಲ್ಲಿರುವ ಭೀಕರ ಪರಿಸ್ಥಿತಿಯನ್ನು ಅಪಾರ ಕೌಶಲ್ಯ ಮತ್ತು ಸಮರ್ಪಣಾ ಮನೋಭಾವದಿಂದ ಎದುರಿಸಿದರು. ಯುದ್ಧಗ್ರಸ್ಥ ಉತ್ತರ ಶಿವ್ಲಾ ಪ್ರದೇಶದ ಅತ್ಯಂತ ಸೂಕ್ಷ್ಮ ಸಂವೇದನಾ ವಲಯದಲ್ಲಿ ನಿಯೋಜಿತವಾದ ಭಾರತೀಯ ಕ್ಷಿಪ್ರ ಕಾರ್ಯಾಚರಣಾ ಪಡೆಯ ನೇತೃತ್ವ ವಹಿಸಿ ದೈಹಿಕ ಹಾಗೂ ಭಾವನಾತ್ಮಕ ಸವಾಲಿನಿಂದ ಕೂಡಿದ ಕಾರ್ಯಾಚರಣೆ ನಡೆಸಿದ್ದರು. ನಿರಂತರ ವಿಧ್ವಂಸಕ ಕೃತ್ಯಗಳು ನಡೆಯುತ್ತಿದ್ದ ಈ ಪ್ರದೇಶದಲ್ಲಿ ಬಂಡುಕೋರರ ಪಡೆಗಳ ಮನವೊಲಿಸಿ ಸಂಪರ್ಕ ಜಾಲ ನಿರ್ಮಿಸಿ ಮಹತ್ವದ ಸಾಧನೆ ಮಾಡಿದರು. ಪರಸ್ಪರ ದ್ವೇಷಿಸುತ್ತಿದ್ದ ವಿವಿಧ ಬುಡಕಟ್ಟು ಸಮುದಾಯಗಳ ಪ್ರಮುಖರು, ಯುವಕರು, ಮಹಿಳೆಯರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ತಮ್ಮ ನೋವು, ಸಮಸ್ಯೆಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಸೃಷ್ಟಿಸಿದರು. ಈ ಮೂಲಕ ಬುಡಕಟ್ಟು ಗುಂಪುಗಳ ನಡುವಿನ ದ್ವೇಷದ ಮನೋಭಾವವನ್ನು ತಿಳಿಗೊಳಿಸಲು ಯತ್ನಿಸಿದರು. ಸಮುದಾಯಗಳ ಸಮಸ್ಯೆಗಳನ್ನು ಪರಿಹರಿಸುವ ಪ್ರಾಮಾಣಿಕ ಯತ್ನ ನಡೆಸಿ ಮೇ ಸೇನ್‌ರು ಪ್ಲಾಟೂನ್ ಜನರ ವಿಶ್ವಾಸ ಗಳಿಸಿದರು. ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣ, ವಯಸ್ಕರಿಗೆ ಆರೋಗ್ಯ ಮತ್ತು ವೃತ್ತಿ ಶಿಕ್ಷಣ ನೀಡಿದರು. ಸಮುದಾಯಗಳ ನಡುವೆ ಸಮನ್ವಯ ತರಲು ಸಮುದಾಯ ಜಾಗೃತಿ ಜಾಲಗಳನ್ನು ನಿರ್ಮಿಸಿದರು.

ಪೀಡಿತರಿಗೆ ಸುರಕ್ಷೆ ಮತ್ತು ಮಹಿಳಾ ಸಬಲೀಕರಣ: ಮೇ ಸೇನ್‌ರವರು ಪುರುಷ, ಮಹಿಳೆಯರು ಹಾಗೂ ಮಕ್ಕಳಿಗೆ ಸುರಕ್ಷಿತ ವಾತಾವರಣ ಸ್ಥಾಪಿಸಿದರು. ಸಂಕೀರ್ಣ ಸ್ತ್ರೀ–ಪುರುಷ ಸಂಬಂಧವಿರುವ ಕಾಂಗೋದಲ್ಲಿ ಮೇ ಸೇನ್‌ರು ಪುರುಷ ಹಾಗೂ ಸ್ತ್ರೀಯರ ಜಂಟಿ ಗಸ್ತು ಚಟುವಟಿಕೆ ಪ್ರೋತ್ಸಾಹಿಸಿದರು. ಯುದ್ಧಗ್ರಸ್ಥ ಪ್ರದೇಶಗಳಲ್ಲಿ ಸೌಹಾರ್ದತೆ, ಗೌರವದ ಸಹಬಾಳ್ವೆಯ ಗುಣಗಳನ್ನು ಪ್ರೇರೇಪಿಸಿದರು. ಮೇ ಸೇನ್‌ರು ತಮ್ಮ ಮಿಲಿಟರಿ ಕರ್ತವ್ಯಗಳೊಂದಿಗೆ ಸ್ತ್ರೀಯರು, ಯುವತಿಯರು, ಮಕ್ಕಳಿಗೆ ಸಬಲೀಕರಣದ ಯೋಜನೆಗಳನ್ನು ಜಾರಿಗೊಳಿಸಿದರು. ಜೆಂಡರ್ ಅಡ್ವೋಕೇಟ್ ಆಗಿ ಮೇ ಸೇನ್ ತಮ್ಮ ಸಾಮರ್ಥ್ಯವನ್ನು ಕೇವಲ ಮಿಲಿಟರಿ ಕಾರ್ಯಾಚರಣೆಗಳಿಗೆ ಸೀಮಿತಗೊಳಿಸಲಿಲ್ಲ. ಕಾಂಗೊ ದೇಶದ ಬುಡಕಟ್ಟು ಸಮುದಾಯಗಳಲ್ಲಿ ಅಂತರ್ಗತವಾಗಿದ್ದ ಮೂಢನಂಬಿಕೆ, ಅಪನಂಬಿಕೆಗಳನ್ನು ತೊಡೆದು ಹಾಕುವಲ್ಲಿ ಬಹುಪಾಲು ಯಶಸ್ವಿಯಾದರು.

ಮೇ ರಾಧಿಕಾ ಸೇನ್‌ರ ಕಾರ್ಯದ ಗುರುತಿಸುವಿಕೆ: ಮೇ ಸೇನ್‌ರ ಅನುಪಮ ಸೇವೆ, ಕಾಂಗೊ ದೇಶದಲ್ಲಿ ಜೆಂಡರ್ (ಲಿಂಗ) ಸಮಾನತೆ ಉತ್ತೇಜಿಸಿ ಶಾಂತಿ ಸ್ಥಾಪಿಸಿದ ಕಾರ್ಯವನ್ನು ವಿಶ್ವಸಂಸ್ಥೆ ಗುರುತಿಸಿ ಮೇ 2023ರಲ್ಲಿ ಪ್ರತಿಷ್ಠಿತ ಮಿಲಿಟರಿ ಜೆಂಡರ್ ಅಡ್ವೋಕೇಟ್ ಆಫ್ ದಿ ಇಯರ್ ಪ್ರಶಸ್ತಿಗೆ ಆಯ್ಕೆ ಮಾಡಿತು. 2019ರಲ್ಲಿ ಮೇ ಸುವನ್ ಗವಾನಿ ನಂತರ ಈ ಪ್ರಶಸ್ತಿ ಪಡೆದ ಎರಡನೇ ಭಾರತೀಯ ಮಹಿಳೆ ಎಂಬ ಗೌರವಕ್ಕೆ ಪಾತ್ರರಾದರು. ಕಳೆದ ತಿಂಗಳು ಮೇ ಸೇನ್‌ಗೆ ಪ್ರಶಸ್ತಿ ಪ್ರದಾನಿಸಿದ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟೆರೆಸ್‌ರು, ಮೇ ಸೇನ್‌ಗೆ ಅಭಿನಂದನೆ, ನೀವು ನಿಜವಾದ ನಾಯಕಿ ಮತ್ತು ಆದರ್ಶಪ್ರಾಯರು. ಉತ್ತರ ಶಿವುನಲ್ಲಿ ಉಲ್ಬಣಗೊಳ್ಳುತ್ತಿರುವ ಸಂಘರ್ಷದ ವಾತಾವರಣದಲ್ಲಿ ನಿಮ್ಮ ನೇತೃತ್ವದ ಪಡೆಗಳು ಜನರ ನಂಬಿಕೆ ಗಳಿಸಿವೆ, ಅವರಲ್ಲಿ ವಿಶ್ವಾಸ ಮೂಡಿಸಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು.


ವಿಶ್ವಸಂಸ್ಥೆಯಲ್ಲಿ ಭಾರತದ ಖಾಯಂ ಪ್ರತಿನಿಧಿಯಾಗಿರುವ ರುಚಿರಾ ಕಾಂಬೋಜ್‌ರು ಪ್ರಶಸ್ತಿ ಪಡೆದ ಮೇ ಸೇನ್‌ರನ್ನು ಅಭಿನಂದಿಸುತ್ತಾ "ಅವರ ಸಮರ್ಪಣೆ ಮತ್ತು ಸಾಹಸವು ಉತ್ತಮ ಜಗತ್ತು ನಿರ್ಮಿಸುವಲ್ಲಿ ಮಹಿಳಾ ಶಾಂತಿಪಾಲಕರ ಅಮೂಲ್ಯ ಪಾತ್ರ ಎತ್ತಿ ತೋರಿಸುತ್ತದೆ. ಆಕೆಯ ಸಾಧನೆಗಳ ಬಗ್ಗೆ ನಾವು ಹೆಮ್ಮೆ ಪಡುತ್ತೇವೆ. ಶಾಂತಿ ಮತ್ತು ಸಮಾನತೆಗೆ ಅವರ ಬದ್ಧತೆಯಿಂದ ಪ್ರೇರಿತರಾಗಿದ್ದೇವೆ" ಎಂದು ಕಾಂಬೋಜ್ ನುಡಿದರು.

ಮೇ ರಾಧಿಕಾ ಸೇನ್‌ರ ಸಾಧನೆಗಳು ಮಿಲಿಟರಿ ಸೇರಬೇಕೆಂಬ ಮಹತ್ವಾಕಾಂಕ್ಷೆ ಇರುವ ಯುವತಿಯರಿಗೆ ಪ್ರಬಲ ಸಂದೇಶ ರವಾನಿಸಿದೆ. ಭೀಕರ ಪರಿಸ್ಥಿತಿಯಲ್ಲಿ ಮೇ ಸೇನ್‌ರ ಸಾಹಸಗಾಥೆ ಭರವಸೆ ಮತ್ತು ಸ್ಫೂರ್ತಿಯಾಗಿದೆ. ಜಾಗತಿಕ ಶಾಂತಿ ಮತ್ತು ಭದ್ರತೆಗೆ ಮಹಿಳೆಯರು ಅಮೂಲ್ಯ ಕೊಡುಗೆಗಳನ್ನು ನೀಡಬಹುದು ಎಂಬುದನ್ನು ಮೇ ಸೇನ್ ತೋರಿದ್ದಾರೆ. ಸೇನಾ ಕಾರ್ಯಾಚರಣೆ ಮತ್ತು ಶಾಂತಿ ಸ್ಥಾಪನೆ, ರಚನಾತ್ಮಕ ಕಾರ್ಯಗಳಲ್ಲಿ ಮೇ ಸೇನ್ ಸಾಧಿಸಿದ ಯಶಸ್ಸು ಸೇನೆಯನ್ನು ಸೇರಬೇಕೆಂಬ ಯುವತಿಯರಿಗೆ ಪ್ರೇರಣಾದಾಯಿಯಾಗಿದೆ.

ಶಾಂತಿಪಾಲನಾ ಪಡೆ–ಭಾರತದ ಪಾತ್ರ: ಭಾರತವು ಈವರೆಗೆ ನಲ್ವತ್ತಮೂರು ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದೆ. ವಿಶ್ವಸಂಸ್ಥೆಗೆ ಭಾರತವು 2.53 ಲಕ್ಷ ಮಿಲಿಟರಿ ಸಿಬ್ಬಂದಿಗಳನ್ನು, ಪೊಲೀಸರನ್ನು ನೀಡಿದೆ. 2014ರಲ್ಲಿ ಶಾಂತಿಪಾಲನಾ ಪಡೆಗೆ ಭಾರತವು ಮೂರನೇ ದೊಡ್ಡ ಕೊಡುಗೆದಾರ. 7860 ಸೇನಾ ಸಿಬ್ಬಂದಿಗಳನ್ನು ಹತ್ತು ಯು.ಎನ್. ಶಾಂತಿಪಾಲನಾ ಕಾರ್ಯಾಚರಣೆಯಲ್ಲಿ ನಿಯೋಜಿಸಿತು. ಶಾಂತಿಪಾಲನಾ ಪಡೆಗೆ ಪ್ರಥಮ ಮಹಿಳಾ ಪೊಲೀಸ್ ತಂಡ ನೀಡಿದ ದೇಶ ಭಾರತ. ಶಾಂತಿಪಾಲನ ಕಾರ್ಯಾಚರಣೆಗಳಲ್ಲಿ ಮಹಿಳೆಯರು ಭಾಗವಹಿಸಲು ಭಾರತ ನಿರಂತರವಾಗಿ ಬೆಂಬಲ ನೀಡಿದೆ. ಪ್ರಸ್ತುತ ವಿಶ್ವಸಂಸ್ಥೆಗೆ ಮಹಿಳಾ ಮಿಲಿಟರಿ ಘಟಕ ನೀಡುವಿಕೆಯಲ್ಲಿ ಭಾರತ ಹನ್ನೊಂದನೇ ಸ್ಥಾನದಲ್ಲಿದೆ. ಪ್ರಸ್ತುತ 124 ಭಾರತೀಯ ಮಹಿಳೆಯರು ವಿವಿಧ ಕಾರ್ಯಾಚರಣೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶ್ವಸಂಸ್ಥೆಯ ಅಂದಾಜಿನಂತೆ ಭಾರತವು 1009 ಅಧಿಕಾರಿಗಳೊಂದಿಗೆ ನಾಲ್ಕನೇ ಅತೀ ದೊಡ್ಡ ಪೊಲೀಸ್ ತಂಡ ನೀಡಿದ ದೇಶವಾಗಿದೆ. ಮತ್ತು ಮಹಿಳಾ ಪೊಲೀಸ್ ಅಧಿಕಾರಿಗಳನ್ನು ನೀಡಿದ ದೇಶಗಳಲ್ಲಿ ಮೂರನೇ ಸ್ಥಾನದಲ್ಲಿದೆ. 2017ರ ಫೆಬ್ರವರಿ ಹೊತ್ತಿಗೆ ಯು.ಎನ್. ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಸೇವೆ ಸಲ್ಲಿಸುತ್ತಿರುವಾಗ 163 ಭಾರತೀಯರು ಹುತಾತ್ಮರಾಗಿದ್ದಾರೆ. 16.4.2019ರ ಮಾಹಿತಿಯಂತೆ ವಿಶ್ವಸಂಸ್ಥೆಯು ಭಾರತ ನೀಡಿದ ಸೇನಾ ಸೇವೆಗಳಿಗಾಗಿ ಭಾರತಕ್ಕೆ 38 ಬಿಲಿಯನ್ ಡಾಲರ್ ಶುಲ್ಕ ನೀಡಬೇಕಾಗಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಐದು ಖಾಯಂ ದೇಶಗಳಿಗಿಂತ ಎರಡು ಪಟ್ಟು ಹೆಚ್ಚು ಕೊಡುಗೆಯನ್ನು ಭಾರತ ನೀಡಿದೆ. 1948ರಿಂದ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಗೆ ಸೇನಾ ಪಡೆಗಳನ್ನು ಕಳಿಸಿದ ದೇಶಗಳಲ್ಲಿ ಭಾರತೀಯ ಸೇನೆಯಲ್ಲಿ ಅತೀ ಹೆಚ್ಚು ಸಾವು–ನೋವು ಸಂಭವಿಸಿದೆ.

'ಕಾನೂನಿಗಿಂತ ಯಾರೂ ದೊಡ್ಡವರಲ್ಲ...': ದರ್ಶನ್ ಕೇಸ್ ಉಲ್ಲೇಖಿಸಿ ರಮ್ಯಾ ಪೋಸ್ಟ್



ಬೆಂಗಳೂರು, ಜೂ.13– ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪೊಲೀಸ್ ಕಸ್ಟಡಿಯಲ್ಲಿರುವ ನಟ ದರ್ಶನ್ ವಿಚಾರವಾಗಿ ಸ್ಟಾರ್ ನಟಿ ರಮ್ಯಾ ಮಾತನಾಡಿದ್ದಾರೆ. ಈ ಕುರಿತಾಗಿ ತಮ್ಮ ಇನ್‌ಸ್ಟಾಗ್ರಾಮ್ ಪೇಜ್‌ನಲ್ಲಿ ಸ್ಟೋರಿ ಹಂಚಿಕೊಂಡಿರುವ ರಮ್ಯಾ, ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎಂದು ಬರೆದುಕೊಂಡಿದ್ದಾರೆ. ಅದರೊಂದಿಗೆ ತಮ್ಮ ಜೀವನದಲ್ಲಿ ಟ್ರೋಲ್ ಮಾಡುವವರಿಂದ ಎದುರಿಸಿದ ಕಷ್ಟಗಳು ಹಾಗೂ ಅದನ್ನು ಎದುರಿಸಿದ ರೀತಿಯ ಬಗ್ಗೆ ವಿವರಿಸಿದ್ದಾರೆ. ಕೊನೆಯಲ್ಲಿ ರೇಣುಕಾಸ್ವಾಮಿಯ ಸಾವಿಗೆ ನ್ಯಾಯ ದೊರಕಿಸಿಕೊಡಿ ಎನ್ನುವ ಹ್ಯಾಶ್‌ಟ್ಯಾಗ್‌ಅನ್ನೂ ರಮ್ಯಾ ಬಳಸಿದ್ದಾರೆ.

ಸೋಶಿಯಲ್ ಮೀಡಿಯಾದಲ್ಲಿ ಬ್ಲಾಕ್ ಎನ್ನುವ ಆಪ್ಷನ್ ನೀಡಿರುವುದರ ಹಿಂದೆ ಕಾರಣವಿದೆ. ಬ್ಲಾಕ್ ಮಾಡಿದ್ರೂ ನಿಮ್ಮನ್ನು ಟ್ರೋಲ್ ಮಾಡ್ತಾ ಇದ್ದಾರೆ ಎಂದಾದಲ್ಲಿ ನೀವು ದೂರು ಕೊಡುವ ಅವಕಾಶವೂ ಇದೆ. ಟ್ರೋಲಿಗರು ನನ್ನ ಮೇಲೆ ಏನೇನೆಲ್ಲಾ ಮಾತನಾಡಿದರು. ಅಸಹ್ಯ ಭಾಷೆಗಳನ್ನು ಬಳಸಿ ನಿರಂತರವಾಗಿ ನನ್ನ ಟ್ರೋಲ್ ಮಾಡಿದರು. ನಾನೊಬ್ಬಳಂತಲ್ಲ. ಬೇರೆ ನಟ–ನಟಿಯರನ್ನೂ ಇವರು ಟ್ರೋಲ್ ಮಾಡಿದ್ದಾರೆ. ಹೀರೋ ಹಾಗೂ ಹೀರೋಯಿನ್‌ಗಳ ಮಕ್ಕಳು ಮತ್ತು ಪತ್ನಿಯರನ್ನೂ ಕೂಡ ಬಿಟ್ಟಿಲ್ಲ. ನಾವು ಎಂಥಾ ಕೆಟ್ಟ ಸಮಾಜದಲ್ಲಿ ಬದುಕಿದ್ದೇವೆ. ದೇಶದ ಕಾನೂನು ಪಾಲಿಸುವಂಥ ವ್ಯಕ್ತಿಯಾಗಿ ನಾನು ಇವರ ವಿರುದ್ಧ ಕೇಸ್‌ಗಳನ್ನು ದಾಖಲು ಮಾಡಿದ್ದೇನೆ. ಕೆಲವೊಮ್ಮೆ ಟ್ರೋಲ್ ಮಾಡುವ ವ್ಯಕ್ತಿಗಳಿಗೆ ಪೊಲೀಸರು ನೀಡುವ ಸಣ್ಣ ಪ್ರಮಾಣದ ವಾರ್ನಿಂಗ್ ಕೂಡ ಸಾಕಾಗುತ್ತದೆ. ಆ ಬಳಿಕ ನಾನೂ ಕೂಡ ಅವರ ಮೇಲೆ ಹಾಕಲಾಗಿದ್ದ ಕೇಸ್ ಅನ್ನು ವಾಪಾಸ್ ತೆಗೆದುಕೊಂಡಿದ್ದೇನೆ.

ಟ್ರೋಲ್ ಮಾಡುತ್ತಾರಲ್ಲ ಈ ವ್ಯಕ್ತಿಗಳು ಹೆಚ್ಚಿನವರು ಇನ್ನೂ ಯುವ ಜನಾಂಗ. ಅವರಿಗೆ ಮುಂದೆ ಭವಿಷ್ಯವಿದೆ. ಆದರೆ, ಅನಾಮಿಕ ಸೋಶಿಯಲ್ ಮೀಡಿಯಾ ಹ್ಯಾಂಡಲ್‌ಗಳನ್ನು ಬಳಸಿಕೊಂಡು ಅವರು ಟ್ರೋಲ್ ಮಾಡುವ ಮೂಲಕ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಯಾರಿಗೂ ಕೂಡ ಕಾನೂನು ಕೈಗೆತ್ತಿಕೊಳ್ಳುವ ಅಧಿಕಾರವಿಲ್ಲ. ನಿಮ್ಮನ್ನು ಟ್ರೋಲ್ ಮಾಡಿದವರನ್ನು ಹುಡುಕಿಕೊಂಡು ಹೋಗಿ, ಕೊಲೆ ಮಾಡುವುದನ್ನು ಯಾರೂ ಮಾಡಬಾರದು. ನ್ಯಾಯ ಸಿಗುತ್ತದೆಯೋ ಇಲ್ಲವೋ, ಇಂಥದ್ದಕ್ಕೆಲ್ಲ ಒಂದು ಸಣ್ಣ ದೂರು ಸಾಕಾಗುತ್ತದೆ.

ಈ ಹಂತದಲ್ಲಿ ತಮ್ಮ ಕರ್ತವ್ಯವನ್ನು ನಿಭಾಯಿಸಿದ ಪೊಲೀಸರ ಬಗ್ಗೆ ಗೌರವ ಹಾಗೂ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ಇದೊಂದು ಥ್ಯಾಂಕ್‌ಲೆಸ್ ಜಾಬ್. ಆದರೆ, ತಮ್ಮ ಮಿತಿಯಲ್ಲಿ ಅವರು ಅತ್ಯುತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ರಾಜಕೀಯ ನಾಯಕರ ಒತ್ತಡಕ್ಕೆ ಅವರು ಕುಗ್ಗಬಾರದು ಎಂದು ನಾನು ಬಯಸುತ್ತೇನೆ. ಆ ಮೂಲ ದೇಶದ ಕಾನೂನಿನ ಮೇಲೆ ಸಾಮಾನ್ಯ ಜನರಿಗೆ ವಿಶ್ವಾಸ ಮೂಡಿಸುವಂಥ ಕೆಲಸ ಮಾಡಬೇಕು ಎಂದು ರಮ್ಯಾ ಬರೆದಿದ್ದಾರೆ. ಅದರೊಂದಿಗೆ ಜಸ್ಟೀಸ್ ಫಾರ್ ರೇಣುಕಾಸ್ವಾಮಿ, ದರ್ಶನ್, ಯಡಿಯೂರಪ್ಪ ಹಾಗೂ ಪ್ರಜ್ವಲ್ ರೇವಣ್ಣ ಹ್ಯಾಶ್‌ಟ್ಯಾಗ್‌ಅನ್ನು ಅವರು ಬಳಸಿದ್ದಾರೆ.

ಇಂದು ಮಧ್ಯಾಹ್ನದ ವೇಳೆಗೆ ಟ್ವೀಟ್ ಮಾಡಿದ್ದ ರಮ್ಯಾ, ಕರ್ನಾಟಕ ಪೊಲೀಸರಿಗೆ ಸಲ್ಯೂಟ್ ಎಂದು ಬರೆದುಕೊಂಡಿದ್ದರು. ಆದರೆ, ಯಾವ ವಿಚಾರವಾಗಿ ಅವರು ಟ್ವೀಟ್ ಮಾಡಿದ್ದರು ಎನ್ನುವುದು ಗೊತ್ತಾಗಿರಲಿಲ್ಲ. ರಾತ್ರಿಯ ವೇಳೆಗೆ ಇನ್‌ಸ್ಟಾಗ್ರಾಮ್‌ನಲ್ಲಿ ದರ್ಶನ್ ಕೇಸ್ ವಿಚಾರವಾಗಿ ತಮ್ಮ ನಿಲುವನ್ನು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಜೂನ್ 14 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 59 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 242869
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ತಿರುಮಲದಲ್ಲಿ 'ಓಂ ನಮೋ ವೆಂಕಟೇಶಾಯ' ಘೋಷಣೆ ಮಾತ್ರ ಕೇಳಿಬರಬೇಕು...

● ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಕಟ್ಟಾಜ್ಞೆ ● ತಿರುಮಲ ದೇವಸ್ಥಾನ ಹಿಂದೂಗಳಿಗೆ ಸೇರಿದ್ದು! ● ಶ್ರೀ ಕ್ಷೇತ್ರವನ್ನು ಗಾಂಜಾ, ಮದ್ಯ ಮುಕ್ತಮಾಡಿ, ಶುದ್ಧೀಕರಣ ಮಾಡ್ತೇವೆ!

ತಿರುಪತಿ, ಜೂ.13– ತಿರುಮಲ ದೇವಸ್ಥಾನ ಹಿಂದೂಗಳಿಗೆ ಸೇರಿದ್ದು, ಇಲ್ಲಿ 'ಓಂ ನಮೋ ವೆಂಕಟೇಶಾಯ' ಘೋಷಣೆ ಮಾತ್ರ ಕೇಳಿಬರಬೇಕು ಎಂದು ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಕಟ್ಟಾಜ್ಞೆ ಹೊರಡಿಸಿದ್ದಾರೆ

ಆಂಧ್ರಪ್ರದೇಶ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೇ ಇಂದು ತಿರುಪತಿ–ತಿರುಮಲ ದೇಗುಲಕ್ಕೆ ಕುಟುಂಬ ಸಮೇತರಾಗಿ ಭೇಟಿ ನೀಡಿದ್ದ ಚಂದ್ರಬಾಬು ನಾಯ್ಡು ಅವರು ವೆಂಕಟೇಶ್ವರ ಸ್ವಾಮಿಯ ದರ್ಶನ ಪಡೆದರು.

ಬಳಿಕ ದೇಗುಲದ ಹೊರಗೆ ಬಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಿರುಮಲ ದೇವಸ್ಥಾನ ಹಿಂದೂಗಳಿಗೆ ಸೇರಿದ್ದು, ಇಲ್ಲಿ 'ಓಂ ನಮೋ ವೆಂಕಟೇಶಾಯ' ಘೋಷಣೆ ಮಾತ್ರ ಕೇಳಿಬರಬೇಕು. ತಿರುಮಲ ಪವಿತ್ರ ತಾಣವನ್ನು ವಿಶ್ವದಲ್ಲೇ ಅತ್ಯುತ್ತಮವಾಗಿಸೋಣ. ನಾನು ಬೆಳಗ್ಗೆ ಎದ್ದಾಗ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಒಂದು ನಿಮಿಷ ತುಂಬು ಹೃದಯದಿಂದ ಪ್ರಾರ್ಥಿಸುತ್ತೇನೆ. ಜಗತ್ತಿನಾದ್ಯಂತ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯಗಳನ್ನು ನಿರ್ಮಿಸಲು ಕ್ರಮಕೈಗೊಳ್ಳುತ್ತೇವೆ ಎಂದರು.

ತಿರುಮಲದಿಂದಲೇ ಶುದ್ಧೀಕರಣ ಆರಂಭವಾಗಬೇಕು. ಪ್ರಸಾದ ತಯಾರಿಕೆ ಮತ್ತು ವಿತರಣೆಯಲ್ಲಿನ ದೋಷಗಳು ಮತ್ತು ತಿರುಮಲದ ಶುಚಿತ್ವದ ಬಗ್ಗೆ ವಿಶೇಷ ಗಮನಹರಿಸಿ ಕ್ರಮ ಕೈಗೊಳ್ಳಲಾಗುವುದು. ರಾಜ್ಯದ ಸಮಸ್ತ ಜನತೆಗೆ ಒಳಿತನ್ನು ಮಾಡುವುದೇ ಗುರಿಯಾಗಿದೆ ಎಂದರಲ್ಲದೇ, ಶ್ರೀ ವೆಂಕಟೇಶ್ವರಸ್ವಾಮಿಯ ಆಶೀರ್ವಾದದಿಂದ ನಾನು ಮತ್ತೆ ಸಿಎಂ ಆಗಿದ್ದೇನೆ. ಈ ಹಿಂದಿನ ಸರ್ಕಾರದಲ್ಲಿ ಈ ಕ್ಷೇತ್ರದಲ್ಲಿ ಸಾಕಷ್ಟು ಅನಾಚಾರ



ಗಳು ನಡೆದಿವೆ. ನಮ್ಮ ಸರ್ಕಾರದ ಶುದ್ಧೀಕರಣ ಕಾರ್ಯ ಇಲ್ಲಿಂದಲೇ ಆರಂಭಿಸುತ್ತೇವೆ. ಇನ್ನು ಮುಂದೆ ನಾಯಕರು ಬಂದಾಗ ನೇತಾಡುವ ಪರದೆಗಳು ಮತ್ತು ಮರಗಳು ಇರುವುದಿಲ್ಲ. ತಿರುಮಲದಲ್ಲಿ ಗಾಂಜಾ, ಮದ್ಯ ಮುಕ್ತವಾಗಿ ಸಿಗುವಂತೆ ಮಾಡಲಾಗಿತ್ತು. ಇವುಗಳೆಲ್ಲವನ್ನೂ ಇದೀಗ ನಾವು ನಿರ್ಮೂಲನೆ ಮಾಡುತ್ತೇವೆ. ಕಳೆದುಹೋದ ಮತ್ತು ತೊಂದರೆಗೊಳಗಾದ ಸಮುದಾಯಗಳನ್ನು ನಾವು ಬೆಂಬಲಿಸಬೇಕು. ರಾಜಧಾನಿ ಅಮರಾವತಿ, ಪೋಲಾವರಂ ಯೋಜನೆ ಕುಸಿದಿದೆ. ಅವುಗಳನ್ನು ಪೂರ್ಣಗೊಳಿಸುವ ಗುರಿಯೊಂದಿಗೆ ನಾನು ಕೆಲಸ ಮಾಡುತ್ತೇನೆ ಎಂದರು.

ಕುಟುಂಬಕ್ಕಾಗಿ ಸಮಯ ಮೀಸಲಿಡುತ್ತೇನೆ: ತೆಲುಗು ಜನಾಂಗ ವಿಶ್ವದಲ್ಲೇ ಉನ್ನತ ಮಟ್ಟದಲ್ಲಿರಬೇಕು. ಆರ್ಥಿಕ ಅಸಮಾನತೆ ಹೋಗಲಾಡಿಸುವುದು ತಮ್ಮ ಧ್ಯೇಯ. ಆಂಧ್ರಪ್ರದೇಶವನ್ನು ಬಡತನ ಮುಕ್ತ ರಾಜ್ಯವನ್ನಾಗಿ ಮಾಡಬೇಕು. ಕುಟುಂಬ ವ್ಯವಸ್ಥೆಯು ನಮ್ಮ ಶಕ್ತಿ. ಎಷ್ಟೇ ಕಷ್ಟಗಳು ಬಂದರೂ ಹಂಚಿಕೊಳ್ಳಲು ಕುಟುಂಬಸ್ಥರು ಇರುತ್ತಾರೆ ಎಂದು ತಾವು ಜೈಲಿನಲ್ಲಿದ್ದಾಗ ಕುಟುಂಬದ ಸದಸ್ಯರು ಬೆಂಬಲಕ್ಕೆ ನಿಂತಿದ್ದನ್ನು ಚಂದ್ರಬಾಬು ನಾಯ್ಡು ಸ್ಮರಿಸಿದರು. ಅಂತೆಯೇ ನನ್ನ ಕುಟುಂಬಕ್ಕೆ ನಾನು ಏನನ್ನೂ ಕೊಡಬೇಕಾಗಿಲ್ಲ.

ರಾಜಕೀಯವನ್ನು ಅವಲಂಬಿಸಬಾರದು ಎಂಬ ಉದ್ದೇಶದಿಂದ ಅವರಿಗೆ ವ್ಯಾಪಾರವನ್ನು ಸ್ಥಾಪಿಸಲಾಯಿತು. ಮೊದಲು ಕುಟುಂಬಕ್ಕೆ ಸಮಯ ಮೀಸಲಿಟ್ಟಿರಲಿಲ್ಲ.. ಈಗ ಅವರಿಗಾಗಿ ಕೊಂಚ ಸಮಯ ನೀಡುವ ಪ್ರಯತ್ನ ಮಾಡುತ್ತೇನೆ ಎಂದರು.

ಕೆಲ ಉಸ್ತುವಾರಿ ಸಚಿವರು, ಅಧಿಕಾರಿಗಳ ಬಗ್ಗೆ

ಸಿಎಂ ಅಸಮಾಧಾನ

● ಆಡಳಿತದಲ್ಲಿ ಆಮೂಲಾಗ್ರ ಬದಲಾವಣೆಗೆ ಸೂಚನೆ ● ಸಂಪುಟ ಸಭೆಯಲ್ಲಿ ಉಸ್ತುವಾರಿ ಸಚಿವರು, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ● ಕಳೆದ ಒಂದು ವರ್ಷದ ಆಡಳಿತಕ್ಕೂ ಮುಂದಿನ ಕಾರ್ಯವೈಖರಿಗೂ ವ್ಯತ್ಯಾಸ ಕಾಣಲೇಬೇಕು ● ಇನ್ನು ಜನಪರ, ಜನಸ್ನೇಹಿ ಆಳ್ವಿಕೆಗೆ ಒತ್ತು ನೀಡಿ

ಬೆಂಗಳೂರು, ಜೂ. 13(ಕೆಎಂಶಿ)–ಸರ್ಕಾರದಲ್ಲಿ ಆಮೂಲಾಗ್ರ ಬದಲಾವಣೆ ತಂದು ಜನಪರ ಮತ್ತು ಜನಸ್ನೇಹಿ ಆಡಳಿತ ನೀಡಲು ರಾಜ್ಯ ಸಚಿವ ಸಂಪುಟ ಮಹತ್ವದ ತೀರ್ಮಾನ ಕೈಗೊಂಡಿದೆ. ಆಡಳಿತದಲ್ಲಿ ಮತ್ತಷ್ಟು ಬಿಗಿ ಕ್ರಮ ಕೈಗೊಂಡು ಅರ್ಜಿಗಳ ವಿಲೇವಾರಿಯನ್ನು ತ್ವರಿತವಾಗಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ,



ಸಚಿವರು ಮತ್ತು ಮುಖ್ಯಕಾರ್ಯದರ್ಶಿಗಳಿಗೆ ಆದೇಶ ಮಾಡಿದ್ದಾರೆ.

ಇನ್ನು ಮುಂದೆ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಿ, ಕಡತಗಳಿಗೆ ನಿಗದಿತ ಸಮಯದೊಳಗೆ ವಿಲೇವಾರಿ ಆಗಿ, ಅಭಿವೃದ್ಧಿ ಕೆಲಸಗಳಿಗೆ ತಕ್ಷಣವೇ ಚಾಲನೆ ನೀಡುವಂತೆ ಆದೇಶಿಸಿದ್ದಾರೆ. ಕೆಲವು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಸಭೆಯಲ್ಲೇ ಅಸಮಾಧಾನ ವ್ಯಕ್ತಪಡಿಸಿದ ಮುಖ್ಯಮಂತ್ರಿ ಅವರು, ಸಣ್ಣ ಪುಟ್ಟ ಕೆಲಸಗಳಿಗೂ ಜನರು ರಾಜಧಾನಿಗೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಡಿ, ಸ್ಥಳೀಯವಾಗೇ ಸಮಸ್ಯೆಗಳನ್ನು ಪರಿಹರಿಸಿ ಎಂದಿದ್ದಾರೆ. ಲೋಕಸಭಾ ಚುನಾವಣೆಯ ● 9ನೇ ಪುಟಕ್ಕೆ

ರಾಜ್ಯ ಸರ್ಕಾರಿ ನೌಕರರ 7ನೇ ವೇತನ ಆಯೋಗದ ಶಿಫಾರಸ್ಸು ಜಾರಿ ಜವಾಬ್ದಾರಿ ಮುಖ್ಯಮಂತ್ರಿಗೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಶಿಫಾರಸ್ಸು ಅನ್ವಯ ವೇತನ, ಭತ್ಯೆ ಹಾಗೂ ಸೌಲಭ್ಯಗಳ ಪರಿಷ್ಕರಣೆ ಅಧಿಕಾರವನ್ನು ಮುಖ್ಯಮಂತ್ರಿ ಅವರಿಗೆ ಇಂದಿಲ್ಲಿ ನಡೆದ ಸಂಪುಟ ಸಭೆ ನೀಡಿದೆ. ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಿದರೂ ಅಂತಿಮ ನಿರ್ಧಾರಕ್ಕೆ ಬರಲಾಗಲಿಲ್ಲ. ಸರ್ಕಾರಿ ನೌಕರರಿಗೆ ಜುಲೈ 1ರಿಂದ ವೇತನ ಪರಿಷ್ಕರಣೆ ಮಾಡಬೇಕಿದೆ. ಅದಕ್ಕೂ ಮುನ್ನವೇ ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಅವರು ತೀರ್ಮಾನ ಕೈಗೊಳ್ಳಲಿದ್ದಾರೆ. ಏಳನೇ ವೇತನ ಆಯೋಗದ ಶಿಫಾರಸು ಅನುಷ್ಠಾನ ಉದ್ದೇಶದಿಂದ ಮುಖ್ಯಮಂತ್ರಿ ತಮ್ಮ ಮುಂಗಡಪತ್ರದಲ್ಲಿ 15,431 ಕೋಟಿ ರೂ. ಮೀಸಲಿಟ್ಟಿದ್ದಾರೆ. ನೌಕರರು ● 9ನೇ ಪುಟಕ್ಕೆ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಪೋಕ್ಸೋ ಕೇಸ್‌ನಲ್ಲಿ ಬಂಧನ ಸಾಧ್ಯತೆ

ಬೆಂಗಳೂರು, ಜೂ.13– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪೋಕ್ಸೋ ಕೇಸ್‌ನಲ್ಲಿ ವಿಚಾರಣೆಗೆ ಹಾಜರಾಗಲು



ನೋಟೀಸ್ ಜಾರಿ ಮಾಡಲಾಗಿತ್ತು. ಆದರೆ, ವಿಚಾರಣೆಗೆ ಬರದೇ ಕಾಲಾವಕಾಶ ಕೋರಿದ್ದ ಜೊತೆಗೆ ನಿರೀಕ್ಷಣಾ ಜಾಮೀನು ಪಡೆಯಲು ಅರ್ಜಿ ಸಲ್ಲಿಸಿದ್ದರು. ಆದರೆ, ಈ ಅರ್ಜಿ ತಿರಸ್ಕರಿಸಿದ ಕೋರ್ಟ್ ಜಾಮೀನು ರಹಿತ ವಾರೆಂಟ್ ಜಾರಿ ಮಾಡಿದೆ. ಇದರಿಂದ ಯಡಿಯೂರಪ್ಪ ಬಂಧನ ಸಾಧ್ಯತೆಯಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮನೆಗೆ ಅತ್ಯಾಚಾರ ಸಂತ್ರಸ್ತ ಅಪ್ರಾಪ್ತ ಬಾಲಕಿ ಮತ್ತು ಆಕೆಯ ತಾಯಿ ಕಾನೂನಾತ್ಮಕ ನೆರವು ಕೇಳಲು ಹೋಗಿದ್ದರು. ಈ ವೇಳೆ ಬಾಲಕಿಯೊಬ್ಬಳನ್ನೇ ಕೋಣೆಯೊಳಗೆ ಕರೆದುಕೊಂಡು ಹೋಗಿ ಮಾಹಿತಿ ಪಡೆಯುವುದಾಗಿ ● 9ನೇ ಪುಟಕ್ಕೆ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ಮಂಡ್ಯದಲ್ಲಿ ಭಾನುವಾರ ನಾಗರಿಕ ಸನ್ಮಾನ

ಲಕ್ಷ ಜನ ಭಾಗವಹಿಸುವ ನಿರೀಕ್ಷೆ: ಸಿ.ಎಸ್.ಪುಟ್ಟರಾಜು



ಮಂಡ್ಯದಲ್ಲಿ ಗುರುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು

ಮಂಡ್ಯ, ಜೂ.13– ಇದೇ ಜೂನ್ 16ರ ಭಾನುವಾರದಂದು ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿ, ಪ್ರಧಾನಿ ಮೋದಿ ಸಂಪುಟದಲ್ಲಿ ಉಕ್ಕು ಹಾಗೂ ಭಾರೀ ಕೈಗಾರಿಕಾ ಸಚಿವರಾಗಿರುವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ನಾಗರಿಕ ಸನ್ಮಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಅಂದು ಸಂಜೆ ಐದು ಗಂಟೆಗೆ ನಗರದ ಸರ್‌ಎಂವಿ ಕ್ರೀಡಾಂಗಣದಲ್ಲಿ ನಡೆಯುವ ಬೃಹತ್ ಅಭಿನಂದನಾ ಕಾರ್ಯಕ್ರಮದಲ್ಲಿ ಒಂದು ಲಕ್ಷ ಜನ ಸೇರುವ ನಿರೀಕ್ಷೆ ಇದ್ದು, ಇದೇ ವೇಳೆ ಕುಮಾರಸ್ವಾಮಿ ಅವರು ಎರಡೂವರೆ ಲಕ್ಷ ಮತಗಳ ಅಂತರದಿಂದ ತಮ್ಮನ್ನು ಗೆಲ್ಲಿಸಿದ ಮತದಾರರಿಗೆ ಧನ್ಯವಾದ ಅರ್ಪಿಸಲಿದ್ದಾರೆ ಎಂದು ಹೇಳಿದರು.

ಮಂಡ್ಯ ಲೋಕಸಭಾ ಕ್ಷೇತ್ರದ ಎಂಟು ಕ್ಷೇತ್ರಗಳ ಜೆಡಿಎಸ್ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಇವರ ಜೊತೆಗೆ ಅಂದಿನ ಕಾರ್ಯಕ್ರಮಕ್ಕೆ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ರಾಜ್ಯ ಹಾಗೂ ಜಿಲ್ಲೆಯ ಮುಖಂಡರು ಉಪಸ್ಥಿತರಿರಲಿದ್ದಾರೆ ● 9ನೇ ಪುಟಕ್ಕೆ

ದರ್ಶನ್ ಕೇಸಿನ ತನಿಖಾಧಿಕಾರಿ ಬದಲಾವಣೆ

ದರ್ಶನ್ ಬಂಧಿಸಿದ್ದ ದಕ್ಷ ಇನ್ಸ್‌ಪೆಕ್ಟರ್ ಗಿರೀಶ್ ನಾಯಕ್ ವರ್ಗಾವಣೆ

ಬೆಂಗಳೂರು, ಜೂ.13– ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಮೈಸೂರಿನಲ್ಲಿ ನಟ ದರ್ಶನ್‌ನನ್ನು ಮುಲಾಜಿಲ್ಲದೇ ಬಂಧಿಸಿದ ಕಾಮಾಕ್ಷಿಪಾಳ್ಯ ಠಾಣೆ ಇನ್ಸ್‌ಪೆಕ್ಟರ್ ಗಿರೀಶ್ ನಾಯಕ್ ಅವರನ್ನು ವರ್ಗಾವಣೆ ಮಾಡಿ, ತನಿಖಾಧಿಕಾರಿಯಾಗಿ ಎಸಿಪಿ ಚಂದನ್ ಅವರನ್ನು ನೇಮಕ ಮಾಡಲಾಗಿದ್ದು, ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಚಿತ್ರದುರ್ಗದ ಸಾಮಾನ್ಯ ವ್ಯಕ್ತಿ ರೇಣುಕಾಸ್ವಾಮಿ ಕೊಲೆ ಮಾಡಿದ ನಂತರ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೃತದೇಹ ಬಿಸಾಡಿದ್ದ ಆರೋಪಿಗಳು, ನಂತರ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಸರೆಂಡರ್ ಆಗಿದ್ದರು. ಕಾಮಾಕ್ಷಿಪಾಳ್ಯ ಇನ್ಸ್‌ಪೆಕ್ಟರ್ ಗಿರೀಶ್ ನಾಯ್ಕ್ ಅವರು, ಸರೆಂಡರ್ ಆಗಿದ್ದ ಆರೋಪಿಗಳನ್ನು ವಿಚಾರಣೆ ಮಾಡಿದಾಗ, ನಟ ದರ್ಶನ್‌ನನ್ನು ಉಳಿಸಲು ಹತ್ತಾರು ಕಥೆ ಕಟ್ಟಿದ್ದಾರೆ. ನಂತರ, ಆರೋಪಿಗಳ ಫೋನ್ ಕಾಲ್ ಡಿಟೇಲ್ಸ್ ಮತ್ತಿತರ ತಾಂತ್ರಿಕ ಸಾಕ್ಷ್ಯಗಳ ಪರಿಶೀಲನೆ ಮಾಡಿದಾಗ ಸುಳ್ಳು ಹೇಳುತ್ತಿರುವುದು ತಿಳಿದಿದೆ. ಆಗ ಪೊಲೀಸರು ತಮ್ಮದೇ ಸ್ಟೈಲ್‌ನಲ್ಲಿ ವಿಚಾರಣೆ ಮಾಡಿದಾಗ ನಟ ದರ್ಶನ್ ಮತ್ತು ಆತನ ಹೆಂಡತಿ ಪವಿತ್ರಾಗೌಡ ಪಾತ್ರ ಇರುವುದನ್ನೂ ಬಾಯಿ ಬಿಟ್ಟಿದ್ದಾರೆ.

ನಟ ದರ್ಶನ್ ಹೆಸರೇಳುತ್ತಿದ್ದಂತೆ ಎಚ್ಚೆತ್ತುಕೊಂಡ ಕಾಮಾಕ್ಷಿಪಾಳ್ಯ ಇನ್ಸ್‌ಪೆಕ್ಟರ್ ಗಿರೀಶ್ ನಾಯ್ಕ್ ಅವರು ಹಿರಿಯ ಅಧಿಕಾರಿಗಳ ಮೂಲಕ ಗೃಹ ಸಚಿವರಿಗೆ ಮಾಹಿತಿ ನೀಡಿದ್ದಾರೆ. ಆಗ ಗೃಹ ಸಚಿವರೂ ಕಾನೂನಿನಂತೆ ಕ್ರಮ ವಹಿಸುವಂತೆ ತಿಳಿಸಿದ ನಂತರ, ಸೀದಾ ಮೈಸೂರಿಗೆ ತೆರಳಿ ಬೆಳ್ಳಂಬೆಳಗ್ಗೆ ನಟ ದರ್ಶನ್‌ನನ್ನು ವಶಕ್ಕೆ ಪಡೆದು ಬೆಂಗಳೂರಿಗೆ ಕರೆತಂದಿದ್ದರು. ಇದಾದ ನಂತರ, ಪೊಲೀಸರಿಗೆ ಸಿಕ್ಕ ಸಾಕ್ಷ್ಯಗಳಲ್ಲಿ ರೇಣುಕಾಸ್ವಾಮಿ ಕೊಲೆಯಲ್ಲಿ ನಟ ದರ್ಶನ್ ಕೈವಾಡ ಇರುವುದೂ ತಿಳಿಯುತ್ತಿದ್ದಂತೆ, ಅರೆಸ್ಟ್ ಮಾಡಿದ್ದರು. ನಂತರ ಕಾನೂನು ಪ್ರಕ್ರಿಯೆಯಂತೆ ಮೆಡಿಕಲ್ ಟೆಸ್ಟ್, ಕೋರ್ಟ್ ಪ್ರೊಡ್ಯೂಸ್, ಪೊಲೀಸ್ ಕಸ್ಟಡಿಗೆ ಪಡೆಯುವುದು ಹಾಗೂ ಸ್ಥಳ ಮಹಜರು ಮಾಡುವುದು ಎಲ್ಲ ಕಾರ್ಯವನ್ನೂ ಗಿರೀಶ್ ನಾಯಕ್ ಅವರೇ ಮಾಡಿದ್ದರು. ಆದರೆ, ಈಗ ತನಿಖಾಧಿಕಾರಿಯನ್ನೇ ಬದಲಾವಣೆ ಮಾಡಲಾಗಿದೆ.

ಇಷ್ಟು ದಿನ ಕಾಮಾಕ್ಷಿಪಾಳ್ಯ ಇನ್ಸ್‌ಪೆಕ್ಟರ್ ಗಿರೀಶ್ ನಾಯ್ಕ್ ತನಿಖಾಧಿಕಾರಿಯಾಗಿದ್ದರು. ಇಂದಿನಿಂದ ವಿಜಯನಗರ ಉಪವಿಭಾಗದ ಎಸಿಪಿ ಚಂದನ್ ತನಿಖಾಧಿಕಾರಿಯಾಗಿ ನೇಮಕವಾಗಿದ್ದಾರೆ. ಈ ಹಿಂದೆ ಚುನಾವಣೆ ಹಿನ್ನೆಲೆಯಲ್ಲಿ ಇನ್ಸ್‌ಪೆಕ್ಟರ್ ಗಿರೀಶ್ ನಾಯ್ಕ್ ಅವರು ಕಾಮಾಕ್ಷಿಪಾಳ್ಯಕ್ಕೆ ವರ್ಗಾವಣೆ ಆಗಿದ್ದರು. ಆದರೆ, ಕಳೆದ ಎರಡು ದಿನಗಳ ಹಿಂದೆ ಪುನಃ ವಾಪಸ್ ತಮ್ಮ ಠಾಣೆಗಳಿಗೆ ಹೋಗಲು ಆದೇಶ ಬಂದಿತ್ತು ಹೀಗಾಗಿ ಮುಂದಿನ ತನಿಖೆ ದೃಷ್ಟಿಯಿಂದ ತನಿಖಾಧಿಕಾರಿ ಬದಲಾವಣೆ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಆದರೆ, ಈ ಪ್ರಕರಣದಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದ ಗಿರೀಶ್ ನಾಯಕ್ ಅವರನ್ನೇ ತನಿಖಾಧಿಕಾರಿಯಾಗಿ ಮುಂದುವರೆಸಬಹುದಾಗಿತ್ತು. ಅದಕ್ಕೆ ನಿಯಮದಲ್ಲಿ ಅವಕಾಶವಿದೆ ಎಂದು ಹೇಳುತ್ತಿರುವ ಕೆಲವು, ತನಿಖಾಧಿಕಾರಿ ಬದಲಾವಣೆಯಿಂದ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದರ್ಶನ್ ವಿರುದ್ಧದ ಕೊಲೆ ಪ್ರಕರಣ ಮುಚ್ಚಿಹಾಕಲು ನನ್ನನ್ನು ಯಾರೂ ಸಂಪರ್ಕಿಸಿಲ್ಲ: ಡಿಸಿಎಂ ಡಿಕೆಶಿ

ಬೆಂಗಳೂರು, ಜೂ.13– ನಟ ದರ್ಶನ್ ವಿರುದ್ಧದ ಕೊಲೆ ಪ್ರಕರಣ ಮುಚ್ಚಿಹಾಕಲು ನನ್ನನ್ನು ಯಾರೂ ಸಂಪರ್ಕಿಸಿಲ್ಲ. ಸಚಿವರ ಮಧ್ಯ ಪ್ರವೇಶದ ಬಗ್ಗೆ ವಿಚಾರಿಸುತ್ತೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ದರ್ಶನ್ ಪ್ರಕರಣದಲ್ಲಿ ಪೊಲೀಸ್ ಠಾಣೆಯನ್ನು ಶಾಮಿಯಾನ ಮೂಲಕ ಮುಚ್ಚಲಾಗಿದೆ.



ಈ ಪ್ರಕರಣದಲ್ಲಿ ಸತ್ಯಾಂಶ ಮರೆಮಾಚುವ ಪ್ರಯತ್ನ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನನ್ನ ಪ್ರಕರಣದ ಅನುಭವದಲ್ಲೇ ಹೇಳುವುದಾದರೆ, ಅಧಿಕಾರಿಗಳು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುವಾಗ ಜನರಿಗೆ ಮರೆಮಾಚಿ ಕರೆದುಕೊಂಡು ಹೋಗುವರು. ಕೆಲವು ಬಾರಿ ಅಭಿಮಾನಿಗಳು ಅಡ್ಡಬರುವುದು, ಜೈಕಾರ ಕೂಗುವುದು ಅಥವಾ ಯಾರಾದರೂ ಕಲ್ಲು ಎಸೆಯಬಹುದು ಎಂಬ ಕಾರಣಕ್ಕೆ ಪೊಲೀಸ್ ಅಧಿಕಾರಿಗಳು ಆ ರೀತಿ ಮಾಡುತ್ತಾರೆ. ಈ ಪ್ರಕರಣದಲ್ಲಿ ಪೊಲೀಸರು ಇದೇ ರೀತಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿರಬಹುದು ಎಂದರು.

ದರ್ಶನ ಪ್ರಕರಣ ಮುಚ್ಚಿ ಹಾಕಲು ನಿಮ್ಮ ಸಚಿವರು ಯಾರಾದರೂ ಒತ್ತಡ ಹಾಕಿದ್ದಾರಾ ಎಂಬ ಪ್ರಶ್ನೆಗೆ, ಈ ವಿಚಾರವಾಗಿ ನನ್ನ ಬಳಿ ಯಾರೂ ಮಾತನಾಡಿಲ್ಲ. ನನಗೆ ಅಷ್ಟಾಗಿ ಸಂಪರ್ಕವಿಲ್ಲ. ಸಚಿವರ ಪ್ರಯತ್ನದ ಬಗ್ಗೆ ನಿಮ್ಮಿಂದ ಮಾಹಿತಿ ಬಂದಿದೆ ಈ ಬಗ್ಗೆ ವಿಚಾರಿಸುತ್ತೇನೆ ಎಂದರು.

ಈ ಪ್ರಕರಣವನ್ನು ರಾಜ್ಯ ಸರ್ಕಾರ ಮುಚ್ಚಿಹಾಕಲು ಪ್ರಯತ್ನಿಸಿದರೆ ನಾನು ಮಧ್ಯಪ್ರವೇಶಿಸಬೇಕಾಗುತ್ತದೆ ಎಂಬ ಕುಮಾರಸ್ವಾಮಿ ಅವರ ಎಚ್ಚರಿಕೆ ಬಗ್ಗೆ ಕೇಳಿದಾಗ, ಈಗಲೂ ಅವರು ಮಧ್ಯಪ್ರವೇಶಿಸಲಿ. ಯಾರು ಬೇಕಾದರೂ ಮಧ್ಯಪ್ರವೇಶ ಮಾಡಲಿ ಎಂದರು. ಪೋಕ್ಸೋ ಪ್ರಕರಣದಡಿ ಮಾಜಿ ಸಿಎಂ ಯಡಿಯೂರಪ್ಪ ಅವರ ಬಂಧನಕ್ಕೆ ಕೋರ್ಟ್ ವಾರೆಂಟ್ ಜಾರಿ ಮಾಡಿರುವ ಬಗ್ಗೆ ಕೇಳಿದಾಗ, ನಾನು ಸಭೆಯಲ್ಲಿದ್ದ ಕಾರಣ, ನನಗೆ ಹೆಚ್ಚಿನ ಮಾಹಿತಿ ಇಲ್ಲ. ಗೃಹ ಸಚಿವಾಲಯ ಈ ವಿಚಾರವನ್ನು ನಿಭಾಯಿಸಲಿದೆ ಎಂದರು.

ನಟ ದರ್ಶನ್ ಇರುವ ಪೊಲೀಸ್ ಠಾಣೆ ಸುತ್ತ ಪರದೆ; 144 ಸೆಕ್ಷನ್ ಜಾರಿ

ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಆಕ್ಷೇಪ



ಬೆಂಗಳೂರು, ಜೂ13– ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟ ದರ್ಶನ್ ಮತ್ತಿತರ 12 ಆರೋಪಿಗಳ ತನಿಖೆ ನಡೆಸುತ್ತಿರುವ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಗೆ ನಟ ಕಾಣದಂತೆ ಪರದೆ ಅಳವಡಿಸಿ, ಠಾಣೆಯ 200 ಮೀಟರ್ ವ್ಯಾಪ್ತಿಯಲ್ಲಿ ಗುರುವಾರದಿಂದ ಸೋಮವಾರದವರೆಗೆ 144 ಸೆಕ್ಷನ್ ಜಾರಿಗೊಳಿಸಲಾಗಿದೆ.

ಎಲ್ಲಾ ಆರೋಪಿಗಳ ಪೊಲೀಸ್ ಕಸ್ಟಡಿ ಸೋಮವಾರ ಕೊನೆಗೊಳ್ಳಲಿದೆ. ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಅವರು ಬುಧವಾರ ಠಾಣೆಗೆ ಭೇಟಿ ನೀಡಿದ್ದರು. ದರ್ಶನ್ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ, ಘೋಷಣೆ ಕೂಗಿದ್ದರಿಂದ ತನಿಖೆಯ ಮೇಲೆ ಪರಿಣಾಮ ಬೀರಿತ್ತು. ಅಲ್ಲದೇ ಠಾಣೆಗೆ ಭೇಟಿ ನೀಡುವ ಇತರ ಸಾರ್ವಜನಿಕರಿಗೂ ಸಹ ತೊಂದರೆಯಾಗಿತ್ತು. ಈ ಹಿನ್ನೆಲೆಯಲ್ಲಿ 144 ಸೆಕ್ಷನ್ ಜಾರಿ ಮಾಡಲಾಗಿದೆ ಎನ್ನಲಾಗುತ್ತಿದೆ.

ಪೊಲೀಸ್ ಠಾಣೆ ಸುತ್ತ ಪರದೆ ಅಳವಡಿಸಿ, 144 ಸೆಕ್ಷನ್ ಜಾರಿಗೊಳಿಸಿರುವುದಕ್ಕೆ ಪ್ರತಿಪಕ್ಷ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಪೊಲೀಸ್ ಠಾಣೆಗೆ 144 ಸೆಕ್ಷನ್ ಹಾಕುವುದು ಎಂದರೆ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದುಹೋಗಿದೆ ಎಂಬುದಕ್ಕೆ ನಿದರ್ಶನ. ಮಾಧ್ಯಮದವರನ್ನು ದೂರ ಇಡುವ ಉದ್ದೇಶ ಹಾಗೂ ತಮ್ಮ ವೈಯಕ್ತಿಕ ಹಿತಾಸಕ್ತಿಯ ಚಟುವಟಿಕೆ ಮಾಡುವುದಕ್ಕಾಗಿ ಅಥವಾ ಯಾರನ್ನೋ ಓಲೈಕೆಗೆ 144ನೇ ಸೆಕ್ಷನ್ ಬಳಸಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು.

ಕಾನೂನು ಎಲ್ಲರಿಗೂ ಸಮಾನ. ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡುವುದೇ ಕಾನೂನು. ನಮ್ಮ ಸಂವಿಧಾನದಂತೆ ಕಾನೂನಿನಡಿ ಎಲ್ಲರೂ ಸಮಾನರು. ಆದರೆ, ವಿಐಪಿಯನ್ನು ಕರೆದುಕೊಂಡು ಬಂದ ತಕ್ಷಣ ಪರದೆ ಅಳವಡಿಸಿ, ಮಾಧ್ಯಮದವರ ಮೇಲೆ ಹಲ್ಲೆ ಮಾಡಿ, ಮಾಧ್ಯಮದವರನ್ನು, ಪೊಲೀಸ್ ಠಾಣೆ ಆವರಣಕ್ಕೆ ಬಿಡಲಾರದಂತೆ ವರ್ತಿಸುತ್ತಿದ್ದು, ಇದು ಸರಕಾರ ಯಾವ ರೀತಿ ಆಡಳಿತ ನಡೆಸುತ್ತಿದೆ ಎಂಬುದಕ್ಕೆ ಸಾಕ್ಷಿ ಎಂದು ವಿವರಿಸಿದರು.

ಜನರಿಗೆ ತನಿಖಾ ಸಂಸ್ಥೆ ಪೊಲೀಸ್ ಇಲಾಖೆ ಬಗ್ಗೆ ವಿಶ್ವಾಸ ಕಡಿಮೆ ಆಗಬಾರದು. ಇದು ಪೊಲೀಸ್ ಇಲಾಖೆಯ ಗುರುತರವಾದ ಜವಾಬ್ದಾರಿ ಎಂದು ಅವರು ಇನ್ನೊಂದು ಪ್ರಶ್ನೆಗೆ ಉತ್ತರಿಸಿದರು. ಆ ನಿಟ್ಟಿನಲ್ಲಿ ಎಸ್‌ಐಟಿ, ಪೊಲೀಸ್ ಠಾಣೆಗಳ ನಡವಳಿಕೆ ಜನರಲ್ಲಿ ವಿಶ್ವಾಸ ಮೂಡಿಸುವಂತೆ ಇರಬೇಕು ಎಂದು ಆಶಿಸಿದರು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಹೋಗಿದೆ. ಅಮಾಯಕರ ಕೊಲೆಗಳು ನಡೆಯುತ್ತಿವೆ. ಈಗಿನ ಸರಕಾರದಲ್ಲಿ ನಾವು ಏನು ಮಾಡಿದರೂ ದಕ್ಕಿಸಿಕೊಳ್ಳಬಹುದು, ನಮ್ಮ ಪ್ರಭಾವದಿಂದ ನಾವು ಬಚಾವ್ ಆಗಬಹುದು ಎಂಬ ಭಾವನೆಯಿಂದ ಕ್ಷುಲ್ಲಕ ಕಾರಣಕ್ಕೆ ಕೊಲೆಗಳು ನಡೆಯುತ್ತಿವೆ ಎಂದು ಆರೋಪಿಸಿದ ಅವರು, ರಾಜ್ಯ ಸರ್ಕಾರ ಕಾನೂನು– ಸುವ್ಯವಸ್ಥೆಯನ್ನು ಸರಿಯಾಗಿ ನಿರ್ವಹಿಸಬೇಕು. ಪ್ರತಿಯೊಬ್ಬರ ಮಾನ– ಪ್ರಾಣಕ್ಕೆ ಬಹಳ ದೊಡ್ಡ ಘನತೆ ಇದೆ. ಅಮಾಯಕರ ಪ್ರಾಣಹಾನಿಗೆ ಕಾರಣ ಆದವರ ವಿರುದ್ಧ ಕಾನೂನಿನಡಿ ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕು. ಇನ್ನು ಮುಂದೆ ಅಮಾಯಕರ ಪ್ರಾಣಹಾನಿ ಆಗದಂತೆ ಗೃಹ ಸಚಿವರು ಮತ್ತು ಪೊಲೀಸ್ ಇಲಾಖೆ ತನ್ನ ಕರ್ತವ್ಯ ನಿರ್ವಹಿಸಲಿ ಎಂದು ಒತ್ತಾಯಿಸಿದರು.

ನಾನು, ದರ್ಶನ್ ಗಂಡ–ಹೆಂಡತಿ ಆಗ್ಬೇಕು ಅಂದ್ಳು; ಅದಕ್ಕೆ ಡೈವೋರ್ಸ್ ಕೊಟ್ಟೆ

ಪವಿತ್ರ ಗೌಡ ಮಾಜಿ ಪತಿ ಸಂಜಯ್ ಸಿಂಗ್ ವಿವರಣೆ...

ಬೆಂಗಳೂರು, ಜೂ.13– ನಾನು ಮತ್ತು ದರ್ಶನ್ ಗಂಡ ಹೆಂಡತಿ ಆಗಲು ಇಷ್ಟಪಟ್ಟಿದ್ದೇವೆ. ಅದಕ್ಕೆ ನೀನು ಡಿವೋರ್ಸ್ ಕೊಡು ಎಂದು ಪವಿತ್ರ ಗೌಡ ಕೇಳಿದಳು. ನಾನು ಸರಿ ಎಂದು ಡಿವೋರ್ಸ್ ಕೊಟ್ಟೆ ಎಂದು ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನವಾಗಿರುವ ನಟಿ ಪವಿತ್ರ ಗೌಡ ಮಾಜಿ ಪತಿ ಸಂಜಯ್ ಸಿಂಗ್ ತಿಳಿಸಿದ್ದಾರೆ.

ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ನಾವಿಬ್ಬರು ಜೊತೆಗೆ ಇರಲು ಸಾಧ್ಯವಿಲ್ಲ. ನಾನು ಮತ್ತು ದರ್ಶನ್ ಗಂಡ–ಹೆಂಡತಿ ಆಗಲು ಇಷ್ಟಪಟ್ಟಿದ್ದೇವೆ ಎಂದು ಹೇಳಿದ್ದಳು. ಅದಕ್ಕೆ ನನ್ನಿಂದ ಏನು ಆಗಬೇಕು ಎಂದು ಕೇಳಿದೆ ಅದಕ್ಕೆ ಡಿವೋರ್ಸ್ ಕೊಡು ಎಂದು ಹೇಳಿದ್ದಳು. ನಾನು ಸರಿ ಎಂದು ಡಿವೋರ್ಸ್ ಕೊಟ್ಟೆ, ಬಳಿಕ ಆಕೆ ದರ್ಶನ್ ಜೊತೆ ಜೀವನ ಮಾಡಲು ಶುರು ಮಾಡಿದಳು. ಆ ಬಳಿಕ ಆಕೆ ಮದುವೆ ಆಗಿದ್ದಾಳೋ ಇಲ್ಲವೋ ಗೊತ್ತಿಲ್ಲ. ಯಾಕೆಂದರೆ ನನಗೆ ಅವರ ಮೇಲೆ ಯಾವುದೇ ಆಸಕ್ತಿ ಇಲ್ಲ. ಆದರೆ ಬಹಳ ದಿನಗಳ ಬಳಿಕ ಒಮ್ಮೆ 2017, 2018ರಲ್ಲಿ ಮಗಳನ್ನು ನಾನು ಬೆಂಗಳೂರಿನಲ್ಲಿ ಭೇಟಿಯಾದೆ. ಅದಾದ ನಂತರ ನಾನು ಇಲ್ಲಿಯವರೆಗೂ ಮಗಳನ್ನು ನೋಡಲೇ ಇಲ್ಲ. ಅವರ ಮೂಡ್ ಅನ್ನು ಯಾಕೆ ಹಾಳುಮಾಡಬೇಕು ಅಂತ ಸುಮ್ಮನಾದೆ ಎಂದರು.

ನಾನು ಹಾಗೂ ಪವಿತ್ರಾ ಗೌಡ ದೂರವಾಗಿ 12 ವರ್ಷಗಳಾಗಿವೆ. ನನಗೂ ಅವರಿಗೂ ಯಾವುದೇ ರೀತಿಯ ಸಂಪರ್ಕವಾಗಲಿ, ಸಂಬಂಧವಾಗಲಿ ಇಲ್ಲ. ನಾವಿಬ್ಬರೂ ಬೆಂಗಳೂರಿನಲ್ಲಿಯೇ ಮೊದಲು ಪರಿಚಯವಾಗಿ, ಮದುವೆಯಾದೆವು. ನಾನು ಐಟಿ ಉದ್ಯಮದವನು, ಅವರು ಸಿನಿಮಾ ಕ್ಷೇತ್ರದವರು. ನಮ್ಮಿಬ್ಬರ ನಡುವೆ ಇದೇ ಕಾರಣಕ್ಕೆ ಹೊಂದಾಣಿಕೆ ಕೊರತೆ ಇತ್ತು. ಪರಸ್ಪರರಿಗೆ ಸಮಯ ಕೊಟ್ಟುಕೊಳ್ಳಲು ಸಾಧ್ಯವಾಗಿರಲಿಲ್ಲ. ಹಾಗಾಗಿ ವಿಚ್ಛೇದನ ಪಡೆದುಕೊಂಡೆವು ಎಂದು ಸಂಜಯ್ ಸಿಂಗ್ ಹೇಳಿದರು.

ಮಗಳ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಸಂಜಯ್ ಸಿಂಗ್, ಮಗಳೊಂದಿಗೆ ಬಹಳ ಕಡಿಮೆ ಮಾತನಾಡಿದ್ದೇನೆ. ಈ 12 ವರ್ಷಗಳಲ್ಲಿ ನಾನು ಒಂದೆರಡು ಬಾರಿಯಷ್ಟೇ ನನ್ನ ಮಗಳ ಬಳಿ ಮಾತನಾಡಿದ್ದೇನೆ. ನನ್ನ ಹಾಗೂ ಪವಿತ್ರಾರ ವಿಚ್ಛೇದನಕ್ಕೆ ವೃತ್ತಿ ಬೇರೆಯಾಗಿರುವುದೇ ಮೂಲ ಕಾರಣ ಆಗಿತ್ತು. ಬೇರೆಯೇನಲ್ಲ ಎಂದರು. ನನಗೆ ಪವಿತ್ರ ಗೌಡ ತುಂಬಾ ಚೆನ್ನಾಗಿ ಗೊತ್ತು. ಬೈ ಮಿಸ್ ಇದು ಆಗಿರಬಹುದು. ಅವಳು ಮಾನಸಿಕವಾಗಿ ಬಹಳ ಸ್ಟ್ರಾಂಗ್ ಇದ್ದಾಳೆ. ಹೃದಯದಿಂದ ಬಹಳ ಸಾಫ್ಟ್ ಇದ್ದಾಳೆ. ಏನೋ ತಪ್ಪು ಆಗಿದೆ. ಇಲಿ ಸಾಯಿಸೋಕು ಹಿಂಜರಿಯುತ್ತಿದ್ದ ಹುಡುಗಿ ಅವಳು. ಒಬ್ಬರನ್ನ ಕೊಲೆ ಮಾಡ್ತಾರೆ ಅನ್ನೋದು ಸುಳ್ಳು ಎಂದು ಹೇಳಿದ್ದಾರೆ.

ಆಧುನಿಕ ಕರ್ನಾಟಕದ ಚರಿತ್ರೆಯಲ್ಲಿ ಕ್ರಾಂತಿಯುಂಟು ಮಾಡಿದ ಉಕ್ಕಿನ ಮಹಿಳೆ ಯಶೋಧರ ದಾಸಪ್ಪ

● ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಸ್ಮರಣೆ ● ಯಶೋಧರ ದಾಸಪ್ಪರ ಕುರಿತ ಪುಸ್ತಕ ಬಿಡುಗಡೆ, ಪ್ರಶಸ್ತಿ ಪ್ರದಾನ

ಮೈಸೂರು,ಜೂ.13(ಪಿಎಂ)– ಆಧುನಿಕ ಕರ್ನಾಟಕದ ಚರಿತ್ರೆಯ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಶ್ರೇಷ್ಠ ಮಹಿಳೆ ಯಶೋಧರ ದಾಸಪ್ಪ ಸ್ವಾತಂತ್ರ್ಯ ಚಳುವಳಿಯಲ್ಲಿಯೂ ತೊಡಗಿಸಿಕೊಂಡಿದ್ದ ಉಕ್ಕಿನ ಮಹಿಳೆ ಇವರು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಸ್ಮರಿಸಿದರು.



ಮೈಸೂರಿನ ಜಯನಗರದ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ಗುರುವಾರ ವೈದ್ಯೆ ಡಾ.ಶ್ವೇತಾ ಸದಾನಂದ್ ಅವರಿಗೆ '2024ನೇ ಸಾಲಿನ ಶ್ರೀಮತಿ ಯಶೋಧರ ದಾಸಪ್ಪ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರಿನ ಜಯನಗರದ ಕೋರ್ಟ್ ಸಂಕೀರ್ಣದ ಎದುರು ಇರುವ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ನೇಗಿಲಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘ ಹಾಗೂ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಶ್ರೀಮತಿ ಯಶೋಧರ ದಾಸಪ್ಪ ಅವರ 120ನೇ ಜನ್ಮದಿನದ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ 'ಕರ್ನಾಟಕದ ಮೊದಲ ಮಹಿಳಾ ಮಂತ್ರಿ ಹಾಗೂ ಉಕ್ಕಿನ ಮಹಿಳೆ ಯಶೋಧರ ದಾಸಪ್ಪ' ಪುಸ್ತಕ ಬಿಡುಗಡೆ, ಪ್ರಶಸ್ತಿ ಪ್ರದಾನ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಸರ್ದಾರ್ ವಲ್ಲಭಭಾಯ್ ಪಟೇಲ್ ಅವರನ್ನು ಉಕ್ಕಿನ ಮನುಷ್ಯ ಎಂದು ಕರೆಯುತ್ತಾರೆ. ಅದೇ ರೀತಿಯಲ್ಲಿ ಯಶೋಧರ ದಾಸಪ್ಪ ಸಹ ಉಕ್ಕಿನ ಮಹಿಳೆ. ಯಶೋಧರ ದಾಸಪ್ಪರ ತ್ಯಾಗ ಬಹಳ ದೊಡ್ಡದು. ಇಂದು ತ್ಯಾಗವೆಂದರೆ ಏನೆಂದು ಕೇಳುವ ಕಾಲದಲ್ಲಿದ್ದೇವೆ. ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಸಮಾಜ ಕಲ್ಯಾಣ ಸಚಿವರಾಗಿದ್ದ ಯಶೋಧರ ದಾಸಪ್ಪ ಮಾಡಿದ ತ್ಯಾಗ ದೊಡ್ಡದು. ನಿಜಲಿಂಗಪ್ಪನವರ ಮಂತ್ರಿಮಂಡಲ ಪಾನನಿರೋಧ ನೀತಿಯನ್ನು ಸಡಿಲಗೊಳಿಸಬೇಕೆಂಬ ನಿರ್ಧಾರ ಮಾಡಿದಾಗ ಇದನ್ನು ವಿರೋಧಿಸಿದ ಯಶೋಧರ ದಾಸಪ್ಪ ತಮ್ಮ ಸಚಿವ ಸ್ಥಾನಕ್ಕೇ ರಾಜೀನಾಮೆ ಸಲ್ಲಿಸಿದರು. ಇಂದು ಅಂತಹ ರಾಜಕಾರಣಿಗಳನ್ನು ಕಾಣಲಾಗದು. ಈಗ ಬಹುತೇಕ ಸ್ವಾರ್ಥ ರಾಜಕಾರಣಿಗಳನ್ನು ನೋಡುತ್ತಿದ್ದೇವೆ ಎಂದು ವಿಷಾದಿಸಿದರು.

ಯಶೋಧರ ದಾಸಪ್ಪನವರು ಸ್ವಾತಂತ್ರ್ಯ ಚಳವಳಿಯಲ್ಲಿಯೂ ತೊಡಗಿಸಿಕೊಂಡಿದ್ದರು. ಅವರೊಬ್ಬ ಚರಿತ್ರಾರ್ಹ ಮಹಿಳೆ. ಇಂದು ಅಂತಹವರನ್ನು ಕಾಣುವುದು ಬಹಳ ಕಷ್ಟ ಈ ಪುಸ್ತಕದಲ್ಲಿ 18 ಅಧ್ಯಾಯಗಳಿದ್ದು, ಒಂದೊಂದು ಮಾಹಿತಿಪೂರ್ಣವಾಗಿವೆ. ಲೇಖಕರು ಶ್ರಮ ವಹಿಸಿ ಪುಸ್ತಕ ರಚಿಸಿದ್ದಾರೆ. ಈ ಹಿಂದೆ ಅವರು ಹೆಚ್.ಸಿ.ದಾಸಪ್ಪರ ಕುರಿತು ದೊಡ್ಡ ಗ್ರಂಥವನ್ನು ಬರೆದಿದ್ದರು. ಈಗ ಅವರ ಧರ್ಮಪತ್ನಿ ಯಶೋಧರ ದಾಸಪ್ಪ ಅವರ ಕುರಿತು ಸಣ್ಣ ಪುಸ್ತಕ ಬರೆದಿದ್ದಾರೆ. ಪುಸ್ತಕ ಮೇಲ್ನೋಟಕ್ಕೆ ಚಿಕ್ಕದಿದ್ದರೂ ಚೊಕ್ಕವಾಗಿದೆ. ಇಂಗ್ಲಿಷ್‌ನಲ್ಲಿ 'ಶಾರ್ಟ್ ಅಂಡ್ ಸ್ವೀಟ್' ಎನ್ನುವಂತಹ ಪುಸ್ತಕ ಇದಾಗಿದೆ ಎಂದರು.

ಹೆಚ್.ಸಿ.ದಾಸಪ್ಪ ಹಾಗೂ ಯಶೋಧರ ದಾಸಪ್ಪನವರು ರಾಜಕೀಯ, ಸಾಮಾಜಿಕ ರಂಗದ ದೊಡ್ಡ ವ್ಯಕ್ತಿತ್ವಗಳು. ಇಂದು ಅಂತಹವರನ್ನು ಕಾಣಲು ಸಾಧ್ಯವಿಲ್ಲ ಯಶೋಧರ ದಾಸಪ್ಪರ ಚರಿತ್ರೆಯನ್ನು, ವಿಶೇಷವಾಗಿ ಮಹಿಳೆಯರು ಹೆಚ್ಚಾಗಿ ಓದಬೇಕು. ಇಂದು ಪುರುಷರ ಜೀವನ ಚರಿತ್ರೆ ತಕ್ಕ ಮಟ್ಟಿಗೆ ಲಭಿಸುತ್ತವೆ. ಆದರೆ ಇಂತಹ ಮಹಿಳೆಯರ ಜೀವನ ಚರಿತ್ರೆ ದೊರೆಯುವುದು ಅಪರೂಪ. ಈ ಪುಸ್ತಕದಲ್ಲಿ ಅನೇಕ ಉಪಯುಕ್ತ ವಿಷಯಗಳಿದ್ದು, ಮಾರ್ಗದರ್ಶಕ ಗ್ರಂಥ ಎನ್ನಬಹುದು. ಯಶೋಧರ ದಾಸಪ್ಪ ಅವರದು ಆದರ್ಶ ವ್ಯಕ್ತಿತ್ವ ಅಂತಹ ಒಂದು ವ್ಯಕ್ತಿತ್ವಕ್ಕೆ ನಮ್ಮ ನಮನ ಸಲ್ಲಿಸಬೇಕು. ಅವರು ಒಬ್ಬ ಮಹಾನ್ ಮಹಿಳೆ ಎಂದರೆ ಅತಿಶಯೋಕ್ತಿಯಲ್ಲ ಎಂದು ಸ್ಮರಿಸಿದರು.


ಇದೇ ವೇಳೆ ವೈದ್ಯರು ಹಾಗೂ ಪರಿಸರ ಪ್ರೇಮಿ ಡಾ.ಶ್ವೇತಾ ಸದಾನಂದ್ ಅವರಿಗೆ '2024ನೇ ಸಾಲಿನ ಶ್ರೀಮತಿ ಯಶೋಧರ ದಾಸಪ್ಪ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಇದಕ್ಕೂ ಮುನ್ನ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಸಮಾರಂಭ ಉದ್ಘಾಟಿಸಿದರು.

ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಕಾರ್ಯದರ್ಶಿ ಸರೋಜಾ ತುಳಸಿದಾಸ್, ಮಂಗಳೂರು ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಅಧೀಕ್ಷಕ ಡಾ.ಎ.ಎನ್.ಪ್ರಕಾಶ್‌ಗೌಡ, ಪತ್ರಕರ್ತ ಹಾಗೂ ಕೃತಿಕರ್ತೃ ಎಸ್.ಪ್ರಕಾಶ್ ಬಾಬು, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್, ನೇಗಿಲ ಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ಶೋಭಾ ರಮೇಶ್ ಮತ್ತಿತರರು ಹಾಜರಿದ್ದರು.

ತುಮಕೂರಲ್ಲಿ ಕಲುಷಿತ ನೀರು ಸೇವಿಸಿ ಹಸುಗೂಸು ಸೇರಿ ಆರು ಮಂದಿ ದುರ್ಮರಣ

ಗೃಹ ಸಚಿವ ಡಾ. ಜಿ.ಪರಮೇಶ್ವರ್ ಭೇಟಿ, ಪರಿಶೀಲನೆ

ತುಮಕೂರು, ಜೂ.13– ಮಧುಗಿರಿ ತಾಲೂಕಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ಕಳೆದ ನಾಲ್ಕು ದಿನಗಳಿಂದ ಕಲುಷಿತ ನೀರು ಸೇವಿಸಿ ಅಂಬೆಗಾಲಿಡುವ ಮಗು ಸೇರಿದಂತೆ ಆರು ಮಂದಿ ಸಾವನ್ನಪ್ಪಿದ್ದು, ನೂರಾರು ನಿವಾಸಿಗಳು ವಿವಿಧ ಆಸ್ಪತ್ರೆಗಳಿಗೆ ದಾಖಲಾಗಿದ್ದರಿಂದ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದೆ.



ಚಿಕ್ಕದಾಸಪ್ಪ (76) ಮತ್ತು ಪೆದ್ದಣ್ಣ (74) ಎಂಬ ಇಬ್ಬರು ವಯೋವೃದ್ಧರು ಇಲ್ಲಿನ ಜಿಲ್ಲಾ ಜನರಲ್ ಆಸ್ಪತ್ರೆಯಲ್ಲಿ ನಿನ್ನೆ ರಾತ್ರಿ ಮೃತಪಟ್ಟಿದ್ದಾರೆ. ಮೂವರು ವೃದ್ಧರು, ಮೂವರು ಮಕ್ಕಳು ಸೇರಿದಂತೆ ಹತ್ತು ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗೃಹ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಗುರುವಾರ ಇಲ್ಲಿನ ಆಸ್ಪತ್ರೆಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಮತ್ತು ಜಿಲ್ಲಾ ಸರ್ಜನ್ ಡಾ.ಅಸ್ಗರ್ ಬೇಗ್ ಸಚಿವರ ಜೊತೆಗಿದ್ದರು. ಚಿನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆಯಾಗುವಂತೆ ಕ್ರಮಕೈಗೊಳ್ಳಲು ಸಚಿವರು ಡಿಸಿಗೆ ಸೂಚಿಸಿದರು.

ತಾಲೂಕಿನಾದ್ಯಂತ ಹಲವಾರು ವರ್ಷಗಳಿಂದ ಸ್ವಚ್ಛತೆ ಕಾಣದ ಓವರ್‌ಹೆಡ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವಂತೆ ಎಚ್ಚರಿಕೆ ನೀಡಿದರೂ ಅಧಿಕಾರಿಗಳು ಕ್ರಮಕೈಗೊಂಡಿಲ್ಲ. ಚಿನ್ನೇನಹಳ್ಳಿ ಘಟನೆಗೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಈ ವೇಳೆ ಜೊತೆಗಿದ್ದ ಸಹಕಾರಿ ಸಚಿವ ಕೆ.ಎಸ್.ರಾಜಣ್ಣ ಆರೋಪಿಸಿದರು.

ಕರ್ತವ್ಯಲೋಪದ ಆರೋಪದ ಮೇಲೆ ಪ್ರಭಾರಿ ಪಿಡಿಒ ಬಿ ವಿ ಮುನಿ ರಾಜು ಮತ್ತು ವಾಟರ್‌ಮ್ಯಾನ್ ಎಸ್ ನಾಗರಾಜು ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ಹಲವು ವರ್ಷಗಳಿಂದ ಸ್ವಚ್ಛತೆ ಇಲ್ಲದ ಕಾರಣ ಕಲುಷಿತಗೊಂಡಿದ್ದ ಓವರ್‌ಹೆಡ್ ಟ್ಯಾಂಕ್‌ನಿಂದ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿರುವ ಸ್ಯಾಂಪಲ್‌ಗಳಲ್ಲಿ ಸೋಂಕು ಇರುವುದು ದೃಢಪಟ್ಟಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್ ತಿಳಿಸಿದ್ದಾರೆ.

ಓವರ್‌ಹೆಡ್ ಟ್ಯಾಂಕ್‌ನ ನೀರನ್ನು ಬಳಸದಂತೆ ನಿವಾಸಿಗಳಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಅವರು ಹೇಳಿದರು. ಜೂನ್ 9 ರಂದು ಆರಂಭವಾದ ಲಕ್ಷ್ಮೀದೇವಿ ಮತ್ತು ಕೆಂಪಣ್ಣದೇವರ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ತೊಂದರೆಯುಂಟಾಯಿತು.

ಕೆಲವು ಚಿಕ್ಕ ಮಕ್ಕಳು ಸೇರಿದಂತೆ ಐವತ್ತಕ್ಕೂ ಹೆಚ್ಚು ಜನರು ಜೂನ್ 10ರಂದು ವಾಂತಿ–ಭೇದಿ ದೂರು ನೀಡಲು ಪ್ರಾರಂಭಿಸಿದರು. ವಯಸ್ಸಾದ ಮಹಿಳೆಯರಾದ ಹನುಮಕ್ಕ (85) ಸಾವನ್ನಪ್ಪಿದರು. ಜೂನ್ 11 ರಂದು ನಾಗಮ್ಮ(89), ನಾಗಪ್ಪ(85) ಮೃತಪಟ್ಟಿದ್ದರು. ಮಂಜುನಾಥ್ ಮತ್ತು ಜಯಲಕ್ಷ್ಮಿ ದಂಪತಿಯ ಪುತ್ರಿ ಮೂರು ವರ್ಷದ ಮೀನಾಕ್ಷಿ ಮಧುಗಿರಿ ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ. ಸಂತ್ರಸ್ತರನ್ನು ತಾಲೂಕು ಕೇಂದ್ರ ಮಧುಗಿರಿ ಆಸ್ಪತ್ರೆಗಳಿಗೆ ರವಾನಿಸಿ ಅಲ್ಲಿಂದ ಜಿಲ್ಲಾ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಹು ಅಂಗಾಂಗ ವೈಫಲ್ಯದಿಂದ ವೃದ್ಧರು ಸಾವನ್ನಪ್ಪಿದ್ದಾರೆ ಎಂದು ನಿವಾಸಿ ವೈದ್ಯಾಧಿಕಾರಿ ಡಾ.ಚೇತನ್ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಅಜಿತ್ ಧೋವಲ್ ಮುಂದುವರಿಕೆ

ನವದೆಹಲಿ, ಜೂ.13– ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಗುರುವಾರ ಮಾಜಿ ಐಪಿಎಸ್ ಅಧಿಕಾರಿ ಅಜಿತ್ ಧೋವಲ್ ಅವರನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ (ಎನ್‌ಎಸ್‌ಎ) ಮತ್ತು ಮಾಜಿ ಐಎಎಸ್ ಅಧಿಕಾರಿ ಡಾ.ಪಿ.ಕೆ.ಮಿಶ್ರಾ ಅವರನ್ನು ಪ್ರಧಾನ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಯಾಗಿ ಮರು ನೇಮಕ ಮಾಡಿದೆ.



ಇಬ್ಬರೂ ಅಧಿಕಾರಿಗಳ ನೇಮಕಾತಿಯು ಪ್ರಧಾನಿ ಮೋದಿಯವರ ಅವಧಿಯೊಂದಿಗೆ ಅಥವಾ ಮುಂದಿನ ಆದೇಶದವರೆಗೆ ಸಹ–ಟರ್ಮಿನಸ್ ಆಗಿರುತ್ತದೆ ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ. 10.6.2024 ರಿಂದ ಜಾರಿಗೆ ಬರುವಂತೆ ಅಜಿತ್ ದೋವಲ್, IPS (ನಿವೃತ್ತ) ಅವರನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನಾಗಿ ನೇಮಿಸಲು ಸಂಪುಟದ ನೇಮಕಾತಿ ಸಮಿತಿಯು ಅನುಮೋದನೆ ನೀಡಿದೆ ಎಂದು ಸಿಬ್ಬಂದಿ ಸಚಿವಾಲಯ ಹೊರಡಿಸಿದ ಆದೇಶದಲ್ಲಿ ತಿಳಿಸಿದೆ

ಜೂನ್ 10 ರಿಂದ ಜಾರಿಗೆ ಬರುವಂತೆ ಡಾ.ಪಿ.ಕೆ. ಮಿಶ್ರಾ, ಐಎಎಸ್ (ನಿವೃತ್ತ) ಅವರನ್ನು ಪ್ರಧಾನಮಂತ್ರಿಗಳ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲು ಸಂಪುಟದ ನೇಮಕಾತಿ ಸಮಿತಿಯು ಅನುಮೋದನೆ ನೀಡಿದೆ. ಅವರ ನೇಮಕಾತಿಯು ಪ್ರಧಾನ ಮಂತ್ರಿಯ ಅವಧಿಯೊಂದಿಗೆ ಅಥವಾ ಮುಂದಿನವರೆಗೆ ಸಹ–ಟರ್ಮಿನಸ್ ಆಗಿರುತ್ತದೆ ಎಂದು ಇನ್ನೊಂದು ಆದೇಶದಲ್ಲಿ ತಿಳಿಸಲಾಗಿದೆ.

ಭಾವನಿಂದ ಬಾಮೈದನ ಹತ್ಯೆ ಪ್ರಕರಣ

ಜೈಲಿಗೆ ಹೋಗುವ ಮುನ್ನ ಪ್ರಮುಖ ಆರೋಪಿ ಪ್ರತಿದೂರು ದಾಖಲು

● ಹತ್ಯೆಗೀಡಾದ ಬಾಮೈದ ಸೇರಿ ನಾಲ್ವರ ವಿರುದ್ಧ ಆರೋಪ ● ಬ್ರೆಡ್‌ಗಾಗಿ ನಡೆದ ಜಗಳ ಕೊಲೆಯಲ್ಲಿ ಅಂತ್ಯ

ಮೈಸೂರು, ಜೂ.13– ಬಾವನಿಂದ ಬಾಮೈದನ ಹತ್ಯೆ ಪ್ರಕರಣದ ಪ್ರಮುಖ ಆರೋಪಿ, ಜೈಲಿಗೆ ಹೋಗುವ ಮುನ್ನ ಘಟನೆ ಸಂಬಂಧ ಪ್ರತಿದೂರು ದಾಖಲಿಸಿದ್ದಾನೆ

ಮೈಸೂರಿನ ರಾಮಕೃಷ್ಣನಗರ ಐ ಬ್ಲಾಕ್‌ನಲ್ಲಿ ನಡೆದ ಕೂರ್ಗಳ್ಳಿಯ ಅಭಿಷೇಕ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಬಿ.ರವಿಚಂದ್ರ, ಹತ್ಯೆಯಾದ ತನ್ನ ಬಾಮೈದ ಸೇರಿದಂತೆ ನಾಲ್ಕು ಮಂದಿ ವಿರುದ್ಧ ಬುಧವಾರ ದೂರು ನೀಡಿದ್ದಾನೆ.



ಹತ್ಯೆಗೀಡಾದ ಅಭಿಷೇಕ್



ಆರೋಪಿ ರವಿಚಂದ್ರ

ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ರವಿಚಂದ್ರನನ್ನು ಬುಧವಾರ ಡಿಸ್ಚಾರ್ಜ್ ಮಾಡಿದ ನಂತರ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಘಟನೆ ನಡೆದ ದಿನವೇ ಎಂಎಲ್‌ಸಿ ಮಾಡಿಸಿದ್ದರಿಂದ ಆತ ನೀಡಿದ ದೂರನ್ನು ಪೊಲೀಸರು ಸ್ವೀಕರಿಸಿದ್ದಾರೆ. ಇದರನ್ವಯ ಅಭಿಷೇಕ್ ಸ್ನೇಹಿತ ಗೌತಮ್, ಹತ್ಯೆಯಾದ ಅಭಿಷೇಕ್, ಈತನ ತಂಗಿ ವಿದ್ಯಾ ಹಾಗೂ ತಾಯಿ ಭಾಗ್ಯ ವಿರುದ್ಧ ಪ್ರಕರಣ ದಾಖಲಿಸಿ ಕೊಂಡಿದ್ದಾರೆ. ಬಳಿಕ ಹತ್ಯೆ ಪ್ರಕರಣದ ಆರೋಪಿ ರವಿಚಂದ್ರನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬ್ರೆಡ್‌ಗಾಗಿ ಜಗಳ: ಕೂರ್ಗಳ್ಳಿಯ ಅಭಿಷೇಕ್ ತನ್ನ ತಂಗಿ ವಿದ್ಯಾಳಿಗೆ ಆಕೆ ಗಂಡ ಹಾಗೂ ಮನೆಯವರು ಚಿತ್ರಹಿಂಸೆ ನೀಡುತ್ತಿದ್ದಾರೆಂದು ಜೂ.8ರಂದು ಆ ಬಗ್ಗೆ ವಿಚಾರಿಸಲೆಂದು ಬಂದಾಗ ಅಭಿಷೇಕ್ ಹಾಗೂ ತಾಯಿ ಭಾಗ್ಯ ಅವರ ಮೇಲೆ ಹಲ್ಲೆ ನಡೆಸಿದ್ದರು. ತಂಗಿ ಮೇಲೆ ದೌರ್ಜನ್ಯ ಮುಂದುವರೆಸಿದ್ದಾರೆಂದು ಅದೇ ದಿನ ಮಧ್ಯಾಹ್ನ ಅಭಿಷೇಕ್, ಸ್ನೇಹಿತರಾದ ಗೌತಮ್ ಹಾಗೂ ಕೌಶಿಕ್‌ನೊಂದಿಗೆ ಮತ್ತೆ ಬಂದಾಗ ಗಲಾಟೆಯಾಗಿತ್ತು. ವಿದ್ಯಾ ಗಂಡ ರವಿಚಂದ್ರ ಆತನ ತಮ್ಮ ಕುಮಾರ್, ತಾಯಿ ಶಾರದಾ, ಚಿಕ್ಕಮ್ಮ ಪದ್ಮ ಹಾಗೂ ಆಕೆ ಮಗ ಕಾರ್ತಿಕ್ ಹಲ್ಲೆ ನಡೆಸಿ, ಅಭಿಷೇಕ್‌ನನ್ನು ಹತ್ಯೆ ಮಾಡಿದ್ದರು. ಸ್ನೇಹಿತ ಗೌತಮ್ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಈ ಘಟನೆಯನ್ನು ರವಿಚಂದ್ರ ಬೇರೆಯದೇ ರೀತಿ ಹೇಳಿದ್ದು, ಅಂದು ಬ್ರೆಡ್ ತರಲಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕೆ ಪತ್ನಿ ವಿದ್ಯಾ ಗಲಾಟೆ ಮಾಡಿ, ಮನೆಯವರನ್ನೆಲ್ಲಾ ಅವಾಚ್ಯವಾಗಿ ಬೈದಿದ್ದಳು ಎಂದು ದೂರಿದ್ದಾನೆ.

ರವಿಚಂದ್ರನ ದೂರಿದು: ನಾನು ವಿದ್ಯಾರವರನ್ನು ನಾಲ್ಕೂವರೆ ವರ್ಷಗಳ ಹಿಂದೆ ವಿವಾಹವಾಗಿದ್ದು ನಮಗೆ ಮೂರೂವರೆ ವರ್ಷದ ಗಂಡು ಮಗುವಿದೆ. ಮದುವೆಯಾದ ಒಂದು ವರ್ಷದಿಂದ ಸಣ್ಣ–ಪುಟ್ಟ ವಿಚಾರಗಳಿಗೆ ಜಗಳವಾಗುತ್ತಿದ್ದು, ಅನೇಕ ಬಾರಿ ಹಿರಿಯರ ಸಮ್ಮುಖದಲ್ಲಿ ಸಮಸ್ಯೆ ಬಗೆಹರಿಸಿಕೊಳ್ಳಲು ಪ್ರಯತ್ನಿಸಿದರೂ ಸಫಲವಾಗಿಲ್ಲ. ನನ್ನ ಹೆಂಡತಿ ಸಣ್ಣ–ಪುಟ್ಟ ವಿಚಾರಕ್ಕೆ ಜಗಳ ಮಾಡಿ, ನನಗೆ, ನನ್ನ ತಾಯಿ ಮತ್ತು ತಮ್ಮನಿಗೆ ಕೆಟ್ಟ ಶಬ್ದಗಳಿಂದ ಬೈದು, ಹೊಡೆಯಲು ಯತ್ನಿಸಿದ್ದಳು. ಅದೇ ರೀತಿ ಜೂ.8 ರಂದು ಬೆಳಗ್ಗೆ ಬ್ರೆಡ್ ತಂದು ಕೊಡದ ವಿಚಾರಕ್ಕೆ ಜಗಳ ತೆಗೆದು, ನಮ್ಮ ಮನೆಯವರನ್ನೆಲ್ಲಾ ಕೆಟ್ಟದಾಗಿ ಬೈದಳಲ್ಲದೆ ನನ್ನ ಅಣ್ಣನನ್ನು ಕರೆಸುವುದಾಗಿ ಹೇಳಿದಳು. ಸ್ವಲ್ಪ ಹೊತ್ತಿನಲ್ಲೇ ಆಕೆಯ ಅಣ್ಣ ಮತ್ತು ಅಮ್ಮ ಮನೆಗೆ ಬಂದು ನಮ್ಮನ್ನು ಬೈದು ನಿಮಗೆ ಒಂದು ಗತಿ ಕಾಣಿಸುವುದಾಗಿ ಬೆದರಿಸಿ, ಹೋದರು. ಮತ್ತೆ ಮಧ್ಯಾಹ್ನ 1 ಗಂಟೆಗೆ ಅಭಿಷೇಕ್, ಗೌತಮ್ ಮತ್ತು ಕೌಶಿಕ್ ಬಂದರು. ನಾನು ಬಾಗಿಲು ತೆರೆದಾಗ ಗೌತಮ್ ಏಕಾಏಕಿ ಆತನ ಕೈಯಲ್ಲಿದ್ದ ಪಿಂಗಾಣಿ ಬಟ್ಟಲಿನಿಂದ ನನ್ನ ತಲೆಗೆ ಹೊಡೆದ ಅದೇ ವೇಳೆ ಅಭಿಷೇಕ್ ಕೂಡ ಕೈಗಳಿಂದ ಹಲ್ಲೆ ಮಾಡಿದ. ಆಗ ನಾನೂ ಕೂಡ ಅವರ ಮೇಲೆ ಹಲ್ಲೆ ಮಾಡಿದೆ ಎಂದು ರವಿಚಂದ್ರ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾನೆ.

ಇಂದು ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು, ಜೂ.13(ಬಿಎಲ್‌ಯು)– ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಜೂನ್ 14) ಮೈಸೂರಿಗೆ ಆಗಮಿಸುತ್ತಿದ್ದಾರೆ. ಎರಡು ದಿನ ಮೈಸೂರು ಪ್ರವಾಸ ಕೈಗೊಂಡಿರುವ ಸಿದ್ದರಾಮಯ್ಯ ನಾಳೆ ಸಂಜೆ 4.25 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ.

ನಾಳೆ ರಾತ್ರಿ ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ವಾಸ್ತವ್ಯ ಹೂಡುವರು. ನಾಡಿದ್ದು (ಜೂನ್ 15) ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ರಾಜೀವ್ ಬಳಗ ಆಯೋಜಿಸಿರುವ ಲಕ್ಷ ವೃಕ್ಷ ಕಾರ್ಯಕ್ರಮವನ್ನು ಸಿದ್ದರಾಮಯ್ಯ ಉದ್ಘಾಟಿಸುವರು. ತರುವಾಯ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ರಾತ್ರಿ 8 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ತಕ್ಷಣಕ್ಕೆ ದರ್ಶನ್ ಬ್ಯಾನ್ ಸಾಧ್ಯವಿಲ್ಲ, ಆರೋಪ ಸಾಬೀತಾದರೆ ಕ್ರಮ

ಫಿಲಂ ಚೇಂಬರ್ ಸಭೆ ನಂತರ ಅಧ್ಯಕ್ಷ ಎನ್.ಎಂ.ಸುರೇಶ್ ಹೇಳಿಕೆ



ಫಿಲ್ಮ್ ಚೇಂಬರ್ ಸಭೆಯಲ್ಲಿ ಅಧ್ಯಕ್ಷ ಎನ್.ಎಂ.ಸುರೇಶ್ ಮಾತನಾಡುತ್ತಿರುವುದು.

ಬೆಂಗಳೂರು, ಜೂ.13– ಆರೋಪಿ ನಟ ದರ್ಶನ್ ಅವರನ್ನು ಚಿತ್ರರಂಗದಿಂದ ಬ್ಯಾನ್ ಮಾಡುವುದು ಹಾಗೂ ಅಸಹಕಾರ ನೀಡುವುದರ ಬಗ್ಗೆ ಯಾವುದೇ ನಿರ್ಧಾರ ಮಾಡಿಲ್ಲ. ಆರೋಪ ಸಾಬೀತಾದರೆ ಅಸಹಕಾರ ನೀಡುವ ವಿಚಾರವಾಗಿ ನಿರ್ಧಾರ ಮಾಡಲಾಗುತ್ತದೆ ಎಂದು ಫಿಲ್ಮ್ ಚೇಂಬರ್ ಅಧ್ಯಕ್ಷ ಎನ್.ಎಂ.ಸುರೇಶ್ ತಿಳಿಸಿದ್ದಾರೆ.

ಫಿಲ್ಮ್ ಚೇಂಬರ್‌ನಲ್ಲಿ ಪದಾಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಪ್ರಕರಣವನ್ನು ನಾವು ಖಂಡಿಸುತ್ತೇವೆ. ಅವರನ್ನು ತಕ್ಷಣಕ್ಕೆ ಬ್ಯಾನ್ ಮಾಡಲು ಆಗುವುದಿಲ್ಲ. ಬ್ಯಾನ್ ಮಾಡಲು, ಕಲಾವಿದರ ಸಂಘ ಹಾಗೂ ಇತರ ಅಂಗ ಸಂಸ್ಥೆಗಳು ಭಾಗಿಯಾಗಬೇಕು ಎಂದು ಅವರು ಹೇಳಿದ್ದಾರೆ. ಈ ಪ್ರಕರಣದ ತನಿಖೆಯನ್ನು ಪೊಲೀಸರು ನಡೆಸುತ್ತಿದ್ದಾರೆ. ಕೊಲೆ ಪ್ರಕರಣ ಇದ್ದಾಗ ನಾವು ಎಂಟ್ರಿ ಆಗಲು ಆಗುವುದಿಲ್ಲ. 2011 ರಲ್ಲಿ ಅವರಿಗೆ ಸಂಬಂಧಿಸಿದ ಸಮಸ್ಯೆಯನ್ನು ಸರಿದೂಗಿಸಿದ್ದೆವು. ಅದು ಕುಟುಂಬದ ವಿಚಾರವಾಗಿತ್ತು. ಈಗ ನಾವು ಎಂಟ್ರಿಯಾಗಲು ಸಾಧ್ಯವಿಲ್ಲ. ಕಾನೂನಿನ ತೀರ್ಪು ಬಂದಾಗ ಕೂಡಲೇ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಅವರು ಹೇಳಿದ್ದಾರೆ.

ದರ್ಶನ್ ಅವರ ಒಂದು ಸಿನಿಮಾ ಅರ್ಧಕ್ಕೆ ನಿಂತಿದೆ. ಐದಾರು ತಿಂಗಳು ದರ್ಶನ್ ಪ್ರಕರಣದಿಂದ ಹೊರಬರಲು ಸಾಧ್ಯವಿಲ್ಲ. ಮುಂದೆ ಸಿನಿಮಾಗಳೂ ಘೋಷಣೆ ಆಗಿದೆ. ಕೆಲವರು ಅಡ್ವಾನ್ಸ್ ಕೊಟ್ಟಿದ್ದಾರೆ. ಹೀಗಾಗಿ ಬ್ಯಾನ್ ಅಷ್ಟು ಸುಲಭವಲ್ಲ. ನಾವು ರಕ್ಷಿಸುವ ಕೆಲಸ ಮಾಡುತ್ತಿಲ್ಲ. ಆದರೆ ಪ್ರಕರಣ ತನಿಖೆ ಹಂತದಲ್ಲಿದೆ ಎಂದು ಅವರು ತಿಳಿಸಿದ್ದಾರೆ.

ದರ್ಶನ್ ಅಭಿಮಾನಿಗಳು ಪ್ರಚೋದನೆಗೊಳಿಸುವ ಕಾಮೆಂಟ್ಸ್ ಹಾಗೂ ಸ್ಟೇಟಸ್ ಹಾಕುವುದನ್ನು ನಿಲ್ಲಿಸಬೇಕು. ಇದರಿಂದ ಏನಾಗುತ್ತೆ ನೋಡ್ತಿದ್ದೀರಿ. ಫ್ಯಾನ್ಸ್‌ಗಳು ಇಂತಹ ವಿಚಾರಗಳನ್ನು ಅರ್ಥ ಮಾಡಿಕೊಳ್ಳಬೇಕು ಎಂದು ದರ್ಶನ್ ಅಭಿಮಾನಿಗಳಿಗೆ ಸಲಹೆ ನೀಡಿದ್ದಾರೆ.

ರೇಣುಕಾಸ್ವಾಮಿ ಕೊಲೆ ಕೇಸ್: ಚಿತ್ರದುರ್ಗ ಕಾರು ಚಾಲಕ ರವಿಕುಮಾರ್ ಪೊಲೀಸರಿಗೆ ಶರಣು

ಬಾಡಿಗೆಗೆಂದು ಕರೆದೊಯ್ದು ಸಂಕಷ್ಟಕ್ಕೆ ಸಿಲುಕಿಸಿದರೆಂದು ಅಳಲು

ಚಿತ್ರದುರ್ಗ, ಜೂ.13–ಚಿತ್ರದುರ್ಗದ ರೇಣುಕಾಸ್ವಾಮಿ ಅಪಹರಣ ಹಾಗೂ ಕೊಲೆ ಪ್ರಕರಣದ 8ನೇ ಆರೋಪಿ, ಕಾರು ಚಾಲಕ ರವಿಕುಮಾರ್ ಚಿತ್ರದುರ್ಗ ಪೊಲೀಸರ ಮುಂದೆ ಶರಣಾಗಿದ್ದಾನೆ.

ಬಾಡಿಗೆಗೆ ಅಂತ ಹೇಳಿ ನನ್ನನ್ನು ರಾಘವೇಂದ್ರ ಮತ್ತು ಜಗದೀಶ್ ಕರೆಸಿಕೊಂಡು ಸಂಕಷ್ಟಕ್ಕೆ ಸಿಲುಕಿಸಿದ್ದಾರೆ ಎಂದು ರವಿಕುಮಾರ್ ಅಳಲು ತೋಡಿಕೊಂಡಿದ್ದಾನೆ. ದರ್ಶನ್ ಭೇಟಿಗೆಂದು ಹೇಳಿ ರೇಣುಕಾಸ್ವಾಮಿ ಕರೆದುಕೊಂಡು ಬಂದಿದ್ದರು. ರೇಣುಕಾಸ್ವಾಮಿ ಖುಷಿಯಿಂದಲೇ ಕಾರಿನಲ್ಲಿ ಬಂದಿದ್ದ ಎಂದು ರವಿ ಪೊಲೀಸರ ಮುಂದೆ ತಿಳಿಸಿದ್ದಾನೆ.

ಈ ಪ್ರಕರಣದಲ್ಲಿ ತನ್ನ ಹೆಸರಿರುವುದು ತಿಳಿಯುತ್ತಿದ್ದಂತೆಯೇ ಇಂದು ಚಿತ್ರದುರ್ಗ ಟ್ಯಾಕ್ಸಿ ಮಾಲೀಕರ ಸಂಘಕ್ಕೆ ತೆರಳಿದ ರವಿಕುಮಾರ್, ರಾಘವೇಂದ್ರ ಮತ್ತು ಜಗದೀಶ್ ಬಾಡಿಗೆಗೆಂದು ನನ್ನನ್ನು ಕರೆದುಕೊಂಡು ಹೋಗಿ ಇಕ್ಕಟ್ಟಿಗೆ ಸಿಕ್ಕಿಸಿದ್ದಾರೆ ಎಂದು ಅಲವತ್ತುಕೊಂಡಿದ್ದಲ್ಲದೇ, ರೇಣುಕಾಸ್ವಾಮಿಯನ್ನು ಇವರು ಕೊಲೆ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ರಾಘವೇಂದ್ರ ಮತ್ತು ಜಗದೀಶ್ ಅವನನ್ನು ಆಟೋದಲ್ಲಿ ಕರೆದುಕೊಂಡು ಬಂದು ಕುಂಚಿಗಗಾಳ ಬಳಿ ಕಾರಿಗೆ ಹತ್ತಿಸಿಕೊಂಡರು. ಆಗ ರೇಣುಕಾಸ್ವಾಮಿ ಖುಷಿಯಿಂದಲೇ ಕಾರಿನಲ್ಲಿ ಬಂದಿದ್ದಾನೆ ಎಂದು ರವಿಕುಮಾರ್ ಟ್ಯಾಕ್ಸಿ ಮಾಲೀಕರ ಸಂಘದಲ್ಲಿ ತಿಳಿಸಿದ್ದಾನೆ. ನಂತರ ಟ್ಯಾಕ್ಸಿ ಮಾಲೀಕರ ಸಂಘದ ಮುಖಂಡರು ಆತನನ್ನು ಚಿತ್ರದುರ್ಗ ಡಿವೈಎಸ್‌ಪಿ ದಿನಕರ್ ಅವರ ಬಳಿ ಶರಣಾಗತಿ ಮಾಡಿಸಿದ್ದಾರೆ.

ಮೈಸೂರಿನ ಉದಯಗಿರಿ ವ್ಯಾಪ್ತಿಗೆ ಮತ್ತೊಂದು ಪೊಲೀಸ್ ಠಾಣೆಗೆ ಒತ್ತಾಯ



ಫಾರುಖ್

ಮೈಸೂರು, ಜೂ.13(ಎಸ್‌ಬಿಡಿ)– ಮೈಸೂರಿನ ಉದಯಗಿರಿ ವ್ಯಾಪ್ತಿಯಲ್ಲಿ ಮತ್ತೊಂದು ಪೊಲೀಸ್ ಠಾಣೆ ಸ್ಥಾಪನೆಗೆ ಒತ್ತಾಯ ಹೆಚ್ಚುತ್ತಿದೆ.

ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಕಾರ್ಯದರ್ಶಿ ಸೈಯದ್ ಫಾರುಖ್, ಉದಯಗಿರಿಯಲ್ಲಿ ಉಪ ಪೊಲೀಸ್ ಠಾಣೆ ಅಥವಾ ಹೆಚ್ಚುವರಿ ಠಾಣೆ ಮಂಜೂರು ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದು ಕಾನೂನು–ಸುವ್ಯವಸ್ಥೆ ನಿರ್ವಹಣೆ ಕಷ್ಟ–ಸಾಧ್ಯವಾಗಿದೆ. ಠಾಣಾ ವ್ಯಾಪ್ತಿ ದೊಡ್ಡದಾಗಿದ್ದು, ಸಿಬ್ಬಂದಿ ಕೊರತೆಯಿಂದ ಸಮರ್ಪಕವಾಗಿ ಕಾರ್ಯ ನಿರ್ವಹಿಸಲಾಗುತ್ತಿಲ್ಲ. ಕಳ್ಳತನ, ಗಲಾಟೆ ಸೇರಿದಂತೆ ಸಮಾಜದ ಶಾಂತಿ–ಸುವ್ಯವಸ್ಥೆಗೆ ಧಕ್ಕೆಯಾಗುವ ಘಟನೆ ಹಾಗೂ ಕೃತ್ಯಗಳು ನಡೆಯುತ್ತಿವೆ. ಹಾಗಾಗಿ ಸಾರ್ವಜನಿಕರ ಸುರಕ್ಷತೆ ಹಾಗೂ ಹಿತದೃಷ್ಟಿಯಿಂದ ಮತ್ತೊಂದು ಠಾಣೆ ಅಗತ್ಯವಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು, ಗೃಹ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಪೊಲೀಸ್ ಹಿರಿಯ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕೆಂದು ಒತ್ತಾಯಿಸಿದ್ದಾರೆ.

ನರಸಿಂಹರಾಜ ಕ್ಷೇತ್ರದಲ್ಲಿ ತಡರಾತ್ರಿವರೆಗೂ ತೆರೆಯುವ ಟೀ ಅಂಗಡಿ ಸೇರಿದಂತೆ ವಿವಿಧ ಅಂಗಡಿಗಳಲ್ಲಿ ಯುವಕರು ಗುಂಪು–ಗುಂಪಾಗಿ ಕುಳಿತು ಆನ್‌ಲೈನ್ ಜೂಜು ಮತ್ತು ಮಾದಕ ವಸ್ತುಗಳ ಬಳಕೆಗೆ ದಾಸರಾಗಿದ್ದು, ಕ್ಷುಲ್ಲಕ ವಿಚಾರಕ್ಕೆ ಜಗಳ, ಹಲ್ಲೆ, ಹತ್ಯೆ ನಡೆಯುತ್ತಿವೆ. ಡ್ರಗ್ಸ್, ಗಾಂಜಾ ಬಳಕೆ ವ್ಯಾಪಕವಾಗಿದೆ. ವಾಹನಗಳನ್ನು ಅಕ್ಕಪಕ್ಕದ ಮನೆಗಳ ಮುಂದೆ ನಿಲ್ಲಿಸಿ, ಅವರ ಮೇಲೂ ಗಲಾಟೆ ಮಾಡುತ್ತಾರೆ. ಸಂಜೆ ಆಗುತ್ತಿದ್ದಂತೆ ಜನ ಅದರಲ್ಲೂ ಮಹಿಳೆಯರು ಮತ್ತು ಮಕ್ಕಳು ಓಡಾಡುವುದೇ ಕಷ್ಟವಾಗಿದೆ. ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳುವಂತೆ ಜಮೀಯತ್–ಉಲಮಾ–ಇ–ಹಿಂದ್ ಸಂಘಟನೆ ವತಿಯಿಂದ ವಾರದ ಹಿಂದೆ ನಗರ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದ್ದನ್ನು ಸ್ಮರಿಸಬಹುದು.

ಸ್ಕೂಟರ್‌ಗೆ ಪೆಟ್ರೋಲ್ ಹಾಕಿಸಿಕೊಂಡು; ಬಟ್ಟೆ ಬಿಚ್ಚಿ ಪೇಮೆಂಟ್ ಆಯ್ತು ಎಂದ ಯುವತಿ!!

ಬೆಚ್ಚಿ ಬಿದ್ದ ಬಂಕ್ ಸಿಬ್ಬಂದಿ

ನವದೆಹಲಿ, ಜೂ.13– ಪೆಟ್ರೋಲ್ ಬಂಕ್‌ವೊಂದರಲ್ಲಿ ದ್ವಿಚಕ್ರ ವಾಹನಕ್ಕೆ ಪೆಟ್ರೋಲ್ ತುಂಬಿಸಿಕೊಂಡ ಯುವತಿಯರು ಬಳಿಕ ಹಣ ನೀಡಿ ಎಂದ ಸಿಬ್ಬಂದಿಗೆ ಬಟ್ಟೆ ಬಿಚ್ಚಿ ತೋರಿಸಿ ಪೇಮೆಂಟ್ ಆಯ್ತು ಎಂದು ಹೇಳಿರುವ ಘಟನೆ ದೆಹಲಿಯಲ್ಲಿ ನಡೆದಿದ್ದು, ಬಂಕ್‌ನಲ್ಲಿ ಅಳವಡಿಸಿರುವ ಸಿಸಿಟಿವಿಯಲ್ಲಿ ಈ ದೃಶ್ಯ ಸೆರೆಯಾಗಿದೆ. ದ್ವಿಚಕ್ರವಾಹನದಲ್ಲಿ ಬಂದ ಇಬ್ಬರು ಯುವತಿಯರು ಮೊದಲು ಸ್ಕೂಟರ್‌ಗೆ ಪೆಟ್ರೋಲ್ ತುಂಬಿಸಿಕೊಂಡಿದೆ. ಬಳಿಕ ಸಿಬ್ಬಂದಿ ಹಣ ಕೇಳಿದ್ದು ಯುವತಿ UPI ಮೂಲಕ ಪೇಮೆಂಟ್ ಮಾಡಲು ಯತ್ನಿಸಿದ್ದಾರೆ. ಈ ವೇಳೆ ಪೇಮೆಂಟ್ ಫೇಲ್ ಆಗಿದ್ದು, ಸಿಬ್ಬಂದಿ ಕ್ಯಾಶ್ ನೀಡುವಂತೆ ಕೇಳಿದ್ದಾರೆ. ಕೆಲ ಹೊತ್ತು ಯುವತಿಯರು ವಾಗ್ವಾದ ನಡೆಸಿದ್ದಾರೆ.

ಸಿಬ್ಬಂದಿ ತಮ್ಮ ಬಂಕ್ ಮ್ಯಾನೇಜರ್ ತೋರಿಸಿ ಅವರಿಗೆ ಹೇಳಿ ಎಂದು ಹೇಳಿದಾಗ ಗಾಡಿಯಲ್ಲಿ ಕುಳಿತಿದ್ದ ಯುವತಿ ಏಕಾಏಕಿ ಗಾಡಿಯಿಂದ ಇಳಿದು ತನ್ನ ಪ್ಯಾಂಟ್ ಬಿಚ್ಚಿ ತೋರಿಸಿ ಪೇಮೆಂಟ್ ಆಯ್ತು ಎಂದು ಹೇಳಿ ಅಲ್ಲಿಂದ ಹೋಗಲು ಯತ್ನಿಸಿದ್ದಾರೆ. ಇವಿಷ್ಟೂ ದೃಶ್ಯಾವಳಿ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಇದೀಗ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ವೈರಲ್ ಆಗುತ್ತಿದೆ. ಯುವತಿಯರ ನಡೆಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ.

ನರಸಿಂಹರಾಜ ಕ್ಷೇತ್ರದ ಮತದಾರರಿಗೆ ಸಂಸದ ಯದುವೀರ್ ಕೃತಜ್ಞತೆ ಸಲ್ಲಿಕೆ

ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸುವ ಭರವಸೆ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕ್ಯಾತಮಾರನಹಳ್ಳಿ ಹುಲಿಯಮ್ಮನ ದೇವಸ್ಥಾನದ ಬಳಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು. ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಬಿ.ಪಿ.ಮಂಜುನಾಥ್, ಹೇಮಂತ್‌ಕುಮಾರ್ ಗೌಡ, ಬಿಜೆಪಿ ನಗರ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ನಗರ ಪಾಲಿಕೆ ಮಾಜಿ ಸದಸ್ಯ ಸಾತ್ವಿಕ್ ಸಂದೇಶ್‌ಸ್ವಾಮಿ, ಎನ್.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸ್ಮಾರ್ಟ್ ಮಂಜು, ಕಾರ್ಯದರ್ಶಿ ಮಂಜು ಸಿ.ಗೌಡ ಮತ್ತಿತರರಿದ್ದರು.

ಮೈಸೂರು, ಜೂ.13(ಎಂಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿ, ಕ್ಷೇತ್ರದ ಅಭಿವೃದ್ಧಿಯ ಭರವಸೆ ನೀಡಿದರು.

ಮೈಸೂರಿನ ಕ್ಯಾತಮಾರನಹಳ್ಳಿಯ ಹುಲಿಯಮ್ಮನ ದೇವಸ್ಥಾನದಿಂದ ಆರಂಭಿಸಿ, ಕೆ.ಎನ್.ಪುರ ಮಹದೇಶ್ವರ ದೇವಸ್ಥಾನ, ಭಾಗ್ಯಜ್ಯೋತಿ ಸ್ಕೂಲ್ ಚಾಮುಂಡೇಶ್ವರಿ ದೇವಸ್ಥಾನ, ರಾಘವೇಂದ್ರನಗರ ಮಾರಮ್ಮನ ದೇವಸ್ಥಾನ, ಗಾಯತ್ರಿಪುರಂ ಚಾಮುಂಡೇಶ್ವರಿ ದೇವಸ್ಥಾನ, ಪೌರಕಾರ್ಮಿಕರ ಕಾಲೋನಿ, ಯರಗನಹಳ್ಳಿ ಮಾರಮ್ಮನ ದೇವಸ್ಥಾನ, ಮಾರುತಿ ಸರ್ಕಲ್, ಗಣೇಶ್‌ನಗರ ಚಾಮುಂಡೇಶ್ವರಿ ದೇವಸ್ಥಾನ, ಕುರಿಮಂಡಿ ಕರಿಮಾರಮ್ಮನ ದೇವಸ್ಥಾನ, 1008 ಗಣಪತಿ ದೇವಸ್ಥಾನ, ಬನ್ನಿಮಂಟಪ ಸೋಮೇಶ್ವರ ದೇವಸ್ಥಾನ, ಗಾಂಧಿನಗರ ದೇವಸ್ಥಾನ ಹಾಗೂ ವೀರನಗೆರೆ ಗಣಪತಿ ದೇವಸ್ಥಾನದ ಬಳಿ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸಿ, ಕಾರ್ಯಕರ್ತರನ್ನು ಅಭಿನಂದಿಸಿದರು.

ಕ್ಯಾತಮಾರನಹಳ್ಳಿಯ ಹುಲಿಯಮ್ಮನ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮತದಾರರು ಹಾಗೂ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಚುನಾವಣಾ ಪ್ರಚಾರದ ಆರಂಭವೂ ಹುಲಿಯಮ್ಮನವರ ಸನ್ನಿಧಿಯಿಂದಲೇ ಆರಂಭವಾಗಿತ್ತು. ಅದೇ ರೀತಿ ವಂದನಾರ್ಪಣೆಯೂ ಇಲ್ಲಿಂದಲೇ ಮಾಡಬೇಕು ಎಂಬುದು ಅರ್ಥಪೂರ್ಣ ಮತ್ತು ಸಂತೋಷದ ಜೊತೆಗೆ ನನ್ನ ಇಚ್ಛೆಯೂ ಆಗಿತ್ತು. ಪ್ರತಿಯೊಬ್ಬ ಮತದಾರರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮ ಮತದಾನದ ಮೂಲಕ ದೊಡ್ಡ ಬೆಂಬಲ ನೀಡಿದ್ದೀರಿ ಎಂದು ಕೃತಜ್ಞತೆ ಸಲ್ಲಿಸಿದರು.

ಎನ್‌ಡಿಎ ಅಭ್ಯರ್ಥಿಯಾಗಿ ಸಾಧಿಸಿರುವ ವಿಜಯಕ್ಕೆ ನೀವೆಲ್ಲರೂ ಕಾರಣ. ಈ ವಿಜಯ ತಾಯಿ ಚಾಮುಂಡೇಶ್ವರಿ, ಕಾವೇರಮ್ಮ, ಅಯೋಧ್ಯೆ ಶ್ರೀ ಬಾಲರಾಮ ಹಾಗೂ ಕ್ಯಾತಮಾರನಹಳ್ಳಿ ಹುಲಿಯಮ್ಮನಿಗೆ ಅರ್ಪಿತವಾಗಿದೆ. ಭಾರತದ ಪರಂಪರೆಯನ್ನು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಪ್ರಥಮ ಕರ್ತವ್ಯವಾಗಿದ್ದು, ನಾವೆಲ್ಲರೂ ಕೈ ಜೋಡಿಸಿಕೊಂಡು ಕೆಲಸ ಮಾಡಬೇಕಿದೆ. ನನ್ನೊಂದಿಗೆ ಕೈ ಜೋಡಿಸಿ ಎಂದು ಮನವಿ ಮಾಡಿದರು.

ಪ್ರಧಾನಿ ನರೇಂದ್ರ ಮೋದಿಯವರು ಮೂರನೇ ಬಾರಿ ಪ್ರಧಾನಿಯಾಗಿರುವುದು ಸಂತೋಷದ ವಿಷಯವಾಗಿದ್ದು, ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಕರ್ನಾಟಕಕ್ಕೆ ಐದು ಸಚಿವ ಸ್ಥಾನ ಸಿಕ್ಕಿರುವುದು ಹರ್ಷದಾಯಕ ವಿಷಯವಾಗಿದ್ದು, ಈ ಮೂಲಕ ರಾಜ್ಯ ಮತ್ತು ರಾಷ್ಟ್ರದ ಅಭಿವೃದ್ಧಿಯಾಗಲಿದೆ. ಭಾರತೀಯ ಪರಂಪರೆ ಸಂರಕ್ಷಣೆ, ಸಮಾಜದ ಉನ್ನತಿಗಾಗಿ ಕೆಲಸ ಮಾಡಲು ಸಿದ್ಧರಾಗಿದ್ದು, ಮಾಡುತ್ತೇವೆ. ಮೈಸೂರು ನಗರದ ಪಾರಂಪರಿಕತೆಯನ್ನು ಉಳಿಸಿಕೊಂಡು ಆಧುನಿಕ ಕಾಲಕ್ಕೆ ಬೇಕಾದ ಸೌಲಭ್ಯಗಳನ್ನು ನೀಡುವ ದೃಷ್ಟಿ ಇಟ್ಟುಕೊಂಡು ಕೆಲಸ ಮಾಡೋಣ. ಸುಮ್ಮನೇ ಮಾತನಾಡಬೇಕು ಎಂದರೂ ನನ್ನ ಕಚೇರಿ ಬನ್ನಿ. ಕಚೇರಿ ನನ್ನದಲ್ಲ ಅದು ಸಾರ್ವಜನಿಕರ ಕಚೇರಿಯಾಗಿರಲಿದೆ ಎಂದರು.

ಪ್ರಚಾರ ವೇಳೆ ಸಾರ್ವಜನಿಕರಿಗೆ ಸಿಗಲ್ಲ ಎಂದು ಸಾಕಷ್ಟು ಪ್ರಚಾರ ಮಾಡಿದ್ದರು. ಇದು ರಾಜಕೀಯದಲ್ಲಿ ಸಹಜ. ಹಿಂದಿನ ಕಾಲದಲ್ಲಿ ರಾಜರು ಅರಮನೆಯಲ್ಲಿದ್ದರೂ ಜನರ ಮಧ್ಯದಲ್ಲಿದ್ದು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರು. ಅದೇ ತತ್ವದಡಿಯಲ್ಲಿ ಮುಂದುವರೆಯುತ್ತೇನೆ. ಇಲ್ಲಿ ಎಷ್ಟು ಮತಗಳು ಬಂದಿವೆ ಎಂದು ನೋಡಿಲ್ಲ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಹಾಗೂ ಅರಮನೆಗೆ ಹತ್ತಿರವಾದ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಗಮನ ಹರಿಸಲಾಗುವುದು. ಎಲ್ಲರೂ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೂ ಕೈಜೋಡಿಸಿ, ಭಾಗವಹಿಸಿ, ಸ್ವಚ್ಛತೆ, ಪಾರಂಪರಿಕತೆ ಉಳಿಸಲು ಯುವ ಸಹೋದರ–ಸಹೋದರಿಯರು ಕೈಜೋಡಿಸಬೇಕು ಎಂದು ತಿಳಿಸಿದರು.

ಎನ್.ಆರ್.ಕ್ಷೇತ್ರದ ಅಭಿವೃದ್ಧಿಗೆ ಮನವಿ: ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮಾತನಾಡಿ, ಬಿಜೆಪಿ ಅಭ್ಯರ್ಥಿಯಾಗಿ ಯದುವೀರ್ ಅವರ ಹೆಸರು ಘೋಷಣೆಯಾದಾಗ ಕ್ಯಾತಮಾರನಹಳ್ಳಿ ಹುಲಿಯಮ್ಮನ ಸನ್ನಿಧಿಯಿಂದಲೇ ಪ್ರಚಾರ ಆರಂಭಿಸಲಾಗಿತ್ತು. ಇಂದು ಅದೇ ಸ್ಥಳದಲ್ಲಿ ಅವರ ವಿಜಯೋತ್ಸವ ಆಚರಿಸುತ್ತಿದ್ದೇವೆ. ನರಸಿಂಹರಾಜ ವಿಧಾನಸಭಾ ಕ್ಷೇತ್ರ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ವಿಧಾನಸಭಾ ಕ್ಷೇತ್ರವೆಂದು ಸರ್ಕಾರವೇ ಹೇಳಿದೆ. ಜಾತಿ ಆಧಾರದ ಮೇಲೆ ಇಲ್ಲಿ ಚುನಾವಣೆಗಳು ನಡೆಯುತ್ತಿವೆ. ಆದರೂ ಈ ಕ್ಷೇತ್ರ ಬೇರೆ ಕ್ಷೇತ್ರಗಳಂತೆ ಅಭಿವೃದ್ಧಿಯಾಗಬೇಕಾದರೆ ಯದುವೀರ್ ಅವರು ಗೆಲ್ಲಬೇಕು ಎಂದು ಹುಲಿಯಮ್ಮ ತಾಯಿಯಲ್ಲಿ ಪ್ರಾರ್ಥನೆ ಸಲ್ಲಿಸಿದ್ದೆ. ತಾಯಿಯ ಆಶೀರ್ವಾದದಿಂದ ಪ್ರಾರ್ಥನೆ ಫಲಿಸಿದೆ. ಎನ್.ಆರ್.ಕ್ಷೇತ್ರದಲ್ಲಿ ಹೊಸ ಇತಿಹಾಸ ನಿರ್ಮಾಣವಾಗುವಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವಂತೆ ಕ್ಷೇತ್ರದ ಮತದಾರರ ಪರವಾಗಿ ಮನವಿ ಮಾಡುತ್ತೇನೆ ಎಂದರು.

ಭವ್ಯ ಸ್ವಾಗತ: ನೂತನ ಸಂಸದರಿಗೆ ಎನ್.ಆರ್.ಕ್ಷೇತ್ರದಲ್ಲಿ ಭವ್ಯಸ್ವಾಗತ ನೀಡಲಾಯಿತು. ಪಟಾಕಿ ಸಿಡಿಸಿ, ಅದ್ದೂರಿ ಬ್ಯಾಂಡ್‌ಸೆಟ್‌ನೊಂದಿಗೆ ಸ್ವಾಗತಿಸಲಾಯಿತು. ಅಲ್ಲದೆ ಹಲವೆಡೆ ಹಳದಿ ನೀರಿನಿಂದ ದೃಷ್ಟಿ ತೆಗೆಯಲಾಯಿತು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಬಿ.ಪಿ.ಮಂಜುನಾಥ್, ಹೇಮಂತ್‌ಕುಮಾರ್ ಗೌಡ, ಬಿಜೆಪಿ ನಗರ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ನಗರಪಾಲಿಕೆ ಮಾಜಿ ಸದಸ್ಯ ಸಾತ್ವಿಕ್ ಸಂದೇಶ್‌ಸ್ವಾಮಿ, ಎನ್.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸ್ಮಾರ್ಟ್ ಮಂಜು, ಕಾರ್ಯದರ್ಶಿ ಮಂಜು ಸಿ.ಗೌಡ, ಮುಖಂಡರಾದ ಉಷಾ ನಾರಾಯಣಪ್ಪ, ಭಾನು ಪ್ರಕಾಶ್, ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕುದುರೆಯನ್ನು ಕಟ್ಟಿಹಾಕಿ ಯುದ್ಧಮಾಡಿ ಗೆದ್ದಾಯಿತು...!

ಬಬ್ರುವಾಹನ ಸಿನಿಮಾದಲ್ಲಿ ಅರ್ಜುನನ ಅಶ್ವಮೇಧದ ಕುದುರೆಯನ್ನು ಕಟ್ಟಿಹಾಕಿ ಬಬ್ರುವಾಹನ ವಿಜಯ ಸಾಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಒಂದು ಕುದುರೆಯನ್ನು ಬಿಟ್ಟಿದ್ದರು. ಆ ಕುದುರೆಯನ್ನು ಯದುವೀರ್ ಅವರು ಕಟ್ಟಿಹಾಕಿ, ಯುದ್ಧ ಮಾಡಿ ಗೆದ್ದು ನಿಮ್ಮ ಮುಂದೆ ನಿಂತಿದ್ದಾರೆ. ಎನ್.ಆರ್.ಕ್ಷೇತ್ರದಲ್ಲಿ ಯಾವುದೇ ಮೂಲಸೌಕರ್ಯಗಳಿಲ್ಲ. ಸ್ಕೂಲ್–ಕಾಲೇಜುಗಳಿಲ್ಲ. ಆಸ್ಪತ್ರೆಗಳಿಲ್ಲ, ಮಕ್ಕಳ ಭವಿಷ್ಯ ರೂಪಿಸುವ ಯಾವುದೇ ಯೋಜನೆಗಳು ಎನ್.ಆರ್.ಕ್ಷೇತ್ರದಲ್ಲಿಲ್ಲ. ಈ ಭಾಗದ ಅಭಿವೃದ್ಧಿ ಮಾಡಲಿ ಎಂದು ನೂತನ ಸಂಸದರಲ್ಲಿ ಮನವಿ ಮಾಡುತ್ತೇನೆ. ನಾವು–ನೀವೆಲ್ಲರೂ ಅವರಿಗೆ ಬೆಂಬಲ ನೀಡೋಣ.

–ಸಂದೇಶ್‌ಸ್ವಾಮಿ, ಮಾಜಿ ಮೇಯರ್

ನೂರಾರು ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳ ವಿತರಣೆ



ಮೈಸೂರಿನ ಯರಗನಹಳ್ಳಿ ಸರ್ಕಾರಿ ಶಾಲೆಯಲ್ಲಿ ಉಚಿತ ಕಲಿಕಾ ಸಾಮಗ್ರಿಗಳ ವಿತರಣೆ ವೇಳೆ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಜೂ.13(ಎಸ್‌ಬಿಡಿ)– ಮೈಸೂರಿನ 36ನೇ ವಾರ್ಡ್ ಯರಗನಹಳ್ಳಿ ಸರ್ಕಾರಿ ಶಾಲೆಯ ನೂರಾರು ವಿದ್ಯಾರ್ಥಿಗಳಿಗೆ ಸ್ನೇಹಜೀವಿ ಫೌಂಡೇಷನ್ ವತಿಯಿಂದ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಫೌಂಡೇಷನ್ ಹಾಗೂ ಯರಗನಹಳ್ಳಿ ಮುಖಂಡರ ಪರವಾಗಿ ಉಚಿತ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳ ವಿದ್ಯಾರ್ಥಿಗಳಿಗೆ ವಿತರಣೆ ಮಾಡಿದ ಶಾಸಕ ತನ್ವೀರ್ ಸೇಠ್, ಸರ್ಕಾರಿ ಶಾಲಾ ಮಕ್ಕಳಿಗೆ ಪ್ರೋತ್ಸಾಯಿಸುವ ಉದ್ದೇಶದಿಂದ ಅತ್ಯುತ್ತಮ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಶ್ಲಾಘಿಸಿದರು. ಇದೇ ವೇಳೆ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಪುರಸ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಜಿ.ಎಂ.ಮಂಜುನಾಥ್, ಆಲನಹಳ್ಳಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸ್ವರ್ಣ, ಸ್ನೇಹಜೀವಿ ಫೌಂಡೇಷನ್ ಸಂಘದ ಅಧ್ಯಕ್ಷ ಡಿ.ರಘು, ವೈದ್ಯ ರಮೇಶ್ ನಾಯಕ್, ಸಮಾಜ ಸೇವಕ ಲಯನ್ಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಉಮೇಶ್, ಸೈಬರ್ ಅಪರಾಧ ತನಿಖಾ ತಂಡದ ಎಸ್. ಲಿಂಗರಾಜು, ಶಾಲೆ ಶಿಕ್ಷಕರು ಹಾಗೂ ಫೌಂಡೇಷನ್‌ನ ಎಲ್ಲಾ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ನಾಳೆ ಮೈಸೂರಿನ ಭಾರತೀಯ ವಿದ್ಯಾಭವನದಲ್ಲಿ ವಿದ್ವಾನ್ ಸಿದ್ಧಾರ್ಥ ಬೆಳ್ಮಣ್ಣು ಸಂಗೀತ ಕಛೇರಿ



ಸಿದ್ಧಾರ್ಥ ಬೆಳ್ಮಣ್ಣು



ರೂಪಕ್ ಕಲ್ಲೂರ್ಕರ್



ಭರತ್ ಹೆಗ್ಡೆ

ಮೈಸೂರು,ಜೂ.13(ಪಿಎಂ)– ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ವತಿಯಿಂದ ಮಾಸಿಕ ಸಂಗೀತ ಕಾರ್ಯಕ್ರಮದ ಪ್ರಯುಕ್ತ ಜೂ.15ರಂದು ಸಂಜೆ 6ಕ್ಕೆ ವಿದ್ವಾನ್ ಸಿದ್ಧಾರ್ಥ ಬೆಳ್ಮಣ್ಣು ಅವರ ಸಂಗೀತ ಕಛೇರಿ ಆಯೋಜಿಸಲಾಗಿದೆ. ಮೈಸೂರಿನ ವಿಜಯನಗರದ ಮೊದಲನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಸಂಗೀತ ಕಛೇರಿ ಏರ್ಪಡಿಸಲಾಗಿದೆ. ಇವರಿಗೆ ಪಕ್ಕವಾದ್ಯದಲ್ಲಿ ರೂಪಕ್ ಕಲ್ಲೂರ್ಕರ್ (ತಬಲಾ) ಮತ್ತು ಭರತ್ ಹೆಗ್ಡೆ (ಹಾರ್ಮೋನಿಯಂ) ಸಹಕಾರ ನೀಡಲಿದ್ದಾರೆ.

ಸಿದ್ಧಾರ್ಥ ಬೆಳ್ಮಣ್ಣು ಅವರು ಉದಯೋನ್ಮುಖ ಭಾರತೀಯ ಶಾಸ್ತ್ರೀಯ ಸಂಗೀತಗಾರರು. ಕರ್ನಾಟಕದ ಉಡುಪಿ ಜಿಲ್ಲೆಯ ಕಾರ್ಕಳ ಪಟ್ಟಣದವರಾದ ಇವರು 1996ರ ಅಕ್ಟೋಬರ್ 2ರಂದು ಜನಿಸಿದರು. ಇವರು ಪ್ರಸಾದ್ ಬೆಳ್ಮಣ್ಣು ಹಾಗೂ ಉಷಾ ದಂಪತಿ ಪುತ್ರ.

ರೂಪಕ್ ಕಲ್ಲೂರ್ಕರ್ ಅವರು ಭಾರತದಲ್ಲಿನ ಪ್ರಮುಖ ಶಾಸ್ತ್ರೀಯ ತಬಲ ಕಲಾವಿದರಲ್ಲಿ ಒಬ್ಬರು. ಇವರು ತಬಲಾ ಮಾಂತ್ರಿಕ ಡಾ.ರಾಜಗೋಪಾಲ್ ಕಲ್ಲೂರ್ಕರ್ ಅವರ ಶಿಷ್ಯ ಮತ್ತು ಪುತ್ರ ಕೂಡ. ಭರತ್ ಹೆಗ್ಡೆ ಅವರು ಹಾರ್ಮೋನಿಯಂ ವಾದನದಲ್ಲಿ ತಮ್ಮ ಆರಂಭಿಕ ತರಬೇತಿಯನ್ನು ವಿದ್ವಾನ್ ಶಂಭುಭಟ್ ಮತ್ತು ವಿದ್ವಾನ್ ಪ್ರಕಾಶ್ ಹೆಗ್ಡೆ ಅವರಲ್ಲಿ ಪಡೆದರು. ಈಗ ಭರತ್ ಅವರು ಮುಂಬೈನ ಪಂ.ಸುಧೀರ್ ನಾಯಕ್ ಅವರಲ್ಲಿ ತರಬೇತಿ ಮುಂದುವರೆಸುತ್ತಿದ್ದಾರೆ.

ಟೈಮ್ಸ್ ಉನ್ನತ ಶಿಕ್ಷಣ ಶ್ರೇಯಾಂಕ ಪ್ರಕಟ

ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ, ಸಂಶೋಧನಾ ಅಕಾಡೆಮಿಗೆ ಪ್ರಥಮ ಸ್ಥಾನ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಟೈಮ್ಸ್ ಹೈಯರ್ ಎಜುಕೇಷನ್ ಪ್ರಕಟಿಸಿರುವ ಶ್ರೇಯಾಂಕದಲ್ಲಿ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು ಉತ್ತಮ ಆರೋಗ್ಯ ಮತ್ತು ಕ್ಷೇಮದ ವಿಚಾರದಲ್ಲಿ ವಿಶ್ವದಲ್ಲೇ ಪ್ರಥಮ ಸ್ಥಾನ ಪಡೆದಿರುವ ಫಲಕವನ್ನು ಬಿಡುಗಡೆ ಮಾಡಲಾಯಿತು.

- ಕೈಗೆಟಕುವ ಮತ್ತು ಶುದ್ಧ ಶಕ್ತಿಯಲ್ಲಿ 12ನೇ ಸ್ಥಾನ
- ಬಡತನ ನಿರ್ಮೂಲನೆಯಲ್ಲಿ 21ನೇ ಸ್ಥಾನ
- ಪರಿಸರ, ಜೀವ ವೈವಿಧ್ಯ ಸಂರಕ್ಷಣೆಯಲ್ಲಿ 49ನೇ ಸ್ಥಾನ
- ಶುದ್ಧ ಜಲ, ನೈರ್ಮಲ್ಯದಲ್ಲಿ 60ನೇ ಸ್ಥಾನ
- ಜವಾಬ್ದಾರಿಯುತ ಉತ್ಪಾದನೆ, ಬಳಕೆಯಲ್ಲಿ 78ನೇ ಸ್ಥಾನ

ಮೈಸೂರು, ಜೂ.13(ಬಿಎಲ್‌ಯು)– ಟೈಮ್ಸ್ ಉನ್ನತ ಶಿಕ್ಷಣ ವಿಭಾಗದಲ್ಲಿ ಪ್ರಕಟಿಸಿರುವ ಶ್ರೇಯಾಂಕದಲ್ಲಿ ಮೈಸೂರಿನ ಪ್ರತಿಷ್ಠಿತ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು ಉತ್ತಮ ಆರೋಗ್ಯ ಮತ್ತು ಕ್ಷೇಮದ ವಿಚಾರದಲ್ಲಿ ವಿಶ್ವದಲ್ಲೇ ಪ್ರಥಮ ಸ್ಥಾನ ಪಡೆದಿದೆ ಎಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ತಿಳಿಸಿದ್ದಾರೆ.

ನಗರದ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಗುಣಮಟ್ಟದ ಬೋಧನಾ ಕಾರ್ಯ, ಅತ್ಯುನ್ನತ ಸಂಶೋಧನಾ ಚಟುವಟಿಕೆ ಮತ್ತು ಸಾಮಾಜಿಕ ಆರೋಗ್ಯ ಸೇವೆ ವಿಷಯಗಳಲ್ಲಿ ಅಕಾಡೆಮಿಯ ಗುಣಮಟ್ಟ ಪರಿಗಣಿಸಿ ಟೈಮ್ಸ್ ಹೈಯರ್ ಎಜುಕೇಷನ್ ಆಯ್ಕೆ ಮಾಡಿದೆ ಎಂದರು.

ವಿಶ್ವದ 115 ರಾಷ್ಟ್ರಗಳ 1,498 ವಿಶ್ವವಿದ್ಯಾನಿಲಯಗಳು ರ್‍ಯಾಂಕಿಂಗ್ ಪಡೆಯಲು ಪೈಪೋಟಿ ನಡೆಸಿದ್ದವು. ಕರ್ನಾಟಕದ 12 ಸಂಸ್ಥೆಗಳು ಸೇರಿದಂತೆ ಭಾರತದ 115 ಸಂಸ್ಥೆಗಳು ಸ್ಪರ್ಧೆಯಲ್ಲಿದ್ದವು. ಆದರೆ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯನ್ನು ಟೈಮ್ಸ್ ಉನ್ನತ ಶಿಕ್ಷಣ ಆಯ್ಕೆ ಮಾಡಿತು ಎಂದು ಹೇಳಿದರು.

ಸಂಯುಕ್ತ ರಾಷ್ಟ್ರಗಳ ಸಂಸ್ಥೆ (United Nation) ನಿಗದಿಪಡಿಸಿರುವ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಅಕಾಡೆಮಿ ತಲುಪಿರುವುದನ್ನು ಪರಿಗಣಿಸಿ ಆಯ್ಕೆ ಮಾಡಲಾಗಿದೆ. ಬೋಧನಾ ಗುಣಮಟ್ಟ, ಬುಡಕಟ್ಟು ಜನಾಂಗದ ಆರೋಗ್ಯದ ಬಗ್ಗೆ ನಡೆಸಿರುವ ಸಂಶೋಧನೆ, ಆರೋಗ್ಯದ ಅರಿವು ಮತ್ತು ಸೇವೆಯ ಅಂಶಗಳಲ್ಲಿ ಸಂಯುಕ್ತ ರಾಷ್ಟ್ರಗಳ ಸಂಸ್ಥೆ ನಿಗದಿ ಮಾಡಿದ್ದ 17 ಗುರಿ ಮುಟ್ಟಿರುವ ಕಾರಣ ಜಾಗತಿಕ ಮಟ್ಟದಲ್ಲಿ ಅಕಾಡೆಮಿ ಪ್ರಥಮ ಸ್ಥಾನ ಪಡೆದಿದೆ ಎಂದು ಡಾ.ಬೆಟಸೂರ ಮಠ ತಿಳಿಸಿದರು.

ಇದಲ್ಲದೆ ಶುದ್ಧ ಇಂಧನ ವಿಷಯಗಳಲ್ಲಿ ಪರಿಹಾರಗಳನ್ನು ಉತ್ತೇಜಿಸುವಲ್ಲಿ ಅಕಾಡೆಮಿ ಮಾಡುವ ಪ್ರಯತ್ನ ಪರಿಗಣಿಸಿ ವಿಶ್ವದಲ್ಲೇ 12ನೇ ಸ್ಥಾನ ನೀಡಿದೆ. ಜೊತೆಗೆ ಬಡತನ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಸಮಾನ ಮತ್ತು ಸಮೃದ್ಧಿ, ಸಮಾಜದ ರಚನಾತ್ಮಕ ಕಾರ್ಯಗಳನ್ನು ಗುರುತಿಸಿ ಜಾಗತಿಕ ಮಟ್ಟದಲ್ಲಿ 21ನೇ ಸ್ಥಾನ ನೀಡಿದೆ ಎಂದರು.

ಪರಿಸರ ಸಂರಕ್ಷಣೆ, ಜೀವ ವೈವಿಧ್ಯ ಸಂರಕ್ಷಣೆ ಮತ್ತು ಸುಸ್ಥಿರ ಭೂ ನಿರ್ವಹಣೆಯ ಗುರಿ ಸಾಧಿಸಿದಕ್ಕಾಗಿ ನಮ್ಮ ಅಕಾಡೆಮಿಗೆ 49ನೇ ಸ್ಥಾನ ಲಭಿಸಿದೆ. ವಿಶ್ವದ ಜನತೆಗೆ ಶುದ್ಧ ನೀರು ಮತ್ತು ನೈರ್ಮಲ್ಯತೆ ಖಾತ್ರಿಪಡಿಸುವುದರ ಮೇಲೆ ಕೇಂದ್ರೀಕರಿಸಿರುವ ಕೆಲಸ ಗುರುತಿಸಿ ಜಾಗತಿಕ ಮಟ್ಟದಲ್ಲಿ 60 ಸ್ಥಾನ ನೀಡಿದೆ ಎಂದು ಹೇಳಿದರು.

ಜವಾಬ್ದಾರಿಯುತ ಉತ್ಪಾದನೆ ಮತ್ತು ಬಳಕೆಯಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು ನಿಗದಿಪಡಿಸಿದ ಗುರಿ ತಲುಪಿ 78ನೇ ಸ್ಥಾನ ಪಡೆದುಕೊಂಡಿದೆ ಎಂದು ವಿವರಿಸಿದರು.

ಟೈಮ್ಸ್ ಹೈಯರ್ ಎಜುಕೇಷನ್ ಇಂಪ್ಯಾಕ್ಟ್ ರ್‍ಯಾಂಕಿಂಗ್–2024ರಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಬಹು ಮುಖ್ಯ ಗುರಿಯಾದ ಉತ್ತಮ ಆರೋಗ್ಯ ಮತ್ತು ಕ್ಷೇಮ ವಿಷಯದಲ್ಲಿ ಅಕಾಡೆಮಿ ಗುಣಮಟ್ಟ ಪರಿಗಣಿಸಿ ವಿಶ್ವದಲ್ಲೇ ಮೊದಲ ಸ್ಥಾನ ನೀಡಿದೆ ಎಂದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಈ ಸಾಧನೆಗೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿನಂದಿಸಿದ್ದಾರೆ. ವಿಶ್ವದಲ್ಲಿ ಸೇವಾ ಶ್ರೇಷ್ಠತೆಗಾಗಿ ಮುಂದಿನ ಪೀಳಿಗೆಯನ್ನು ಉತ್ತೇಜಿಸಬೇಕು ಎಂದು ಶ್ರೀಗಳು ಮಾರ್ಗದರ್ಶನ ಮಾಡಿದ್ದಾರೆ ಎಂದು ಸಲಹೆ ನೀಡಿದರು.

ಈ ವೇಳೆ ಮಾತನಾಡಿದ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್, ಇಂತಹ ಹಲವು ಸಾಧನೆಗಳ ಮೂಲಕ ಅಕಾಡೆಮಿಯ ಕಿರೀಟಕ್ಕೆ ಒಂದೊಂದು ಗರಿಗಳು ಸೇರ್ಪಡೆಯಾಗುತ್ತಿವೆ ಎಂದು ಹರ್ಷ ವ್ಯಕ್ತಪಡಿಸಿದರು.

ಅಮೇರಿಕಾದಲ್ಲಿರುವ ಅಕಾಡೆಮಿಯ ಸಮ ಕುಲಾಧಿಪತಿ ಡಾ.ಬಿ.ಸುರೇಶ್ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿ, ಈ ಮೊದಲು ಅಕಾಡೆಮಿಯಲ್ಲಿ 200 ವಿಭಾಗಗಳಿತ್ತು. ಆದರೆ ಈಗ 600ಕ್ಕೂ ಹೆಚ್ಚು ವಿಭಾಗಗಳಿವೆ ಎಂದರು.

ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅಕಾಡೆಮಿ ಕುಲಪತಿ ಡಾ.ಸುರೀಂದರ್ ಸಿಂಗ್, ಸುಸ್ಥಿರ ಅಭಿವೃದ್ಧಿ ಮತ್ತು ಸಾಮಾಜಿಕ ಪ್ರಭಾವಗಳಲ್ಲಿ ನಮ್ಮ ಸಂಸ್ಥೆ ಜಾಗತಿಕ ನಾಯಕನಾಗಿ ಗುರುತಿಸಿಕೊಂಡಿರುವುದರಿಂದ ಈ ಗೌರವ ಸಂದಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಅಕಾಡೆಮಿ ರಿಜಿಸ್ಟ್ರಾರ್ ಡಾ.ಡಿ.ಮಂಜುನಾಥ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲ್ ಡಾ.ಬಸವಣ್ಣಗೌಡಪ್ಪ, ಅಧೀಕ್ಷಕ ಡಾ.ಸಿ.ಪಿ.ಮಧು ಪ್ರತಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹೋಂ ಸ್ಟೇ ವಿದ್ಯುತ್ ಶುಲ್ಕ ಸಂಬಂಧ ಸಚಿವರೊಂದಿಗೆ ಚರ್ಚೆ

ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಶಾಸಕ ಡಾ.ಮಂತರ್‌ಗೌಡ ಭರವಸೆ

ಮಡಿಕೇರಿ, ಜೂ.13– ಹೋಂಸ್ಟೇಗಳ ವಿದ್ಯುತ್ ಶುಲ್ಕ ಸಂಬಂಧ ಪ್ರವಾಸೋದ್ಯಮ ಸಚಿವರು ಹಾಗೂ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ಶಾಸಕ ಡಾ.ಮಂತರ್‌ಗೌಡ ಭರವಸೆ ನೀಡಿದರು.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಶಾಸಕ ಡಾ.ಮಂತರ್‌ಗೌಡ ಮಾತನಾಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಹೋಂಸ್ಟೇಗಳ ಗೃಹ ಹಾಗೂ ವಾಣಿಜ್ಯ ಬಳಕೆಯ ವಿದ್ಯುತ್ ಶುಲ್ಕ ಸಂಬಂಧ ಒಂದೇ ಡೆಫಿನೇಷನ್ ಇರಬೇಕು. ಆ ನಿಟ್ಟಿನಲ್ಲಿ ಪ್ರವಾಸೋದ್ಯಮ ಸಚಿವರ ಗಮನಕ್ಕೆ ತರಲಾಗುವುದು. ಕೊಡಗು ಜಿಲ್ಲೆಯ ಪ್ರವಾಸೋದ್ಯಮಕ್ಕೆ ಮತ್ತಷ್ಟು ಮೂಲ ಸೌಲಭ್ಯ ಕಲ್ಪಿಸಬೇಕು. ಪ್ರವಾಸಿಗರಿಗೆ ಯಾವುದೇ ತೊಂದರೆ ಆಗದಂತೆ ಗಮನ ಹರಿಸಬೇಕು ಎಂದು ಹೇಳಿದರು.

ಇದೇ ವೇಳೆ ಹೋಂಸ್ಟೇ ಅಸೋಷಿಯೇಷನ್‌ನ ಪ್ರತಿನಿಧಿಗಳು ಮಾತನಾಡಿ, ನೋಂದಾಯಿತ ಹೋಂಸ್ಟೇ ಮಾಲೀಕರು ಹೋಟೆಲ್ ಮಾದರಿಯಲ್ಲಿ ವಾಣಿಜ್ಯ ಚಟುವಟಿಕೆ ನಡೆಸುತ್ತಿಲ್ಲ. ಪ್ರವಾಸಿಗರನ್ನು ಮನೆಗಳಲ್ಲಿ ವಾಸ್ತವ್ಯ ಹೂಡಿಸುತ್ತಾರೆ. ಆದ್ದರಿಂದ ಗೃಹ ಬಳಕೆ ವಿದ್ಯುತ್ ನೀಡಬೇಕು. ಕರ್ನಾಟಕ ವಿದ್ಯುತ್‌ಚಕ್ತಿ ನಿಯಂತ್ರಣ ಮಂಡಳಿ ಇಂಜಿನಿಯರ್‌ಗಳು ಪರಿಶೀಲಿಸಿ, ವಾಣಿಜ್ಯ ಬಳಕೆ ವಿದ್ಯುತ್ ದರ ನಿಗದಿ ಮಾಡುತ್ತಾರೆ. ಇದರಿಂದ ಹೋಂಸ್ಟೇ ನಡೆಸುವವರಿಗೆ ತುಂಬಾ ತೊಂದರೆಯಾಗಿದೆ ಎಂದು ಶಾಸಕರ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸೆಸ್ಕ್ ಕಾರ್ಯಪಾಲಕ ಇಂಜಿನಿಯರ್ ಅನಿತಾ ಬಾಯಿ, ಪ್ರವಾಸೋದ್ಯಮ ನೀತಿಯಡಿ ಹೋಂಸ್ಟೇ ಸಂಬಂಧಿಸಿದಂತೆ ಸರ್ಕಾರದ ನಿರ್ದೇಶನದಂತೆ ಕ್ರಮವಹಿಸಲಾಗಿದೆ. ವಿದ್ಯುತ್ ನಿಗಮದಿಂದ ವಾಣಿಜ್ಯ ಮತ್ತು ಗೃಹ ಬಳಕೆ ಸಂಬಂಧಿಸಿದಂತೆ ಸರ್ಕಾರದ ಆದೇಶಗಳನ್ನು ಪಾಲಿಸಲಾಗುತ್ತಿದೆ ಎಂದರು.

ನಂತರ ಹೋಂಸ್ಟೇ ಅಸೋಷಿಯೇಷನ್ ಮಾಜಿ ಅಧ್ಯಕ್ಷ ಕರುಂಬಯ್ಯ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಕೃಷಿ ಜೊತೆಗೆ ಪ್ರವಾಸೋದ್ಯಮಕ್ಕೆ ಒತ್ತು ನೀಡಬೇಕಿದೆ. ಇದರಿಂದ ಉದ್ಯೋಗ ಸೃಷ್ಟಿಯಾಗಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಅನಿತಾ ಭಾಸ್ಕರ್ ಮಾತನಾಡಿ, ಜಿಲ್ಲೆಯ ಪ್ರವಾಸೋದ್ಯಮ ಹಾಗೂ ಹೋಂಸ್ಟೇ ಸಂಬಂಧ ಮಾಹಿತಿ ನೀಡಲಾಗಿದೆ. ಒಂದು ಮನೆಯಲ್ಲಿ 6 ರಿಂದ 8 ಕೊಠಡಿಯಲ್ಲಿ ಹೋಂಸ್ಟೇ ನಡೆಸಬಹುದು. ಹೋಂಸ್ಟೇ ನಡೆಸಲು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಿಕೊಂಡು, ನಂತರ ಸ್ಥಳೀಯ ಸಂಸ್ಥೆಗಳಲ್ಲಿ ಅನುಮತಿ ಹಾಗೂ ಪೊಲೀಸ್ ಇಲಾಖೆಯಿಂದ ಎನ್‌ಓಸಿ ಪಡೆಯಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಪೊಲೀಸ್ ಅಧಿಕಾರಿ ಐ.ಪಿ.ಮೇದಪ್ಪ ಹೋಂಸ್ಟೇ ಅಸೋಷಿಯೇಷನ್‌ನ ಬಿ.ಅಮರನಾಥ್, ನಳಿನಿ ಅಚ್ಚಯ್ಯ, ಉಷಾ ಗಣಪತಿ, ಸಿ.ಸಿ.ತಿಮ್ಮಯ್ಯ, ಎನ್.ಕೆ.ಚಂಗಪ್ಪ, ಮಿಕ್ಕಿ ಕಾಳಪ್ಪ, ಕೆ.ಎಂ.ಕರುಂಬಯ್ಯ, ಎಂ.ಮೀನಾ ಕಾರ್ಯಪ್ಪ, ಪಿ.ಕೆ.ಹೇಮಾ ಮಾದಪ್ಪ, ಬಿ.ಎ.ಅಚ್ಚಯ್ಯ, ಸತೀಶ್ ರೈ, ಬಿ.ಪಿ.ಗಣಪತಿ, ಎ.ಎಸ್.ಮಲ್ಲೇಶ್ ಮತ್ತಿತರರು ಇದ್ದರು.

ಕಡ್ಡಾಯವಾಗಿ ಕನ್ನಡ ಬಳಸಬೇಕು

ಕೊಡಗು ಜಿಲ್ಲೆಯ ಪ್ರವಾಸೋದ್ಯಮ ವೆಬ್‌ಸೈಟ್‌ನಲ್ಲಿ ಪವಿತ್ರ ದೇವಾಲಯಗಳು ಹಾಗೂ ಪ್ರವಾಸೋದ್ಯಮದ ಮಾಹಿತಿ ಒದಗಿಸಲು ಮತ್ತಷ್ಟು ಕ್ರಮವಹಿಸಬೇಕಿದೆ. ಜಿಲ್ಲೆಯಲ್ಲಿ ಸರ್ಕಾರಿ ಸಂಸ್ಥೆಗಳು ಸೇರಿದಂತೆ ಎಲ್ಲೆಡೆ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಹಾಕಬೇಕು. ಇದನ್ನು ಚಾಚೂ ತಪ್ಪದೇ ಪಾಲಿಸಬೇಕು. ಇದುವರೆಗೆ ಈ ರೀತಿ ನಾಮಫಲಕ ಹಾಕದಿದ್ದಲ್ಲಿ ಶೀಘ್ರವಾಗಿ ನಾಮಫಲಕಗಳನ್ನು ಬದಲಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದರು.

ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಹೋಂಸ್ಟೇ ಸಂಬಂಧ ಬೇರೆ ಬೇರೆ ರೀತಿಯ ಶುಲ್ಕ ಪಡೆಯಲಾಗುತ್ತಿದ್ದು, ಒಂದೇ ರೀತಿಯ ಶುಲ್ಕ ಪಡೆಯಬೇಕು ಎಂದು ಮೋಂತಿ ಗಣೇಶ್ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಪಂ ಸಿಇಓ ವರ್ಣಿತ್ ನೇಗಿ, ಗ್ರಾಮ ಪಂಚಾಯಿತಿ ಆಡಳಿತದಲ್ಲಿ ತಮ್ಮದೇ ಸದಸ್ಯರನ್ನು ಹೊಂದಿರುವ ಸ್ಥಳೀಯ ಸಂಸ್ಥೆಯಾಗಿದೆ. ಸ್ಥಳೀಯ ಸಂಪನ್ಮೂಲವನ್ನು ಗಮನಿಸಿ, ತೆರಿಗೆ ಬಗ್ಗೆ ನಿರ್ಣಯ ಕೈಗೊಳ್ಳಲಿದ್ದಾರೆ. ಆ ನಿಟ್ಟಿನಲ್ಲಿ ಜಿಪಂ ಮಧ್ಯಪ್ರವೇಶ ಮಾಡುವುದಿಲ್ಲ ಎಂದರು.

ವಿರಾಜಪೇಟೆಯಲ್ಲಿ ಉದ್ಯೋಗ ಮೇಳ



ವಿರಾಜಪೇಟೆಯಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ ಉದ್ಯೋಗಾಕಾಂಕ್ಷಿಗಳು.

ವಿರಾಜಪೇಟೆ: ಎಟೆಕ್ ಎಜುಕೇಷನ್ ಸೆಂಟರ್, ಶಂಕರಾಚಾರ್ಯ ಟ್ರಸ್ಟ್ ಹಾಗೂ ಮೈಸೂರಿನ ನೈಸ್ ಸಂಸ್ಥೆ ವತಿಯಿಂದ ನಗರದ ದೊಡ್ಡಟ್ಟಿಚೌಕಿ ಬಳಿಯ ಶಾನ್‌ಬೋಗ್ ಕಟ್ಟಡದ ಸಭಾಂಗಣದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿತ್ತು.

ಮೇಳದಲ್ಲಿ ವಿವಿಧ 15 ಕಂಪನಿಗಳು ಹಾಗೂ ಕೊಡಗಿನ ವಿವಿಧೆಡೆಗಳಿಂದ 100ಕ್ಕೂ ಹೆಚ್ಚು ಉದ್ಯೋಗಕಾಂಕ್ಷಿಗಳು ಭಾಗವಹಿಸಿದ್ದರು.

ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಪುರಸಭೆ ಸದಸ್ಯ ಎಸ್.ಎಚ್.ಮತೀನ್, ಉದ್ಯೋಗ ಮೇಳ ಉದ್ಯೋಗಕಾಂಕ್ಷಿಗಳು ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ. ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗ ಸಿಗಬೇಕೆಂಬ ಬಯಕೆಯನ್ನು ಈಡೇರಿಸಲು ಹಾಗೂ ಬದುಕು ರೂಪಿಸಿಕೊಳ್ಳಲು ಉದ್ಯೋಗ ಮೇಳ ಸಹಕಾರಿಯಾಗಿದೆ ಎಂದರು.

ನಿವೃತ್ತ ನ್ಯಾಯಾಧೀಶ ಶಫೀರ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಕೌಶಲ್ಯಗಳೊಂದಿಗೆ ಉದ್ಯೋಗ ಮೇಳದಲ್ಲಿ ಉತ್ತಮ ಕೆಲಸ ಗಳಿಸುವಂತಾಗಬೇಕು ಎಂದು ತಿಳಿಸಿದರು.

ಇದೇ ವೇಳೆ ಪಪಂ ಮಾಜಿ ಉಪಾಧ್ಯಕ್ಷೆ ತಸ್ನಿಂ ಅಕ್ತಾರ್, ಆಶೀರ್ವಾದ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಸಿದ್ದಿಖ್ ಹಂಸ, ಸಂಸ್ಥೆಯ ಮೇಲ್ವಿಚಾರಕರಾದ ಸೋನಾ, ಸಂಸ್ಥೆಯ ಖಮರುದ್ದೀನ್, ಅನಸ್, ಶಬೀರ್ ಉಪಸ್ಥಿತರಿದ್ದರು.

ಎಸ್.ಸಿ.ಸುಂದರಮ್ಮ ನಿಧನ

ಕುಶಾಲನಗರ, ಜೂ.13– ಮೂಲತಃ ತೊರೆನೂರು ಗ್ರಾಮದ ಬಿಇಎಂಎಲ್ ನಿವೃತ್ತ ಅಧಿಕಾರಿ ಟಿ.ಎಂ.ಗುರುಮಲ್ಲೇಶ್ ಪತ್ನಿ ಸುಂದರಮ್ಮ(68) ಗುರುವಾರ ಮೈಸೂರಿನಲ್ಲಿ ಹೃದಯಾ ಘಾತದಿಂದ ನಿಧನರಾದರು.

ಮೃತರು ಪತಿ, ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ತೊರೆನೂರು ಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸಿಕ್ಕ ಹಣ ವಾರಸುದಾರರಿಗೆ ವಾಪಸ್

ಸುಂಟಿಕೊಪ್ಪ: ಸಿಕ್ಕ ಹಣವನ್ನು ವಾರಸುದಾರರಿಗೆ ವಾಪಸ್ ನೀಡುವ ಮೂಲಕ ಆಶಾ ಕಾರ್ಯಕರ್ತೆ ಹಾಗೂ ಕಾಫಿ ಬೆಳೆಗಾರರೊಬ್ಬರು ಪ್ರಾಮಾಣಿಕತೆ ಮೆರೆದಿದ್ದಾರೆ.

ಗುರುವಾರ ಸುಂಟಿಕೊಪ್ಪದ ವಿಎಸ್‌ಎಸ್‌ಎನ್ ಮುಂಭಾಗದಲ್ಲಿ 16 ಸಾವಿರ ರೂ. ನಗದು ಕಂಬಿಬಾಣೆಯ ಆಶಾ ಕಾರ್ಯಕರ್ತೆ ವೀಣಾ ಮತ್ತು ಕಾಫಿ ಬೆಳೆಗಾರ ಸತೀಶ್ ಅವರಿಗೆ ಸಿಕ್ಕಿತ್ತು. ನಂತರ ಈ ಇಬ್ಬರು ಸುಂಟಿಕೊಪ್ಪ ಪೊಲೀಸ್ ಠಾಣೆಗೆ ತೆರಳಿ ಹಣ ಸಿಕ್ಕಿರುವುದಾಗಿ ತಿಳಿಸಿದ್ದರು.

ಹಣ ಸಿಕ್ಕಿರುವ ಕುರಿತು ಸುಂಟಿಕೊಪ್ಪ ಗ್ರಾಪಂ ನೌಕರ ಡಿ.ಎಂ.ಮಂಜುನಾಥ್ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದರು. ನಂತರ ಹಣ ಕಳೆದುಕೊಂಡಿದ್ದ ಸುಂಟಿಕೊಪ್ಪದ ಗಿರಿಯಪ್ಪ ಮನೆ ನಿವಾಸಿ ಯಂಕನ ಕೌಶಿಕ್ ಸೂಕ್ತ ದಾಖಲಾತಿ ನೀಡಿ, ಸುಂಟಿಕೊಪ್ಪ ಠಾಣಾಧಿಕಾರಿ ಎಂ.ಸಿ.ಶ್ರೀಧರ್ ಅವರಿಂದ ಹಣ ಪಡೆದುಕೊಂಡರು. ವೀಣಾ ಮತ್ತು ಸತೀಸ್ ಅವರ ಪ್ರಾಮಾಣಿಕತೆಗೆ ಕೃತಜ್ಞತೆ ಸಲ್ಲಿಸಿದರು.



ಸಿಕ್ಕ ಹಣವನ್ನು ಯಂಕನ ಕೌಶಿಕ್‌ಗೆ ಸುಂಟಿಕೊಪ್ಪ ಠಾಣಾಧಿಕಾರಿ ಎಂ.ಸಿ.ಶ್ರೀಧರ್, ಆಶಾ ಕಾರ್ಯಕರ್ತೆ ವೀಣಾ, ಕಾಫಿ ಬೆಳೆಗಾರ ಸತೀಶ್ ವಾಪಸ್ ನೀಡಿದರು.

ಲೋಕಾಯುಕ್ತರಿಂದ ದೂರು ಸ್ವೀಕಾರ


ಮಡಿಕೇರಿ, ಜೂ.13– ಮಡಿಕೇರಿ ಲೋಕಾಯುಕ್ತ ಅಧಿಕಾರಿಗಳು ಜೂ.14ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ನಗರದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ದೂರು ಸ್ವೀಕರಿಸಲಿದ್ದಾರೆ. ಸರ್ಕಾರಿ ಕಚೇರಿಗಳ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ, ನೌಕರರು ಹಾಗೂ ಸಿಬ್ಬಂದಿ ವಿರುದ್ಧ ಸಾರ್ವಜನಿಕರು ದೂರು ನೀಡಬಹುದು.

ವಿವರಗಳಿಗೆ ಮಡಿಕೇರಿಯ ಗೌಳಿಬೀದಿಯಲ್ಲಿರುವ ಲೋಕಾಯುಕ್ತ ಪೊಲೀಸ್ ಕಚೇರಿ ಅಥವಾ ದೂ:08272–295297 ಅನ್ನು ಸಂಪರ್ಕಿಸಬಹುದು ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇನ್ನು ಮುಂದೆ ಮನೆ ಬಾಗಿಲಿಗೆ ಬರಲಿದೆ ಸರ್ಕಾರಿ ಸೇವೆಗಳು

ಪಾಂಡವಪುರದಲ್ಲಿ ಕಾರ್ಯಕ್ರಮಕ್ಕೆ ಚಾಲನೆ

ಪಾಂಡವಪುರ, ಜೂ. 13– ಸಾರ್ವಜನಿಕರು ಅರ್ಜಿಗಳನ್ನು ಹಿಡಿದುಕೊಂಡು ಕಚೇರಿಗೆ ಅಲೆದಾಡುವುದನ್ನು ತಪ್ಪಿಸುವುದಕ್ಕಾಗಿಯೇ 'ಸರಕಾರಿ ಸೇವೆ ನಿಮ್ಮ ಮನೆ ಬಾಗಿಲಿಗೆ' ಎಂಬ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದ್ದಾರೆ.



ಶಾಸಕ ದರ್ಶನ್ ಪುಟ್ಟಣ್ಣಯ್ಯ ರೈತರ ಅಹವಾಲು ಆಲಿಸಿದರು.

ತಾಲೂಕಿನ ಕೆನ್ನಾಳು ಗ್ರಾಪಂ ಆವರಣದಲ್ಲಿ ತಾಲೂಕು ಆಡಳಿತದ ವತಿಯಿಂದ ನಡೆದ 'ಸರಕಾರಿ ಸೇವೆ ನಿಮ್ಮ ಮನೆ ಬಾಗಿಲಿಗೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಜನರು ಯಾವುದೇ ಸಮಸ್ಯೆಗಳನ್ನು ಹೊತ್ತು ಕಚೇರಿಗೆ ಅಲೆದಾಡಬಾರದು, ಬಗೆಹರಿಸಬಹುದಾದ ಎಲ್ಲಾ ಸಮಸ್ಯೆಗಳನ್ನು ಜನರಿಂದ ಅರ್ಜಿ ಪಡೆದು ಅಧಿಕಾರಿಗಳು ಸ್ಥಳದಲ್ಲಿಯೇ ಬಗೆಹರಿಸಬೇಕು. ಗ್ರಾಪಂ ಸದಸ್ಯರು ಮನೆಗಳಿಗೆ ತೆರಳಿ ಜನರಿಂದ ಅರ್ಜಿ ಹಾಕಿಸುವ ಕೆಲಸ ಮಾಡಬೇಕು. ಹೊಸ ಪ್ರಯತ್ನದಿಂದ ಅಧಿಕಾರಿಗಳಿಗೆ ಒತ್ತಡ ಆಗಬಹುದು, ಜೊತೆಗೆ ಸಮಸ್ಯೆಗಳು ಉಂಟಾಗಬಹುದು ಯಾವುದೇ ಸಮಸ್ಯೆ ಎದುರಾದರು ಎದುರಿಸೋಣ. ಬೆಳಗ್ಗೆಯಿಂದ ಸಂಜೆ ನಾಲ್ಕು ಗಂಟೆವರೆಗೆ ಕೆಲಸ ಮಾಡಬೇಕು. ಬಳಿಕ ನಿತ್ಯ 4–5 ಗಂಟೆವರೆಗೆ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಗುವುದು ಎಂದು ತಿಳಿಸಿದರು.

ಪಂಚಾಯಿತಿ ವ್ಯಾಪ್ತಿಯಲ್ಲಿರುವ ಎಲ್ಲಾ ಸರಕಾರಿ ಜಾಗ, ಗೋಮಾಳ, ಗ್ರಾಮ ಠಾಣಗಳನ್ನು ಸರ್ವೇ ಮಾಡಿಸಿ, ಸ್ಮಶಾನ ಜಾಗ, ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡುವ ಕೆಲಸ ಮಾಡಿ. ಸರ್ವೇ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಕುಳಿತು ಚರ್ಚಿಸಿ ಕ್ರಮವಹಿಸಿ. ಸ್ಥಳದಲ್ಲಿ ಬಗೆಹರಿಸಬಹುದಾದ ಕೆಲಸ ಮಾಡಿಕೊಡಿ, ಬಗೆಹರಿಯದ ಸಮಸ್ಯೆಗಳನ್ನು ಕೋರ್ಟ್‌ನಲ್ಲಿ ಬಗೆಹರಿಸಿಕೊಳ್ಳುವಂತೆ ಸಲಹೆ ನೀಡಿ, ಒಟ್ಟಾರೆ ಮುಂದೆ ಈ ಪಂಚಾಯಿತಿಯಿಂದ ಯಾವುದೇ ಜನರು ಅರ್ಜಿ ಹಿಡಿದುಕೊಂಡು ಕಚೇರಿಗಳಿಗೆ ಅಲೆದಾಡಬಾರದು ಅಷ್ಟರ ಮಟ್ಟಿಗೆ ಅಧಿಕಾರಿಗಳು ಕೆಲಸ ಮಾಡಬೇಕು ಎಂದು ತಿಳಿಸಿದರು.

ನೀರಾವರಿ ಅಧಿಕಾರಿಗಳು ಕರೆಸಿ ಜಲ ಜೀವನ್ ಮಿಷನ್ ಕಾಮಗಾರಿ ನಡೆದಿದೆಯಾ? ಗುಣಮಟ್ಟ ಹೊಂದಿದೆಯಾ? ಇಲ್ಲವಾದರೆ ಗುತ್ತಿಗೆದಾರರನ್ನು ಕರೆಸಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡಬೇಕು. ವಿದ್ಯುತ್ ಇಲಾಖೆಯ ಅಧಿಕಾರಿಗಳು ಎಲ್ಲೆಲ್ಲಿ ಸೋಲಾರ್ ದ್ವೀಪ ಅಳವಡಿಸಬೇಕು, ಟಿಸಿ ಅಳವಡಿಕೆ, ವಿದ್ಯುತ್ ಕಂಬ ಹಾಕಬೇಕು, ವಿದ್ಯುತ್ ಸಮಸ್ಯೆಗಳು ಇದೆಯಾ? ಎನ್ನುವುದನ್ನು ಪರಿಶೀಲಿಸಿ, ಲೋಕೋಪಯೋಗಿ ಅಧಿಕಾರಿಗಳು ರಸ್ತೆಗಳ ಸಮಸ್ಯೆ ಬಗೆಹರಿಸಬೇಕು, ಆರೋಗ್ಯ ಇಲಾಖೆಯವರು ಆರೋಗ್ಯ ಸಮಸ್ಯೆಗಳ ಬಗ್ಗೆ ಪರಿಶೀಲಿಸಿ ಕ್ರಮವಹಿಸಿ, ಕಂದಾಯ, ಕೃಷಿ, ತೋಟಗಾರಿಗೆ ಹಾಗೂ ರೇಷ್ಮೆ ಇಲಾಖೆಯ ಅಧಿಕಾರಿಗಳು ರೈತರು ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡಿ ಎಂದರು ತಾಕೀತು ಮಾಡಿದರು.

ಅಕ್ರಮ ಜೂಜು ಅಡ್ಡೆ ಮದ್ಯ ಮಾರಾಟಕ್ಕೆ ಕ್ರಮ: ಅಬಕಾರಿ ಅಧಿಕಾರಿಗಳು ಗ್ರಾಮಗಳಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟ ತಡೆಗೆ ಕ್ರಮವಹಿಸಬೇಕು, ಜನರಿಗೆ ಮದ್ಯ ಸೇವನೆಯಿಂದಾಗುವ ಅನಾನೂಕೂಲಗಳ ಬಗ್ಗೆ ಅರಿವು ಮೂಡಿಸಬೇಕು. ಪೊಲೀಸ್ ಅಧಿಕಾರಿಗಳು ಅಕ್ರಮ ಜೂಜು ಅಡ್ಡೆಗಳ ಮೇಲೆ ದಾಳಿ ಮಾಡಿ ಕ್ರಮ ಕೈಗೊಳ್ಳಬೇಕು. ಹೆಣ್ಣು ಭ್ರೂಣಹತ್ಯೆ, ಬಾಲ್ಯ ವಿವಾಹದಲ್ಲಿ ಜಿಲ್ಲೆ ರಾಜ್ಯದಲ್ಲಿಯೇ ಪ್ರಥಮ ಸ್ಥಾನದ ಲ್ಲಿದೆ. ಈ ಬಗ್ಗೆ ಜನರಿಗೆ ಅರಿವು ಮೂಡಿ ಸುವ ಕೆಲಸ ಮಾಡಬೇಕು ಎಂದರು.

ಜೂ.15ರಂದು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜನಸಂಪರ್ಕ ಸಭೆ, ಜೂ.18ರಂದು ಆರೋಗ್ಯದ ಬಗ್ಗೆ ಅರಿವು, ಜೂ.19 ರಂದು ಪಿಡಿಓಗಳು, ಗ್ರಾಪಂ ಸದಸ್ಯರಿಗೆ ಬ್ಲಾಕ್ ಹಂತದಲ್ಲಿ ಕೆಲಸ ಮಾಡುವ ಬಗ್ಗೆ ತಿಳುವಳಿಕೆ, ನರೇಗಾ ಯೋಜನೆ ಕಾರ್ಯಕ್ರಮಗಳ ಅನುಷ್ಠಾನಗೊಳಿಸುವ ಬಗ್ಗೆ ಜಾಗೃತಿ, ಜೂ.20 ರಂದು ಅಬಕಾರಿ ಇಲಾಖೆಯಿಂದ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮ. ಜೂ.21 ರಂದು ನೀರು ನಿರ್ವಹಣೆ ಬಗ್ಗೆ ಅರಿವು, ಜೂ.22ರಂದು ವಾತಾವರಣ ಕುರಿತು ಜಾಗೃತಿ, ಜೂ.23ರಂದು ವಿದ್ಯಾರ್ಥಿಗಳಿಗೆ ಸಾಫ್ಟ್ ಸ್ಕಿಲ್ ತರಬೇತಿ ನೀಡಲಾಗುವುದು

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ನಂದೀಶ್, ಗ್ರೇಡ್–1 ತಹಸೀಲ್ದಾರ್ ಸಂತೋಷ್, ತಾಪಂ ಆಡಳಿತಾಧಿಕಾರಿ ಅಶೋಕ್, ಇಓ ಲೋಕೇಶ್‌ಮೂರ್ತಿ, ಗ್ರಾಪಂ ಅಧ್ಯಕ್ಷ ಪ್ರಕಾಶ್, ಉಪಾಧ್ಯಕ್ಷೆ ದೇವಿಕ ಸೇರಿದಂತೆ ಎಲ್ಲಾ ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ಈಜಲು ನೀರಿಗಿಳಿದ ಚೆನ್ನೈನ ಯುವಕರಿಬ್ಬರು ಜಲಸಮಾಧಿ

ಶ್ರೀರಂಗಪಟ್ಟಣ, ಜೂ.13– ಈಜಲು ನೀರಿಗಿಳಿದ ಯುವಕರಿಬ್ಬರು ಜಲಸಮಾಧಿಯಾಗಿರುವ ಘಟನೆ ಪಟ್ಟಣದ ನಿಮಿಷಾಂಭ ದೇವಸ್ಥಾನದ ಬಳಿ ಕಾವೇರಿ ನದಿಯಲ್ಲಿ ಗುರುವಾರ ಸಂಭವಿಸಿದೆ. ಚೆನ್ನೈ ನಗರದ ಯುವರಾಜ್ ಅವರ ಪುತ್ರ ವಿಶಾಲ್ (19) ಮತ್ತು ಮಾನುಸಿಂಗ್ ಅವರ ಪುತ್ರ ರೋಹನ್ (18) ಸಾವನ್ನಪ್ಪಿದವರು.

ಚೆನ್ನೈನಿಂದ ಮೈಸೂರಿನ ತಮ್ಮ ಅಜ್ಜಿ ಮನೆಗೆ ಬಂದಿದ್ದ ಇವರಿಬ್ಬರು ತಮ್ಮ ಬಂಧು ಗಳ ಜೊತೆಯಲ್ಲಿ ಗುರುವಾರ ಮಧ್ಯಾಹ್ನ ನಿಮಿಷಾಂಭ ದೇವಾಲಯಕ್ಕೆ ಆಗಮಿಸಿದ್ದರು. ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ಈಜಲು ಇಬ್ಬರೂ ನದಿಗೆ ಇಳಿದಾಗ ಸುಳಿಗೆ ಸಿಲುಕಿ ಸಾವನ್ನಪ್ಪಿದ್ದಾರೆ ಎಂದು ಸಬ್‌ಇನ್ಸ್‌ಪೆಕ್ಟರ್ ಶಿವಲಿಂಗ ದಳವಾಯಿ ತಿಳಿಸಿದ್ದಾರೆ.

ಅಗ್ನಿಶಾಮಕ ದಳ ಸಿಬ್ಬಂದಿ ಶವಗಳನ್ನು ನದಿಯಿಂದ ಹೊರ ತೆಗೆದಿದ್ದು, ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಲಾಗಿದೆ. ವಿಶಾಲ್ ಮತ್ತು ರೋಹನ್ ಸಹೋದರಿಯರ ಮಕ್ಕಳಾಗಿದ್ದು, ಇಬ್ಬರಿಗೂ ಈಜು ಬರುತ್ತಿರಲಿಲ್ಲ ಎಂದು ತಿಳಿದು ಬಂದಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯೋಗೋತ್ಸವಕ್ಕೆ ಚಾಲನೆ

ಮಂಡ್ಯ, ಜೂ.13– ಜಿಲ್ಲಾಡಳಿತ ಮತ್ತು ಆಯುಷ್ ಇಲಾಖೆ ವತಿಯಿಂದ 20ರ ವರೆಗೆ ವಿವಿಧ ಸ್ಥಳಗಳಲ್ಲಿ ಹಮ್ಮಿಕೊಂಡಿರುವ ಯೋಗೋತ್ಸವ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ ಚಾಲನೆ ನೀಡಿದರು.

ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಷುಗರ್ ಫ್ಯಾಕ್ಟರಿ ಸರ್ಕಲ್ ಬಳಿ ಇರುವ ಸೆಂಟ್ ಜಾನ್ಸ್ ಶಾಲೆಯಲ್ಲಿ ಯೋಗಾಭ್ಯಾಸ ನಡೆಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನಲ್ಲೇ ಪ್ರತಿ ದಿನ ಅರ್ಧ ಗಂಟೆ ಯೋಗಾಭ್ಯಾಸ ಮಾಡುವುದನ್ನು ರೂಢಿಸಿಕೊಳ್ಳಬೇಕು. ಯೋಗ ನಮ್ಮ ದಿನ ನಿತ್ಯ ಜೀವನದ ಅವಿಭಾಜ್ಯ ಕೆಲಸವಾಗಬೇಕು ಎಂದರು.


ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಲ್ಲಿ ಶಿಸ್ತು, ವಿನಯತೆ, ದೇಶದ ಬಗ್ಗೆ ಗೌರವ ಹೆಚ್ಚಿರುತ್ತದೆ. ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಯೋಗವನ್ನು ಒಂದು ದಿನಕ್ಕೆ ಸೀಮಿತಗೊಳಿಸದೇ ಪ್ರತಿದಿನ ಅಭ್ಯಾಸ ಮಾಡಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಸೀತಾಲಕ್ಷ್ಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ್, ಆಯುಷ್ ಇಲಾಖೆಯ ಡಾ.ಶ್ರೀನಿವಾಸ್, ಡಾ.ಸುಹಾಸಿನಿ, ಶಿವಕುಮಾರ್, ಎಸ್.ಪಿ.ವೈಎಸ್.ಎಸ್ ಜಿಲ್ಲಾ ಮುಖ್ಯಸ್ಥ ರವಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಭಕ್ತ ವತ್ಸಲ, ನಾಗಮ್ಮ, ಡಾ.ಅನಿಲ್ ಕುಮಾರ್ ಉಪಸ್ಥಿತರಿದ್ದರು.



ಮಂಡಿ ಮೂಲಕ ತೆವಳಿ ಹರಕೆ ತೀರಿಸಿದ ಕುಮಾರಸ್ವಾಮಿ ಅಭಿಮಾನಿ

ಕುಮಾರಸ್ವಾಮಿ ಗೆದ್ದು ಮಂತ್ರಿಯಾದರೆ ಮಂಡಿಸೇವೆ ಮಾಡುವುದಾಗಿ ಹರಕೆ ಹೊತ್ತಿದ್ದ ಲೋಕೇಶ್



ಮಂಡ್ಯ, ಜೂ.13– ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ಗೆದ್ದು ಕೇಂದ್ರ ಸಚಿವರಾದರೆ ಮಂಡಿ ಸೇವೆ ಮಾಡುವುದಾಗಿ ಹರಕೆ ಹೊತ್ತಿದ್ದ ಅಭಿಯಾನಿಯೊಬ್ಬ ಮೇಲುಕೋಟೆಯಲ್ಲಿ ಗುರುವಾರ ಮಂಡಿ ಸೇವೆ ಮೂಲಕ ಬೆಟ್ಟವನ್ನೇರಿ ಶ್ರೀಯೋಗಾನರಸಿಂಹಸ್ವಾಮಿ ದೇವರಿಗೆ ಪೂಜೆ ಸಲ್ಲಿಸಿದ್ದಾರೆ.

ಬೆಟ್ಟದ 400ಕ್ಕೂ ಹೆಚ್ಚು ಮೆಟ್ಟಿಲುಗಳನ್ನು ಮಂಡಿಗಾಲುಗಳಿಂದ ಹತ್ತಿ ಗಮನ ಸೆಳೆದಿದ್ದಾರೆ. ಮಂಡ್ಯ ತಾಲೂಕು ಚಿಕ್ಕಮಂಡ್ಯ ಗ್ರಾಮದ ಶಂಕರ್ ಎಂಬುವರ ಪುತ್ರ ಸಿ.ಎಸ್.ಲೋಕೇಶ್ ಎಂಬಾತನೇ ಮಂಡಿಸೇವೆ ಮಾಡಿ ದೇವರಿಗೆ ಹರಕೆ ತೀರಿಸಿರುವ ಹೆಚ್‌ಡಿಕೆ ಅಭಿಮಾನಿ. ಚುನಾವಣೆ ಪೂರ್ವದಲ್ಲಿ ಮಾಜಿ ಮುಖ್ಯಮಂತ್ರಿ, ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಅವರು ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಗೆಲ್ಲಲಿ, ಹಾಗೆಯೇ ಕೇಂದ್ರ ಸಚಿವರೂ ಆಗಲೆಂದು ಮೇಲುಕೋಟೆಯ ಶ್ರೀಯೋಗಾನರಸಿಂಹಸ್ವಾಮಿ ದೇವರಿಗೆ ಹರಕೆ ಹೊತ್ತಿದ್ದರು.

ಅದರಂತೆ ಚುನಾವಣೆಯಲ್ಲಿ ದಾಖಲೆಯ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದ ಎಚ್.ಡಿ.ಕುಮಾರಸ್ವಾಮಿ ಅವರೀಗ ಕೇಂದ್ರದಲ್ಲಿ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರೂ ಆಗಿದ್ದಾರೆ. ಜೂ.16ರಂದು ಮಂಡ್ಯ ನಗರಕ್ಕೂ ಆಗಮಿಸುತ್ತಿದ್ದು, ಜೆಡಿಎಸ್–ಬಿಜೆಪಿ ಕಾರ್ಯಕರ್ತರು ಮತ್ತು ಮಂಡ್ಯ ಜನರಿಂದ ನಾಗರಿಕ ಸನ್ಮಾನವನ್ನೂ ಸ್ವೀಕರಿಸಲಿದ್ದಾರೆ.

ಹೀಗಾಗಿ ಲೋಕೇಶ್ ಅವರು ಗುರುವಾರ ಮುಂಜಾನೆಯೇ ಸ್ನೇಹಿತ ಚಂದನ್ ಜಾಕ್ ಅವರೊಂದಿಗೆ ಮಂಡ್ಯದಿಂದ ಮೇಲುಕೋಟೆಗೆ ಬೈಕ್‌ನಲ್ಲಿ ತೆರಳಿ, ಯೋಗಾನರಸಿಂಹ ಸ್ವಾಮಿ ಬೆಟ್ಟವನ್ನು ಮಂಡಿಗಾಲುಗಳಿಂದಲೇ ಹತ್ತಿ, ಹರಕೆ ತೀರಿಸಿದ್ದಾರೆ. ಹಾಗೆಯೇ ಹೆಚ್‌ಡಿಕೆ ಅವರ ಆರೋಗ್ಯ ಮತ್ತು ಮಂಡ್ಯ ಜಿಲ್ಲೆಯ ಅಭಿವೃದ್ಧಿಗಾಗಿ ಪ್ರಾರ್ಥಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಅರ್ಚನೆ ಮಾಡಿಸಿ ಸಂಕಲ್ಪ ಮಾಡಿಸಿದ್ದಾರೆ.

> ನಾನು ಫೋಟೋಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದೇನೆ. ಕಾರ್ಯಕ್ರಮಕ್ಕಾಗಿ ಮೇಲುಕೋಟೆಗೆ ಆಗಮಿಸಿದ್ದ ಸಂದರ್ಭ ಚುನಾವಣೆ, ಹೆಚ್‌ಡಿಕೆ ಗೆಲುವಿನ ಬಗ್ಗೆ ಸ್ನೇಹಿತರೊಂದಿಗೆ ಮಾತನಾಡುತ್ತಿದ್ದೆ. ಆಗ ಹೆಚ್‌ಡಿಕೆ ಗೆದ್ದರೆ ಏನು ಮಾಡುತ್ತೀಯಾ ಎಂದು ಸ್ನೇಹಿತರು ಪ್ರಶ್ನಿಸಿದರು. ತಡ ಮಾಡದೆ ನಾನು ಇದೇ ಮೇಲುಕೋಟೆಗೆ ಬಂದು ಮಂಡಿಸೇವೆ ಮೂಲಕ ಬೆಟ್ಟ ಹತ್ತಿ ದೇವರಿಗೆ ಪೂಜೆ ಸಲ್ಲಿಸುತ್ತೇನೆ ಎಂದಿದ್ದೆ. ಅದರಂತೆ ಈಗ ಕುಮಾರಣ್ಣ ಗೆದ್ದು, ಸೆಂಟ್ರಲ್ ಮಿನಿಸ್ಟರ್ ಆಗಿದ್ದಾರೆ. ಹೀಗಾಗಿ ಮಂಡಿಸೇವೆ ಮೂಲಕ ಹರಕೆ ತೀರಿಸಿದ್ದೇನೆ.
> – ಸಿ.ಎಸ್.ಲೋಕೇಶ್, ಹೆಚ್‌ಡಿಕೆ ಅಭಿಮಾನಿ, ಚಿಕ್ಕಮಂಡ್ಯ

ಬಸ್ ನಿಲುಗಡೆಗೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ

ಯಳಂದೂರು, ಜೂ.13–ಸಾರಿಗೆ ಬಸ್ ನಿಲುಗಡೆಗೆ ಆಗ್ರಹಿಸಿ ತಾಲೂಕಿನ ಯರಿಯೂರು ಗ್ರಾಮಸ್ಥರು ಗುರುವಾರ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಗ್ರಾಮದ ಹೆದ್ದಾರಿಯಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕೆಎಸ್‌ಆರ್‌ಟಿಸಿ ವಿಭಾಗಾಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಯರಿಯೂರು ಗ್ರಾಮದಿಂದ ವಿದ್ಯಾರ್ಥಿಗಳು, ಉದ್ಯೋಗಿಗಳು, ಕೂಲಿಕಾರ್ಮಿಕರು ದಿನನಿತ್ಯ ಚಾಮರಾಜನಗರ, ಕೊಳ್ಳೇಗಾಲ, ಮೈಸೂರು ಹಾಗೂ ಬೆಂಗಳೂರಿಗೆ ತೆರಳುತ್ತಾರೆ. ಹಿಂದೆ ಗ್ರಾಮದ ಮೂಲಕ ತೆರಳುವ ಬಸ್‌ಗಳನ್ನು ನಿಲುಗಡೆ ಮಾಡುವಂತೆ ಹಿಂದಿನ ಶಾಸಕರಿಂದ ಶಿಫಾರಸು ಪತ್ರ ನೀಡಿ ಕೋರಿಕೆ ನಿಲುಗಡೆ ಬೋರ್ಡ್ ಸಹ ಅಳವಡಿಸಲಾಗಿತ್ತು ಆದರೆ, ಗ್ರಾಮದ ನಿಲ್ದಾಣದಲ್ಲಿ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳ ಆದೇಶ ಪತ್ರವಿದ್ದರೂ ಚಾಲಕರು ಬಸ್ ನಿಲ್ಲಿಸುತ್ತಿಲ್ಲ ಎಂದು ದೂರಿದರು.

ಈ ಸಂಬಂಧ ಚಾಲಕರು ಹಾಗೂ ನಿರ್ವಾಹಕರನ್ನು ಪ್ರಶ್ನಿಸಿದರೆ ಬಸ್ ನಿಲುಗಡೆಗೆ ನಮಗೆ ಯಾವುದೇ ಸೂಚನೆ ಇಲ್ಲ ಎಂದು ಉಡಾಫೆತನದಿಂದ ವರ್ತಿಸುತ್ತಾರೆ. ಇದರಿಂದ ಬೆಂಗಳೂರು, ಮಹದೇಶ್ವರಬೆಟ್ಟ, ಕೊಳ್ಳೇಗಾಲ, ಚಾಮರಾಜನಗರ ಕಡೆಯಿಂದ ಬರುವವರು ಯಳಂದೂರಿನಲ್ಲಿ ಇಳಿದು ಖಾಸಗಿ ಬಸ್ ಹತ್ತಿ ಗ್ರಾಮಕ್ಕೆ ಬರುವ ಸ್ಥಿತಿ ನಿರ್ಮಾಣವಾಗಿದೆ. ಇನ್ನೂ ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು ಹಾಗೂ ರೈತರಿಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿದರು. ಮುಂದಿನ ದಿನದಲ್ಲಿ ಗ್ರಾಮದಲ್ಲಿ ಬಸ್‌ಗಳನ್ನು ನಿಲುಗಡೆ ಮಾಡದಿದ್ದರೆ ಉಗ್ರವಾಗಿ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

ನಂತರ ಸ್ಥಳಕ್ಕಾಗಮಿಸಿದ ಕೆಎಸ್ ಆರ್‌ಟಿಸಿ ವಿಭಾಗಾಧಿಕಾರಿಗಳು ಪ್ರತಿಭಟನಾಕಾರರ ಮನವಿ ಆಲಿಸಿ, ಮುಂದಿನ ದಿನಗಳಲ್ಲಿ ಗ್ರಾಮದಲ್ಲಿ ನಿಲುಗಡೆಗೆ ಬಸ್ ಚಾಲಕರಿಗೆ ಸೂಚನೆ ನೀಡುವುದಾಗಿ ಭರವಸೆ ನೀಡಿದರು. ಬಳಿಕ ಪ್ರತಿಭಟನೆ ಅಂತ್ಯಗೊಳಿಸಲಾಯಿತು.

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ಗೋಪಿ, ಶ್ರೀನಿವಾಸ್, ನಿಂಗರಾಜು, ಚಂದ್ರಶೇಖರ್, ಪ್ರಕಾಶ್, ಕೃಷ್ಣಯ್ಯ ಇತರರು ಭಾಗವಹಿಸಿದ್ದರು.



ಯಳಂದೂರು ತಾಲೂಕಿನ ಯರಿಯೂರಿನಲ್ಲಿ ಬಸ್ ನಿಲ್ಲಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸಿದರು.

15 ದಿನದೊಳಗೆ ವಾರ್ಡ್‌ಗಳ ಸಮಸ್ಯೆ ಬಗೆಹರಿಸಿ

● ಪೌರಾಯುಕ್ತರಿಗೆ ಜಿಲ್ಲಾಧಿಕಾರಿ ಸೂಚನೆ ● ಶಿಲ್ಪನಾಗ್ ಭೇಟಿ, ಸಮಸ್ಯೆ ಆಲಿಕೆ



ಚಾಮರಾಜನಗರದ 10 ಮತ್ತು 26ನೇ ವಾರ್ಡ್‌ಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಶಿಲ್ಪನಾಗ್ ನಿವಾಸಿಗಳ ಸಮಸ್ಯೆ ಆಲಿಸಿದರು.

ಚಾಮರಾಜನಗರ, ಜೂ.13–ನಗರದ 10 ಮತ್ತು 26ನೇ ವಾರ್ಡ್‌ಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳೊಂದಿಗೆ ಗುರುವಾರ ಭೇಟಿ ನೀಡಿ, ನಿವಾಸಿಗಳ ಸಮಸ್ಯೆ ಆಲಿಸಿದರು.

ಯುವ ಮುಖಂಡ ಎಸ್.ಭಾನುಪ್ರಕಾಶ್ ನೇತೃತ್ವದಲ್ಲಿ ನಿವಾಸಿಗಳು ನೀಡಿದ ದೂರಿನ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಅಧಿಕಾರಿಗಳೊಂದಿಗೆ ಗುರುವಾರ ವಾರ್ಡ್‌ಗಳಿಗೆ ಭೇಟಿ ನೀಡಿದರು. 26ನೇ ವಾರ್ಡ್‌ನಲ್ಲಿರುವ ಅಂಬೇಡ್ಕರ್ ಉದ್ಯಾನಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಇದೇ ವೇಳೆ ನಿವಾಸಿಗಳು ಸಮಸ್ಯೆಗಳ ಸರಮಾಲೆಯನ್ನೇ ಬಿಚ್ಚಿಟ್ಟರು. ನಿಗದಿತ ಸಮಯಕ್ಕೆ ನೀರು ಬಿಡುತ್ತಿಲ್ಲ. ಇದರಿಂದ ಕೆಲಸಕ್ಕೆ ಹೋಗುವವರು ಹಾಗೂ ಶಾಲೆಗೆ ತೆರಳುವ ಮಕ್ಕಳಿಗೆ ತೊಂದರೆಯಾಗುತ್ತಿದೆ. ವಾಟರ್‌ಮನ್ ಬೆಳಗ್ಗೆ ಸರಿಯಾಗಿ ನೀರು ಬಿಡುತ್ತಿಲ್ಲ. ಶುದ್ಧ ಕುಡಿಯುವ ನೀರು ಘಟಕದಲ್ಲೂ ನೀರು ಸಿಗುತ್ತಿಲ್ಲ. ಕಸ ವಿಲೇವಾರಿ ಮಾಡುತ್ತಿಲ್ಲ. ಪ್ರತಿನಿತ್ಯ ಕಸ ಸಂಗ್ರಹಗೆ ಕಾರ್ಮಿಕರು ಬರುತ್ತಿಲ್ಲ. ಇದರಿಂದ ರಸ್ತೆಯಲ್ಲಿ ಕಸ ಬಿದ್ದು ಗಬ್ಬುನಾರುತ್ತಿದೆ. ಮೂಲ ಸೌಲಭ್ಯಗಳು ಮರೀಚಿಕೆಯಾಗಿದೆ ಎಂದು ನಿವಾಸಿಗಳು ಜಿಲ್ಲಾಧಿಕಾರಿ ಗಮನಕ್ಕೆ ತಂದರು.

ನಂತರ ಜಿಲ್ಲಾಧಿಕಾರಿ ಶಿಲ್ಪನಾಗ್, ಸ್ಥಳದಲ್ಲಿದ್ದ ಪೌರಾಯುಕ್ತ ರಾಮದಾಸ್ ಹಾಗೂ ಪುರಸಭೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು, ಜನರ ಸಮಸ್ಯೆಗಳನ್ನು ಸ್ಥಳೀಯವಾಗಿ ಪರಿಹರಿಸಬೇಕು ಎಂದು ಸೂಚಿಸಿದರು.

ನಗರಸಭೆ ಸಿಬ್ಬಂದಿ ಬೆಳಗ್ಗೆ 6 ರಿಂದ 9.30ರವರಗೆ ಎಲ್ಲಾ ಮನೆಗಳ ಕಸ ಸಂಗ್ರಹಣೆ ಮಾಡಬೇಕು. ಆರೋಗ್ಯಾಧಿಕಾರಿಗಳು ಬೆಳಗ್ಗೆ 6 ಗಂಟೆಗೆ ಸ್ಥಳ ಪರಿಶೀಲಿಸಬೇಕು. ಚರಂಡಿಗಳಲ್ಲಿ ಹೂಳು ತೆಗೆಯಬೇಕು. ನಗರಸಭಾ ವ್ಯಾಪ್ತಿಯಲ್ಲಿ ಸುಮಾರು 290 ಬೋರ್‌ವೆಲ್‌ಗಳಿವೆ. ನಿರಂತರವಾಗಿ ನೀರು ಬರುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದೆ. ಹಾಗಾಗಿ ನಗರಸಭಾ ಅಧಿಕಾರಿಗಳು ಸಮಸ್ಯೆ ಬಗಹರಿಸಿ, ನಿವಾಸಿಗಳಿಗೆ ಅನುಕೂಲ ಕಲ್ಪಿಸಬೇಕು ಎಂದರು.

ಇದೇ ವೇಳೆ ನಗರಸಭಾ ಸದಸ್ಯ ಮನೋಜ್ ಪಟೇಲ್, ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

ಇಂದು ನೀರು ಸರಬರಾಜಿನಲ್ಲಿ ವ್ಯತ್ಯಯ

ಚಾಮರಾಜನಗರ: ತಿ.ನರಸೀಪುರದಿಂದ ಕಾವೇರಿ ನೀರು ಸರಬರಾಜು ಮಾಡುವ ಪೈಪ್ ಕುರುಬೂರು ಬಳಿ ಒಡೆದು ಹೋಗಿ ನೀರು ಪೋಲಾಗುತ್ತಿರುವ ಹಿನ್ನೆಲೆಯಲ್ಲಿ ಇದನ್ನು ದುರಸ್ತಿಪಡಿಸಲು ಮೋಟಾರ್ ಸ್ಥಗಿತಗೊಳಿಸಬೇಕಿದೆ. ಇದರಿಂದ ಜೂ.14ರಂದು ಚಾಮರಾಜನಗರಕ್ಕೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್ ತಿಳಿಸಿದ್ದಾರೆ.

ಬಂಗ್ಲೆಪೋಡಿನಲ್ಲಿ ಕಾಣಿಸಿಕೊಂಡ ಕಾಡಾನೆ



ಯಳಂದೂರು: ತಾಲೂಕಿನ ಬಿಳಿಗಿರಿರಂಗನಬೆಟ್ಟದ ಬಂಗ್ಲೆಪೋಡಿನಲ್ಲಿ ಗುರುವಾರ ಬೆಳ್ಳಂಬೆಳಗ್ಗೆ ಕಾಡಾನೆಯೊಂದು ಕಾಣಿಸಿಕೊಂಡು ಕೆಲಕಾಲ ಆತಂಕ ಮೂಡಿಸಿದೆ.

ಬಂಗ್ಲೆಪೋಡಿನ ರಸ್ತೆ ಬಳಿ ಕಾಣಿಸಿಕೊಂಡ ಉದ್ದನೆಯ ದಂತವಿರುವ ಕಾಡಾನೆ ಬಿಳಿಗಿರಿರಂಗನಬೆಟ್ಟದಿಂದ ಯಳಂದೂರಿಗೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಮೇಲೆ ದಾಳಿಗೆ ಮುಂದಾಗಿದೆ. ಅಲ್ಲದೆ, ನಂತರ ಕೆಲಕಾಲ ಅಲ್ಲೇ ಬೀಡುಬಿಟ್ಟು ನಿವಾಸಿಗಳಲ್ಲಿ ಆತಂಕ ಸೃಷ್ಟಿಸಿದೆ. ಈ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಬಿಳಿಗಿರಿರಂಗನಬೆಟ್ಟದ ಅರಣ್ಯ ಪ್ರದೇಶದಿಂದ ಆನೆಗಳು ಆಗಾಗ್ಗೆ ಪೋಡುಗಳು ಹಾಗೂ ಜನನಿಬಿಡ ಸ್ಥಳಗಳಿಗೆ ತೆರಳಿ ಆತಂಕ ಸೃಷ್ಟಿಸುತ್ತಿರುವುದು ಸಾಮಾನ್ಯವಾಗಿದೆ. ಕೂಡಲೇ ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಕಾಡಾನೆಗಳ ಹಾವಳಿಯನ್ನು ತಪ್ಪಿಸಲು ಕ್ರಮವಹಿಸಬೇಕು ಎಂದು ನಿವಾಸಿಗಳು ಆಗ್ರಹಿಸಿದ್ದಾರೆ.

ಅಲ್ಲದೆ, ಬಿಳಿಗಿರಿರಂಗನಬೆಟ್ಟಕ್ಕೆ ತೆರಳುವ ಅರಣ್ಯ ಪ್ರದೇಶದ ರಸ್ತೆಯಲ್ಲಿ ಕರಡಿಯೊಂದು ಕಂಡುಬಂದಿದ್ದು, ವಾಹನದಲ್ಲಿ ತೆರಳುತ್ತಿದ್ದವರು ಕರಡಿ ಓಡಾಡುವ ದೃಶ್ಯವನ್ನು ಸೆರೆಹಿಡಿದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಚಾಮರಾಜನಗರ, ಜೂ.13– ಸೆಸ್ಕ್‌ನ ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ.15ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹಾಲಳ್ಳಿ, ಕಮರಹಳ್ಳಿ, ಬೊಗ್ಗನಪುರ, ಮರಳಾಪುರ, ರಂಗನಾಥಪುರ, ತೊರವಳ್ಳಿ, ನಿಟ್ರೆ, ಹಿರಿಕಾಟಿ, ಚಿಕ್ಕಾಟಿ, ಅರೆಪುರ, ತೊಂಡವಾಡಿ ಹಾಗೂ ಬೇಗೂರು, ವಾಟರ್ ಸಪ್ಲೈ, ಹೆಗ್ಗಡಹಳ್ಳಿ, ಮಂಚಳ್ಳಿ ಎನ್.ಜೆ.ವೈ, ಶೆಟ್ಟಿಹಳ್ಳಿ, ದೇಸಿಪುರ, ಇಂಡಸ್ಟ್ರಿಯಲ್, ಹೊರೆಯಾಲ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುಟ್ಟಲಿಂಗಪ್ಪ ನಿಧನ



ಆಲೂರು: ಚಾಮರಾಜನಗರ ತಾಲೂಕಿನ ಸಿಂಗನಪುರ ಗ್ರಾಮದ ವೀರಶೈವ ಮುಖಂಡ ಪುಟ್ಟಲಿಂಗಪ್ಪ (74) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಸಿಂಗನಪುರದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಐದನೇ ಪುಟದಿಂದ

ಸಿಎಂ ಅಸಮಾಧಾನ

ಫಲಿತಾಂಶ ಮತ್ತು ಗ್ಯಾರಂಟಿ ಯೋಜನೆಗಳ ಅನುಷ್ಠಾನವನ್ನೇ ಮುಂದಿಟ್ಟು ಕೊಂಡು ಮಾತನಾಡಿದ ಮುಖ್ಯಮಂತ್ರಿ, ಕಳೆದ ಒಂದು ವರ್ಷದಲ್ಲಿ ನಡೆದಿರುವ ಸರ್ಕಾರಕ್ಕೂ ಮುಂದಿನ ಆಡಳಿತಕ್ಕೂ ವ್ಯತ್ಯಾಸ ಕಾಣಬೇಕು. ಯಾವುದೇ ಕೆಲಸ ತೆಗೆದುಕೊಂಡರೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ, ನೀವು ಮಾಡುವ ಕಾರ್ಯ ಜನಪರ ಮತ್ತು ಜನಸ್ನೇಹಿ ಆಗಿರಬೇಕು. ಒಟ್ಟಾರೆ ಮುಂದಿನ ದಿನಗಳ ಆಡಳಿತ ವ್ಯವಸ್ಥೆ ಪೂರ್ಣ ಬದಲಾವಣೆ ಆಗಬೇಕು, ಇದಕ್ಕೆ ಏನು ಕ್ರಮ ಕೈಗೊಳ್ಳುತ್ತೀರೋ ಕೈಗೊಳ್ಳಿ ಎಂದು ಸಚಿವರು ಮತ್ತು ಮುಖ್ಯ ಕಾರ್ಯದರ್ಶಿ ಅವರಿಗೆ ತಿಳಿಸಿದ್ದಾರೆ.

ಜನಪರ ಆಡಳಿತ: ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಜನಸ್ನೇಹಿ ಮತ್ತು ಜನಪರ ಆಡಳಿತ ತರಲು ತೀರ್ಮಾನಿಸಲಾಗಿದೆ.

ಇನ್ನು ಸರ್ಕಾರದ ಮುಂದೆ ಬರುವ ಅರ್ಜಿಗಳ ವಿಲೇವಾರಿ ವಿಳಂಬವಾಗುವುದಿಲ್ಲ ಮತ್ತು ಅಧಿಕಾರಿಗಳು ನಿರ್ಲಕ್ಷ್ಯ ತೋರುವಂತಿಲ್ಲ. ಇದೇ ಕಾರಣಕ್ಕಾಗಿ ರಾಜ್ಯ ಸಚಿವ ಸಂಪುಟ ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 147 ಟೆಂಡರ್‌ಗಳನ್ನು ಕರೆದಿದ್ದು ಅದರಲ್ಲಿ ಏಳು ಕಾಮಗಾರಿಗಳು ಮಾತ್ರ ಮುಕ್ತಾಯವಾಗಿವೆ ಎಂದರು. ಸಭೆ, ಟೆಂಡರ್ ಅರ್ಜಿಗಳಿಗೆ ಸಂಬಂಧಿಸಿದಂತೆಯೂ ಚರ್ಚೆ ನಡೆಸಿದ್ದಲ್ಲದೆ, ಇನ್ನು ಒಂದು ತಿಂಗಳೊಳಗಾಗಿ ಎಲ್ಲಾ ಗುತ್ತಿಗೆ ಕೆಲಸಗಳನ್ನು ಪ್ರಾರಂಭಿಸುವಂತೆ ಮುಖ್ಯಮಂತ್ರಿ ಅವರು ಆದೇಶ ಮಾಡಿದ್ದಾರೆ.

ತಿಂಗಳುಗಳ ಹಿಂದೆಯೇ ಕಾಮಗಾರಿ ಕೈಗೆತ್ತಿಕೊಳ್ಳಲು ಅನುಮತಿ ನೀಡಿದ್ದರೂ ಇನ್ನೂ ಕಾರ್ಯ ಕೈಗೆತ್ತಿಕೊಳ್ಳದಿರುವುದಕ್ಕೆ ಕಾರಣ ಕೇಳಿದ ಮುಖ್ಯಮಂತ್ರಿ ಅವರು, ಆಡಳಿತ ಮತ್ತಷ್ಟು ಚುರುಕುಗೊಳಿಸುವಂತೆ ಮುಖ್ಯಕಾರ್ಯದರ್ಶಿಗಳಿಗೆ ಆದೇಶಿಸಿದರು.

ಕಾಮಗಾರಿ ವಿಷಯದಲ್ಲಿ ಇನ್ನೂ 97 ಪ್ರಸ್ತಾವನೆಗಳು ಟೆಂಡರ್ ಹಂತದಲ್ಲಿವೆ. 19 ಪರಿಶೀಲನೆಯಲ್ಲಿವೆ, 18 ಕಾರ್ಯಾದೇಶವಾಗಿವೆ. ಏಳು ಮಾತ್ರ ಪೂರ್ಣಗೊಂಡಿವೆ. ಸರ್ಕಾರ ಅನುಮತಿ ನೀಡಿದರೂ ವಿವಿಧ ಇಲಾಖೆಗಳು ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಂಡಿಲ್ಲ ಎಂದು ಪಾಟೀಲ್ ಮಾಹಿತಿ ನೀಡಿದರು.

ಶಿಫಾರಸ್ಸು ಜಾರಿ ಜವಾಬ್ದಾರಿ ಮುಖ್ಯಮಂತ್ರಿಗೆ

ಶೇ.30ರಷ್ಟು ವೇತನ ಹೆಚ್ಚಳಕ್ಕೆ ಬೇಡಿಕೆ ಇಟ್ಟಿದ್ದಾರೆ. ಆದರೆ, ಆಯೋಗ ಶೇಕಡ 27.5ರಷ್ಟು ಏರಿಕೆಗೆ ಶಿಫಾರಸು ಮಾಡಿದೆ.

ಹಿಂದಿನ ಸರ್ಕಾರ ಈಗಾಗಲೇ ಶೇಕಡ 17ರಷ್ಟು ಹೆಚ್ಚಳ ಮಾಡಿದೆ. ಇನ್ನುಳಿದ 10.5 ಹಾಗೂ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರದ ಮೇಲೆ ಹೆಚ್ಚಿನ ಹೊರೆಯಾಗುತ್ತದೆ. ಹೆಚ್ಚುವರಿ ಹೊರೆಯನ್ನು ಸರಿದೂಗಿಸುವ ಮತ್ತು ರಾಜ್ಯ ಸಂಪನ್ಮೂಲ, ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಸಂಪುಟ ವಿಸ್ತೃತ ಚರ್ಚೆ ನಡೆಸಿತು. ಮಾಡಿರುವ ಶಿಫಾರಸಿನಲ್ಲೇ ಶೇಕಡ 2ರಷ್ಟು ಕಡಿತ ಮಾಡಿ ಜುಲೈ 1ರಿಂದ ಜಾರಿಗೊಳಿಸುವ ಬಗ್ಗೆಯೂ ಚರ್ಚೆ ನಡೆಸಿತಾದರೂ ಸಭೆ ಅಂತಿಮ ತೀರ್ಮಾನ ಕೈಗೊಳ್ಳಲಾಗಿಲ್ಲ.

ಹಣಕಾಸು ಖಾತೆ ಹೊಂದಿರುವ ಮುಖ್ಯಮಂತ್ರಿ ಅವರೇ ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಿ. ನಂತರ ಸಭೆ ಅನುಮೋದನೆ ನೀಡುವ ಬಗ್ಗೆ ನಿರ್ಧರಿಸಲಾಯಿತೆಂದು ಹೇಳಲಾಗಿದೆ.

ಯಡಿಯೂರಪ್ಪ ಪೋಕ್ಸೋ ಕೇಸ್‌ನಲ್ಲಿ ಬಂಧನ ಸಾಧ್ಯತೆ

ಹೇಳಿ, ಆಕೆಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು.

ಈ ಹಿನ್ನೆಲೆಯಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಅವರ ವಿರುದ್ಧ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಮಾರ್ಚ್ ತಿಂಗಳಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣವನ್ನು ರಾಜ್ಯ ಸರ್ಕಾರದಿಂದ ಸಿಐಡಿ ತನಿಖೆಗೆ ವಹಿಸಲಾಗಿತ್ತು. ಆದರೆ, ಪ್ರಕರಣ ವಿಚಾರಣೆಗೆ ನೋಟೀಸ್ ಜಾರಿ ಮಾಡಲಾಗಿತ್ತು. ಆದರೆ, ಎರಡು ಬಾರಿ ನೋಟೀಸ್ ನೀಡಿದರೂ ಹಾಜರಾಗದ ಹಿನ್ನೆಲೆಯಲ್ಲಿ ಸಿಐಡಿ ಪೊಲೀಸರು ಯಡಿಯೂರಪ್ಪ ಬಂಧನಕ್ಕೆ ಅವಕಾಶ ನೀಡಬೇಕು ಎಂದು ಕೋರ್ಟ್ ಮೊರೆ ಹೋಗಿದ್ದರು.

ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ಫಾಸ್ಟ್ ಟ್ರ್ಯಾಕ್ ಕೋರ್ಟ್ ಮುಂದೆ ಸಿಐಡಿ ಪರ ವಕೀಲರು, ಈಗಾಗಲೇ ಪೋಕ್ಸೋ ಕೇಸಿನಲ್ಲಿ ಶೇ.90 ತನಿಖೆ ಮುಗಿದಿದ್ದು, ಯಡಿಯೂರಪ್ಪ ಅವರ ವಿಚಾರಣೆ ಮಾತ್ರ ಬಾಕಿ ಉಳಿದಿದ್ದು, ಅವರಿಗೆ ನೋಟೀಸ್ ನೀಡಿದರೂ ಹಾಜರಾಗುತ್ತಿಲ್ಲ. ಹೀಗಾಗಿ, ಯಡಿಯೂರಪ್ಪ ಅವರ ವಿರುದ್ಧ ಜಾಮೀನು ರಹಿತ ವಾರೆಂಟ್ ಜಾರಿ ಮಾಡುವಂತೆ ಮನವಿ ಮಾಡಿದರು. ಈ ಮನವಿ ಪುರಸ್ಕರಿಸಿದ 1ನೇ ಫಾಸ್ಟ್ ಟ್ರ್ಯಾಕ್ ಕೋರ್ಟ್ ನ್ಯಾಯಾಧೀಶರು ಜಾಮೀನು ರಹಿತ ವಾರೆಂಟ್ ಜಾರಿ ಮಾಡಲಾಗಿದೆ.

> "ರಾಜ್ಯ ಅಪ್ಪಾಜಿ ಅಮ್ಮೇ (ಯಡಿಯೂರಪ್ಪ) ನಿಮ್ಮ ಮೇಲಿನ ಆರೋಪಗಳು, ಷಡ್ಯಂತ್ರಗಳು ಹೊಸದೇನೂ ಅಲ್ಲ. ನಂಜನ ವರ್ತುಲಗಳನ್ನು ಮೆಟ್ಟಿ ವಿಷಕಂಠನಂತೆ ಮೇಲೆದ್ದು ಬಂದು ಸಮಾಜಕ್ಕೆ 'ಅಮೃತ' ತೆರೆದುಕೊಟ್ಟ ಮಾತೃ ಹೃದಯದ ಒಬ್ಬ ದಿಟ್ಟ ನೇತಾರ ನೀವು. ಈ ಇಳೀ ವಯಸ್ಸಿನಲ್ಲೂ ನೀಚ ಮನಸ್ಥಿತಿಗಳು ರೂಪಿಸಿರುವ ಪಿತೂರಿಯ ಬಾಣ ನಿಮ್ಮತ್ತ ನೆಟ್ಟಿದೆ. ಅದು ತಂತಾನೇ ನಿಷ್ಕ್ರಿಯಗೊಳ್ಳಲಿದೆ. ಕೋಟಿ ಹೃದಯಗಳ ಅಭಿಮಾನದ ಕೋಟೆ ಸದಾ ನಿಮ್ಮೊಂದಿಗಿದೆ." – ರಘು ಕೌಟಿಲ್ಯ, ರಾಜ್ಯ ಬಿಜೆಪಿ ಹಿಂದುಳಿದ ಮೋರ್ಚಾ ಅಧ್ಯಕ್ಷ



ಪೋಕ್ಸೋ ಪ್ರಕರಣ; ಅಗತ್ಯವಿದ್ದರೆ ಎಸ್‌ಐಟಿ ಯಡಿಯೂರಪ್ಪರನ್ನು ಬಂಧಿಸುತ್ತೆ!



ಬೆಂಗಳೂರು: ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಅಗತ್ಯವಿದ್ದರೆ ಸಿಐಡಿ ಅವರು ಬಂಧಿಸಲಿದ್ದಾರೆಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಜೂನ್ 15ರೊಳಗೆ ಚಾರ್ಜ್ ಶೀಟ್ ಸಲ್ಲಿಸಬೇಕು, ಹೀಗಾಗಿ ಯಡಿಯೂರಪ್ಪ ಅವರಿಗೆ ತನಿಖೆಗೆ ಬರಲು ನೋಟೀಸ್ ನೀಡಿದ್ದರು, ಆದರೆ ಅವರು ಹಾಜರಾಗಿಲ್ಲ. ತನಿಖಾ ಸಂಸ್ಥೆ ಕಾನೂನು ವ್ಯಾಪ್ತಿಯಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೈಗೊಳ್ಳಲಿದೆ. ಈ ಬಗ್ಗೆ ನಾನು ಬಂಧಿಸುತ್ತಾರೆ, ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ನಿಗದಿತ ಸಮಯದಲ್ಲಿ ಚಾರ್ಜ್‌ಶೀಟ್ ಸಲ್ಲಿಸಬೇಕಿರುವುದರಿಂದ ಯಡಿಯೂರಪ್ಪನವರ ಹೇಳಿಕೆ ಸಿಐಡಿ ಅವರಿಗೆ ಅತ್ಯಗತ್ಯ, ಅವರು ಹಾಜರಾಗದಿರುವುದರಿಂದ ಏನು ಕ್ರಮ ಕೈಗೊಳ್ಳುತ್ತಾರೋ ನನಗೆ ತಿಳಿಯದು ಎಂದರು. ಈ ಮಧ್ಯೆ ಯಡಿಯೂರಪ್ಪ ಅವರು ಪ್ರಕರಣ ರದ್ದುಪಡಿಸಲು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಜೊತೆಗೆ ನಿರೀಕ್ಷಣಾ ಜಾಮೀನಿಗೂ ಅರ್ಜಿ ಸಲ್ಲಿಸಿದ್ದಾರೆ ಎಂದರು.

ಮಂಡ್ಯದಲ್ಲಿ ಭಾನುವಾರ ನಾಗರಿಕ ಸನ್ಮಾನ

ಎಂದು ತಿಳಿಸಿದರು. ಮಂಡ್ಯ ಜಿಲ್ಲೆಗೆ ಕೇಂದ್ರ ಸಚಿವರಾಗಿ ಯಾವ್ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೊಡಬೇಕೆಂಬುದನ್ನು ಅಂದಿನ ಕಾರ್ಯಕ್ರಮದಲ್ಲೇ ಕುಮಾರಸ್ವಾಮಿ ಘೋಷಿಸಲಿದ್ದು, ಉಕ್ಕು ಹಾಗೂ ಭಾರೀ ಕೈಗಾರಿಕಾ ಇಲಾಖೆಗಳು ಪ್ರಬಲ ಖಾತೆಗಳಾಗಿದ್ದು, ಇದರಿಂದ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿಯಾಗಲಿದೆ. ಕೇವಲ ಮಂಡ್ಯ ಜಿಲ್ಲೆ ಮಾತ್ರವಲ್ಲದೇ ರಾಜ್ಯ ಮತ್ತು ದೇಶಕ್ಕೂ ಅನುಕೂಲವಾಗಲಿದೆ. ಕುಮಾರಸ್ವಾಮಿ ಅವರು ಉಕ್ಕು ಮತ್ತು ಭಾರೀ ಕೈಗಾರಿಕಾ ಮಂತ್ರಿಯಾಗಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂಬ ಆಶ್ವಾಸ ನನಗಿದೆ ಎಂದರು.

ರಾಜ್ಯ ಸರ್ಕಾರದ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಬೇಕು: ಕುಮಾರಸ್ವಾಮಿ ಅವರು ಕೇಂದ್ರ ಮಂತ್ರಿಯಾಗಿರುವುದರಿಂದ ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ ನಡೆಯುವ ಕಾರ್ಯಕ್ರಮಗಳನ್ನು ಹೊಂದಾಣಿಕೆಯಲ್ಲಿ ದಿನಾಂಕ ನಿಗದಿ ಮಾಡಿಕೊಂಡು ಆಯೋಜಿಸಬೇಕು. ಹೆಚ್ಚಿಕೆ ಅವರು ಜಿಲ್ಲೆಯಲ್ಲಿ ದಿಶಾ ಸಭೆ ಸೇರಿದಂತೆ ಇನ್ನಿತರ ಸಭೆಗಳಿಗೆ ಚಾಚೂ ತಪ್ಪದೇ ಹಾಜರಾಗುತ್ತಾರೆ. ಆದರೆ ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಮಂತ್ರಿ ಅವರ ವರಿಗೆ ಬೇಕಾದಾಗ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದರೆ ಹೆಚ್ಚಿಕೆ ಬರಲು ಸಾಧ್ಯವಾಗುವುದಿಲ್ಲ. ಅವರು ಕ್ಷೇತ್ರದ ಜೊತೆಗೆ ದೆಹಲಿಯಲ್ಲಿ ತಮ್ಮ ಕಾರ್ಯಾಲಯದಲ್ಲಿ ಕೆಲಸ ನಿರ್ವಹಿಸಬೇಕು. ಜೊತೆಗೆ ದೇಶದಾದ್ಯಂತ ಇಲಾಖೆಗೆ ಸಂಬಂಧಿಸಿದಂತೆ ಪ್ರವಾಸ ಸಹ ಮಾಡಬೇಕಿರುತ್ತದೆ ಎಂದರು. ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಮಾತನಾಡಿ, ಉಕ್ಕು ಹಾಗೂ ಕೈಗಾರಿಕಾ ಸಚಿವರಾಗಿರುವ ಹೆಚ್ಚಿಕೆ ಈಗಾಗಲೇ ಮಂಡ್ಯದಲ್ಲಿ ಹಲವು ಕಾರ್ಖಾನೆಗಳನ್ನು ಸ್ಥಾಪಿಸಲು ಚಿಂತನೆ ನಡೆಸಿದ್ದಾರೆ. ಎಲ್ಲಿಲ್ಲಿ ಸರ್ಕಾರಿ ಜಮೀನು ನಿದೆ ಅದರಿಂದ ಯಾವ ರೀತಿಯ ಯೋಜನೆಗಳನ್ನು ರೂಪಿಸಬೇಕು. ಜೊತೆಗೆ ಯಾವ ರೀತಿ ಉದ್ಯೋಗ ಸೃಷ್ಟಿಸಬೇಕೆಂಬ ಚಿಂತನೆಯಲ್ಲಿದ್ದಾರೆ. ನಮ್ಮ ಜೊತೆಯಲ್ಲೂ ಈ ಬಗ್ಗೆ ಚರ್ಚೆ ನಡೆಸಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಮಂಡ್ಯ ಮೈಷುಗರ್ ಕಾರ್ಖಾನೆಯ ಅಭಿವೃದ್ಧಿಯೂ ಅವರ ಗಮನದಲ್ಲಿದ್ದು, ಅವರ ಇಲಾಖಾ ವ್ಯಾಪ್ತಿಗೆ ಬರುವುದೋ ಇಲ್ಲವೋ ಎಂಬುದರ ಬಗ್ಗೆ ನಿರ್ಧರಿಸಿ, ಒಂದು ವೇಳೆ ತಮ್ಮ ಇಲಾಖೆ ಸುಪರ್ದಿಗೆ ಬಾರದಿದ್ದಲ್ಲಿ ಬೇರೆ ಇಲಾಖೆಯ ಮಂತ್ರಿಗಳೊಂದಿಗೆ ಚರ್ಚಿಸಿ ಕಾರ್ಖಾನೆ ಅಭಿವೃದ್ಧಿಗೆ ಕಟಿಬದ್ಧರಾಗಿದ್ದಾರೆ ಎಂದರು.

ನಾಲಾ ಆಧುನೀಕರಣದ ಹೆಸರಲ್ಲಿ ಸರ್ಕಾರ ನಾಲೆಗಳಿಗೆ ನೀರು ಬಿಡುವುದನ್ನು ನಿಲ್ಲಿಸಿದೆ. ಈ ಕೂಡಲೇ ನಾಲೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಬಿಡಬೇಕು. ಕಾಮಗಾರಿಯನ್ನು ಒಂದು ಕಟ್ಟು ನೀರು ಬಿಟ್ಟ ನಂತರ ಆರಂಭಿಸಲಿ. ಸದ್ಯ ಡ್ಯಾಂನಲ್ಲಿ ಎರಡು ಕಟ್ಟು ನೀರು ಬಿಡುವಷ್ಟು ನೀರಿದ್ದು, ಮಾನವೀಯ ದೃಷ್ಟಿಯಿಂದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೂಡಲೇ ಕೆಆರ್‌ಎಸ್ ಡ್ಯಾಂನಿಂದ ನೀರು ಬಿಡುವಂತೆ ಆಗ್ರಹಿಸಿದರು.

ಗೋಷ್ಠಿಯಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಡಾ.ಕೆ.ಅನ್ನದಾನಿ, ಕೆ.ಸುರೇಶ್‌ಗೌಡ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್, ಮುಖಂಡರಾದ ಬಿ.ಆರ್.ರಾಮಚಂದ್ರ, ಅಣ್ಣಾಸ್ ಅಲಿ ಜೊತೆಯಾ ಉಪಸ್ಥಿತರಿದ್ದರು.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ನೆಲಸಮ ಅವಶ್ಯಕತೆ ಇಲ್ಲ

- ನೂತನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸ್ಪಷ್ಟ ನುಡಿ
- ಮೈಸೂರು ಪ್ರವಾಸೋದ್ಯಮಕ್ಕೆ ಅಧಿಕ ಒತ್ತು
- ಚಾಮುಂಡಿಬೆಟ್ಟ ಪರಿಸರ ಸಂರಕ್ಷಣೆಗೆ ಗಮನ
- ಅಪೂರ್ಣ ಯೋಜನೆ ಪೂರ್ಣಗೊಳಿಸಲು ಕ್ರಮ
- ಸಭೆ ಕರೆಯುವಂತೆ ಜಿಲ್ಲಾಧಿಕಾರಿಗೆ ಸೂಚನೆ
- ಗ್ಯಾರಂಟಿ ಭವಿಷ್ಯ ಸರ್ಕಾರದ ವಿವೇಚನೆಗೆ ಬಿಟ್ಟಿದ್ದು



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿದರು.

ಮೈಸೂರು, ಜೂ.13(ಐಎಲ್‌ಯು)– ಮೈಸೂರಿನ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ನೆಲಸಮ ಮಾಡುವ ಅವಶ್ಯಕತೆ ಇಲ್ಲ ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಸಂಸದರಾಗಿ ಆಯ್ಕೆಯಾದ ನಂತರ ಮೊದಲ ಬಾರಿಗೆ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವರಾಜ ಮಾರುಕಟ್ಟೆಯಾಗಲೀ ಅಥವಾ ಲ್ಯಾನ್ಸ್‌ಡೌನ್ ಕಟ್ಟಡವನ್ನಾಗಲೀ ನೆಲಸಮ ಮಾಡದೆ ಪುನಶ್ಚೇತನಗೊಳಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದರು.

ಮೈಸೂರು ಪಾರಂಪರಿಕ ಕಟ್ಟಡಗಳ ನಗರವಾಗಿದೆ. ಆದ ಕಾರಣ ಇವುಗಳನ್ನು ಸಂರಕ್ಷಣೆ ಮಾಡಬೇಕು ಎಂದು ಯದುವೀರ್ ಹೇಳಿದರು.

ಚಾಮುಂಡಿಬೆಟ್ಟ ಪರಿಸರ ಸಂರಕ್ಷಣೆ: ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ನಿರ್ಮಿಸುವ ಪ್ರಸ್ತಾಪದ ಬಗ್ಗೆ ಪ್ರತಿಕ್ರಿಯೆ ನೀಡಿದ ಯದುವೀರ್, ಚಾಮುಂಡಿಬೆಟ್ಟ ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಮೈಸೂರು ನಗರದ ಪ್ರಮುಖ ಭಾಗವೂ ಆಗಿದೆ. ಧಾರ್ಮಿಕ ಪಾವಿತ್ರ್ಯತೆ ಜೊತೆಗೆ ಅಲ್ಲಿನ ಪರಿಸರ ಸಂರಕ್ಷಣೆ ಕೂಡ ಮಾಡಬೇಕಿದೆ ಎಂದರು.

ಮೈಸೂರು ಅಭಿವೃದ್ಧಿ ಸಂಬಂಧ ಸಿಎಂರೊಂದಿಗೆ ಚರ್ಚೆ: ಮೈಸೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಕಾರ್ಯ ಕೈಗೊಳ್ಳಲು ಎಲ್ಲರ ಸಹಕಾರ ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚೆ ಮಾಡುತ್ತೇನೆ. ಮಾಜಿ ಸಂಸದ ಪ್ರತಾಪ್ ಸಿಂಹ ಸಹಕಾರ ಕೇಳುತ್ತೇನೆ ಎಂದು ಯದುವೀರ್ ತಿಳಿಸಿದರು.

ಮೈಸೂರಿನ ವಿಮಾನ ನಿಲ್ದಾಣ ಮೇಲ್ದರ್ಜೆಗೇರಿಸುವ ಹಾಗೂ ಹೆಚ್ಚಿನ ವಿಮಾನಗಳ ಹಾರಾಟ ಸಂಬಂಧ ಗಮನ ಹರಿಸುತ್ತೇನೆ. ಮೈಸೂರು ವಿಮಾನ ನಿಲ್ದಾಣದಲ್ಲಿ ಈ ಮೊದಲು 5 ವಿಮಾನಗಳ ಹಾರಾಟವಿತ್ತು ಆದರೆ ಈಗ ಒಂದೇ ಒಂದು ವಿಮಾನ ಮಾತ್ರ ಹಾರಾಡುತ್ತಿದೆ. ಇಂತಹ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡುತ್ತೇನೆ ಎಂದರು.

ರೈಲ್ವೆ ಸೇರಿದಂತೆ ಅಪೂರ್ಣಗೊಂಡ ಯೋಜನೆಗಳನ್ನು ಪೂರ್ಣಗೊಳಿಸುವ ಸಂಬಂಧ ಸಭೆ ಕರೆಯುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರರಿಗೆ ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು.

ಪ್ರಮುಖವಾಗಿ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಪಾರಂಪರಿಕತೆ ಸಂರಕ್ಷಣೆಗೆ ಒತ್ತು ನೀಡಬೇಕಿದೆ. ಕೈಗಾರಿಕಾ ಪಾರ್ಕ್ ನಿರ್ಮಾಣವಾಗಿದ್ದು, ಅವುಗಳ ಅಭಿವೃದ್ಧಿ ಮಾಡಬೇಕಿದೆ. ಈಗ ತಾನೇ ಸಂಸದನಾಗಿ ಆಯ್ಕೆಯಾಗಿದ್ದು, ಇಂತಹ ಹಲವು ವಿಚಾರಗಳ ಬಗ್ಗೆ ಆದ್ಯತೆ ಮೇರೆಗೆ ಗಮನಹರಿಸುತ್ತೇನೆ ಎಂದು ಯದುವೀರ್ ತಿಳಿಸಿದರು.

ಈಗ ಗ್ಯಾರಂಟಿ ಯೋಜನೆ ಮುಂದುವರೆಸಲು ಕಾಂಗ್ರೆಸ್ ನಾಯಕರಿಂದಲೇ ವಿರೋಧ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಅದನ್ನು ಮುಂದುವರೆಸುವ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆಗೆ, ಗ್ಯಾರಂಟಿ ಯೋಜನೆ ಗಳಿಂದಲೇ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸರ್ಕಾರವೇ ಈ ಬಗ್ಗೆ ತೀರ್ಮಾನ ಕೈಗೊಳ್ಳಬೇಕಿದೆ. ಗ್ಯಾರಂಟಿ ಯೋಜನೆ ಮುಂದುವರೆಸುವುದು, ಬಿಡುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ವಿವೇಚನೆಗೆ ಬಿಟ್ಟಿದ್ದೆ ಎಂದು ಹೇಳಿದರು.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ 14 ಲಕ್ಷ ಮತದಾರರು ಮತ ಚಲಾಯಿಸಿದ್ದಾರೆ. ಅವರೆಲ್ಲರಿಗೂ ಧನ್ಯವಾದ ತಿಳಿಸುತ್ತೇನೆ. ಮೂರನೇ ಬಾರಿಗೆ ನರೇಂದ್ರ ಮೋದಿ ಪ್ರಧಾನಮಂತ್ರಿ ಆಗಿದ್ದಾರೆ. ಕರ್ನಾಟಕದ ಐವರಿಗೆ ಕೇಂದ್ರ ಸಂಪುಟದಲ್ಲಿ ಸಚಿವ ಸ್ಥಾನ ದೊರೆತಿದೆ. ಈ ಮೂಲಕ ನಮ್ಮ ಕ್ಷೇತ್ರ ಹಾಗೂ ರಾಜ್ಯದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಯದುವೀರ್ ಭರವಸೆ ನೀಡಿದರು.

ಯದುವೀರ್ ಮಿತಭಾಷಿ

ಹತ್ತು ವರ್ಷಗಳ ಕಾಲ ಸಂಸದರಾಗಿ ಕಾರ್ಯ ನಿರ್ವಹಿಸಿದ್ದ ಪ್ರತಾಪ್ ಸಿಂಹ ಅವರ ಮಾತಿನ ಆರ್ಭಟ ಜೋರಾಗಿರುತ್ತಿತ್ತು. ಹಲವೆಡೆ ಅವರ ಮಾತು ವಿವಾದವಾಗಿ ಮಾರ್ಪಡುತ್ತಿತ್ತು.

ಆದರೆ ಈಗ ಸಂಸದರಾಗಿ ಆಯ್ಕೆಯಾಗಿರುವ ಯದುವೀರ್ ಮಿತ ಭಾಷಿ. ಏನು ಹೇಳಬೇಕೋ ಅದನ್ನಷ್ಟು ಸೂಚ್ಯವಾಗಿ ಹೇಳಿ ಮುಗಿಸುತ್ತಾರೆ.

ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಯದುವೀರ್ ಬಹಳಷ್ಟು ವಿವಾದಿತ ವಿಚಾರಗಳ ಬಗ್ಗೆ ಚಾಣಾಕ್ಷತನವನ್ನೆ ತೋರಿಲ್ಲ. ಯಾವುದೇ ವಿವಾದಕ್ಕೆ ಆಸ್ಪದ ನೀಡದೆ ಜಾಣ ನಡೆ ಅನುಸರಿಸಿದರು.

ಕುವೆಂಪುನಗರದಲ್ಲಿ ಕಚೇರಿಯಿದೆ; ಅಲ್ಲಿ ನನ್ನ ಭೇಟಿ ಮಾಡಿ

ಚುನಾವಣಾ ಪೂರ್ವದಲ್ಲಿ ಭರವಸೆ ನೀಡಿದಂತೆ ಮೈಸೂರಿನ ಕುವೆಂಪುನಗರದಲ್ಲಿ ನನ್ನ ಅಧಿಕೃತ ಕಚೇರಿ ತೆರೆದಿದ್ದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಜನರು ಅಲ್ಲಿ ನನ್ನನ್ನು ಭೇಟಿ ಮಾಡಬಹುದು ಎಂದು ಯದುವೀರ್ ತಿಳಿಸಿದರು.

ನನ್ನ ಭೇಟಿಯ ಸಮಯ ಸೇರಿದಂತೆ ಇತರೆ ಮಾಹಿತಿ ಪಡೆಯಲು ಆಪ್ತ ಸಹಾಯಕರ ಸಂಪರ್ಕ ದೂರವಾಣಿ ಸಂಖ್ಯೆಯನ್ನು ಶೀಘ್ರದಲ್ಲೇ ನೀಡುತ್ತೇನೆ ಎಂದರು. ಮೊದಲ ಬಾರಿಗೆ ಆಯ್ಕೆಯಾಗಿರುವ ನನಗೆ ಕೆಲವು ಸವಾಲುಗಳಿರುವುದು ನಿಜ. ಆದರೆ ಅದನ್ನು ಸಮರ್ಥವಾಗಿ ಎದುರಿಸಿ ಮುನ್ನಡೆಯುತ್ತೇನೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಸಂಸದರಾದ ನಿಮಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಸಹಕಾರ ನೀಡುವುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಯದುವೀರ್, ರಾಜಕಾರಣ ಏನಿದ್ದರೂ ಚುನಾವಣೆಯವರೆಗೆ ಇದ್ದೇ ಇರುತ್ತದೆ. ಆದರೆ ಅದನ್ನು ಮೀರಿ ಜನಪರ ಕೆಲಸ ಮಾಡಬೇಕು ಎಂದು ಹೇಳಿದರು.

ಪ್ರತಾಪ್ ಸಿಂಹ ಸಂಸದರಾಗಿದ್ದ ವೇಳೆ ಮಹಿಷ ದಸರಾಗೆ ವಿರೋಧ ವ್ಯಕ್ತಪಡಿಸಿದ್ದರು. ಈಗ ನಿಮ್ಮ ನಿಲುವೇನು ಎಂಬ ಪ್ರಶ್ನೆಗೆ, ಸಂವಿಧಾನದ ಆಶಯಗಳಿಗೆ ತಕ್ಕಂತೆ ಕೆಲಸ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ನೊಂದವರ ಹೃದಯದಲ್ಲಿ ಭಗವಂತನನ್ನು ಕಾಣುತ್ತಿದ್ದ ನಾಲ್ವಡಿ

ವಿವಿಧ ಕ್ಷೇತ್ರದ ಸಾಧಕರಿಗೆ ರಾಜರ್ಷಿ ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಪ್ರಶಸ್ತಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ 'ರಾಜರ್ಷಿ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಜೂ.13(ಜಿಎ)–ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನೊಂದವರ ಹೃದಯದಲ್ಲಿ ಭಗವಂತನನ್ನು ಕಾಣುತ್ತಿದ್ದರು ಎಂದು ನಟರಾಜ ಪ್ರತಿಷ್ಠಾನದ ವಿಶ್ವಾಧಿಕಾರಿ ಎಸ್.ಶಿವಮೂರ್ತಿ ಹೇಳಿದರು.

ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬುದ್ಧ, ಬಸವಣ್ಣ, ಅಂಬೇಡ್ಕರ್, ಗಾಂಧಿಯಂತೆ ನಾಲ್ವಡಿ ಅವರೂ ಸಾಮಾಜಿಕ ಕ್ರಾಂತಿಯ ಹರಿಕಾರ. ಅವರು ಜನರ ಜೀವನ ಸುಧಾರಣೆಗೆ ಶ್ರಮಿಸಿದ ವ್ಯಕ್ತಿ, ಮಹಾರಾಜನಿಂದ ಪರಿಪೂರ್ಣ ಮಾರ್ಗದರ್ಶಕರವರೆಗೂ ಸಮಾನತೆಯನ್ನು ಕಂಡ ವ್ಯಕ್ತಿ. ಅವರ ಆದರ್ಶ ಆಡಳಿತವನ್ನು ಇಂದಿನ ರಾಜಕಾರಣಿಗಳು, ಸರ್ಕಾರ ಅಳವಡಿಸಿಕೊಳ್ಳಲಿ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಾಮಾಜಿಕ ಕ್ಷೇತ್ರದಲ್ಲಿ ಮಾಡಿರುವ ಅಪಾರ ಕೆಲಸದಿಂದ ಇಂದಿಗೂ ಜೀವಂತವಾಗಿದ್ದಾರೆ ಎಂದರು.

ಬಿಜೆಪಿ ಮುಖಂಡ ಗುರುಪಾದಸ್ವಾಮಿ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಂದಿನ ಕಾಲದಲ್ಲಿಯೇ ವರ್ಷಕ್ಕೆ ಎರಡು ಬಾರಿ ಪ್ರಜಾಪ್ರತಿನಿಧಿ ಸಭೆ ನಡೆಸಿ, ಮೈಸೂರು ರಾಜ್ಯಕ್ಕೆ ಉತ್ತಮ ಯೋಜನೆಗಳನ್ನು ರೂಪಿಸಿದರು. ಇದರಿಂದ ಭಾರತದಲ್ಲಿ ಮೈಸೂರು ರಾಜ್ಯ ಮಾದರಿ ರಾಜ್ಯವಾಗಿ ಹೊರಹೊಮ್ಮಲು ಸಾಧ್ಯವಾಯಿತು. ಅವರ ಮಾದರಿಯನ್ನು ಅನುಸರಿಸಿ, ಲೋಕಸಭೆ, ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯ ಮಾತನಾಡಿ, ಕೇಂದ್ರ ಸರ್ಕಾರವು ನಾಲ್ವಡಿ ಅವರಿಗೆ ಭಾರತ ರತ್ನ ನೀಡಿ ಗೌರವಿಸಬೇಕು. ಆ ಮೂಲಕ ಇಡೀ ದೇಶಕ್ಕೆ ಅವರ ಆದರ್ಶ ರಾಜಾಡಳಿತದ ಬಗ್ಗೆ ಮಾಹಿತಿ ನೀಡಬೇಕು. ಅವರು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಅಪಾರ ಗೌರವವಿದ್ದ ಪ್ರಜಾತಂತ್ರವಾದಿ ಎಂದು ಸ್ಮರಿಸಿದರು.

ವಿವಿಧ ಕ್ಷೇತ್ರದ ಸಾಧಕರಾದ ಪಿ. ಶಾಂತರಾಜೇ ಅರಸ್, ಡಿ.ಶಿವಯ್ಯ, ಡಾ.ಕೆ.ಲೀಲಾ ಪ್ರಕಾಶ್, ಬಿ.ಪಿ.ಮೂರ್ತಿ, ಎಂ.ಬಿ.ಶಿವಕುಮಾರ್ ಅವರಿಗೆ ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಜಿ.ಆರ್.ಅರಸ್ ಅವರು 'ರಾಜರ್ಷಿ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್' ಪ್ರಶಸ್ತಿ ನೀಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಬನ್ನೂರು ಕೆ ರಾಜು, ಜಗನ್ನಾಥ್ ಅಕ್ಕಮಹಾದೇವಿ ಮಹಿಳಾ ಸೌಹಾರ್ದ ಸಂಘದ ಸಿ.ಎಲ್.ಶರ್ಮಿಳಾ, ಪ್ರತಿಷ್ಠಾನದ ಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಉಪಸ್ಥಿತರಿದ್ದರು.

ವರುಣ ನಾಡ ಕಚೇರಿಗೆ ಡಿಸಿ ದಿಢೀರ್ ಭೇಟಿ; ಕಡತ ಪರಿಶೀಲನೆ



ಮೈಸೂರು, ಜೂ. 13 (ಆರ್‌ಕೆ): ಮೈಸೂರು ತಾಲೂಕು ವರುಣಾ ನಾಡ ಕಚೇರಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಇಂದು ದಿಢೀರ್ ಭೇಟಿ ನೀಡಿ, ಕಡತಗಳನ್ನು ಪರಿಶೀಲಿಸಿದರು.

ಆರ್‌ಟಿಸಿ, ಖಾತಾ ವರ್ಗಾವಣೆ, ಭೂಮಾಪನಾ, ಚೆಕ್ಕುಬಂದಿ ನಿಗದಿಪಡಿಸುವುದು, ಎಂಆರ್, ಪಿಟಿಸಿಎಲ್ ಪ್ರತಿ, ಪೋಡಿ ಹದ್ದುಬಸ್ತು, ಸ್ವಾಧೀನಾನುಭವದಂತೆ ಪೋಡಿ ಸೇರಿದಂತೆ ಹಲವು ಸೇವೆ ಕೋರಿ ಸಾರ್ವಜನಿಕರು ಸಲ್ಲಿಸಿರುವ ಅರ್ಜಿಗಳ ವಿಲೇವಾರಿಗಳ ಕುರಿತಂತೆ ಕಡತಗಳನ್ನು, ದಾಖಲಾತಿಗಳನ್ನು ಪರಿಶೀಲಿಸಿದ ಅವರು, ನಿಗದಿತ ವೇಳೆಗೆ ಮ್ಯಾಚ್ಅಪ್ ಮಾಡಿ ಆನ್‌ಲೈನ್‌ನಲ್ಲಿ ಮುಂದಿನ ಕ್ರಮಕ್ಕಾಗಿ ರವಾನಿಸದೇ ಬಾಕಿ ಉಳಿಸಿರುವ ಪ್ರಕರಣಗಳನ್ನು ಇತ್ಯರ್ಥಗೊಳಿಸುವಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ತಾಕೀತು ಮಾಡಿದರು.

ರೈತರು ಅರ್ಜಿ ಸಲ್ಲಿಸಿದ ಕೂಡಲೇ ಪೂರಕ ದಾಖಲೆ ಪ್ರತಿಗಳನ್ನು ಪರಿಶೀಲಿಸಿ ಅಗತ್ಯ ಕ್ರಮವಹಿಸಬೇಕು, ಸೇವೆ ಒದಗಿಸಲು ಸಾಧ್ಯವಾಗದಿದ್ದಲ್ಲಿ ಸಕಾರಣದೊಂದಿಗೆ ಅರ್ಜಿದಾರರಿಗೆ ನಿಗದಿತ ಕಾಲಮಿತಿಯೊಳಗೆ ಹಿಂಬರಹ ನೀಡಬೇಕು. ಅನಗತ್ಯವಾಗಿ ಜನರನ್ನು ಕಚೇರಿಗೆ ಅಲೆಸಬಾರದು ಎಂದು ಡಾ.ಕೆ.ವಿ.ರಾಜೇಂದ್ರ ಅವರು ತಿಳಿಸಿದರು.

ತಮ್ಮ ಹಂತದಲ್ಲಿ ಇತ್ಯರ್ಥಗೊಳಿಸಲಾಗದಿದ್ದರೆ, ಟಪ್ಪಾಲ್, ವರದಿಯೊಂದಿಗೆ ಮೇಲಾಧಿಕಾರಿಗಳಿಗೆ ಕಡತಗಳನ್ನು ರವಾನಿಸಬೇಕು. ಕಾಲಾವಿಳಂಬ ಮಾಡದೆ ತಿಂಗಳುಗಟ್ಟಲೆ ಅರ್ಜಿಯನ್ನು ತಮ್ಮ ಹಂತದಲ್ಲೇ ಇರಿಸಿಕೊಂಡಿರುವುದು ಕಂಡುಬಂದರೆ ಶಿಸ್ತು ಕ್ರಮ ಕೈಗೊಳ್ಳುವುದಾಗಿಯೂ ಅವರು ಎಚ್ಚರಿಕೆ ನೀಡಿದರು.

ವಿದ್ಯಾರ್ಥಿಗಳ ಸಮಸ್ಯೆಗಳನ್ನು ಶೂನ್ಯಕ್ಕಿಳಿಸಿ

ಮಾರ್ಗದರ್ಶಿ-25 ಸಂವಾದ ಕಾರ್ಯಕ್ರಮದಲ್ಲಿ ಅಧಿಕಾರಿಗಳಿಗೆ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸೂಚನೆ



ಮೈಸೂರು, ಜೂ. 13 (ಆರ್‌ಕೆ): ತಮ್ಮ ಸಂಪರ್ಕಿಸುವ ವಿದ್ಯಾರ್ಥಿಗಳಿಗೆ ಸ್ಪಂದಿಸಿ ಅವರ ಕುಂದು-ಕೊರತೆಗಳನ್ನು ತ್ವರಿತಗತಿಯಲ್ಲಿ ಪರಿಹರಿಸುವಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರು ಇಂದಿಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮುಕ್ತ ಗಂಗೋತ್ರಿಯ ಕಲಿಕಾರ್ಥಿ ಕಲ್ಯಾಣ ಕೇಂದ್ರದಲ್ಲಿ ಆಯೋಜಿಸಿದ್ದ ಮಾರ್ಗದರ್ಶಿ-25 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಪ್ರವೇಶಾತಿ, ಅಂಕಪಟ್ಟಿ, ನೈಜ ಪ್ರಮಾಣಪತ್ರ ಕೋರಿ ಅರ್ಜಿ ಸಲ್ಲಿಸಿದಾಗ ಅಥವಾ ಕರೆ ಮಾಡಿದಾಗ ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿ ನೀಡಿ ಸ್ಪಂದಿಸಬೇಕು ಎಂದರು.

ವಿದ್ಯಾರ್ಥಿಗಳ ಅನುಕೂಲಕ್ಕಾಗಿಯೇ ಕಲಿಕಾರ್ಥಿ ಕಲ್ಯಾಣ ಕೇಂದ್ರ ತೆರೆದು ಮೂಲ ಸೌಲಭ್ಯಗಳನ್ನು ಒದಗಿಸಲಾಗಿದೆ. ಸಿಬ್ಬಂದಿ ಅದನ್ನು ಬಳಸಿಕೊಂಡು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಶೂನ್ಯಕ್ಕಿಳಿಸಬೇಕು ಎಂದ ಅವರು, ದೂರದ ಊರಿನಿಂದ ಸಣ್ಣ ಪುಟ್ಟ ವಿಷಯಗಳಿಗಾಗಿ ವಿದ್ಯಾರ್ಥಿಗಳು ಮೈಸೂರಿಗೆ ಬರುವ ತೊಂದರೆ ತಪ್ಪಿಸುವುದೇ ಕೇಂದ್ರದ ಮುಖ್ಯ ಉದ್ದೇಶ ಎಂದು ತಿಳಿಸಿದರು.

ವಿಶ್ವ ವಿದ್ಯಾನಿಲಯದ ಎಲ್ಲಾ ನೌಕರರು ಆಸಕ್ತಿಯಿಂದ ತಮ್ಮ ಕೆಲಸ ನಿರ್ವಹಿಸಿ ಯಾವುದೇ ಅಪಸ್ವರ ಬಾರದಂತೆ ವಿಶ್ವ ವಿದ್ಯಾನಿಲಯದ ಅಭಿವೃದ್ಧಿಗೆ ಶ್ರಮಿಸಬೇಕು. ಆ ಮೂಲಕ ರಾಜ್ಯದ ಮಾದರಿ ಮುಕ್ತ ವಿವಿಯನ್ನಾಗಿಸಲು ವಿದ್ಯಾರ್ಥಿಗಳಿಗೆ ಗುಣಮಟ್ಟದ ಉನ್ನತ ಶಿಕ್ಷಣ ತಲುಪಿಸಬೇಕು ಎಂದು ಕುಲಪತಿಗಳು ತಿಳಿಸಿದರು.

ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ್ ಮಾತನಾಡಿ, ಕಲಿಕಾರ್ಥಿ ಕಲ್ಯಾಣ ಕೇಂದ್ರದಲ್ಲಿ ಕೆಲಸ ಮಾಡುವುದೊಂದು ಸಂವಹನ ಪ್ರಕ್ರಿಯೆ. ಅಲ್ಲಿನ ಸಿಬ್ಬಂದಿ ಸಕ್ರಿಯವಾಗಿದ್ದು ವಿದ್ಯಾರ್ಥಿ ಸ್ನೇಹಿಯಾಗಿ ಕೆಲಸ ಮಾಡಬೇಕು. ವಿದ್ಯಾರ್ಥಿಗಳ ದೂರು ಬಂದ ತಕ್ಷಣ ಪ್ರತಿಕ್ರಿಯೆ ನೀಡಬೇಕು ಎಂದರು. ಕರೆ ಕಡಿತವಾದರೆ, ಮಿಸ್ಡ್‌ಕಾಲ್ ಇದ್ದರೆ ನೀವೇ ಮರು ಕರೆ ಮಾಡಿ ತಾಳ್ಮೆಯಿಂದ ಮಾಹಿತಿ ನೀಡಿ ಎಂದರು.

ಅಧ್ಯಯನ ಕೇಂದ್ರಗಳ ಡೀನ್ ಪ್ರೊ.ರಾಮನಾಥ ನಾಯ್ಡು ಕುಲಸಚಿವ(ಪರೀಕ್ಷಾಂಗ) ಸತೀಶ್, ಕೇಂದ್ರದ ಸಂಯೋಜಕ ಡಾ.ಸುಧಾಕರ ಹೊಸಳ್ಳಿ, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ, ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ಸಂಯೋಜನಾಧಿಕಾರಿ ಜ್ಞಾನೇಶ್ವರ ಸತ್ಯನಾರಾಯಣಗೌಡ, ಎಂಬಿಎ ವಿಭಾಗದ ಪ್ರೊ.ಮಹದೇವ್ ಸ್ವಾಮಿ ಹಾಗೂ ಇತರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅರುಣಾಚಲ ಪ್ರದೇಶ ಸಿಎಂ ಆಗಿ ಪೇಮಾ ಖಂಡು ಪ್ರಮಾಣ



ಇಟಾನಗರ: ಅರುಣಾಚಲ ಪ್ರದೇಶದ ಮುಖ್ಯಮಂತ್ರಿಯಾಗಿ ಬಿಜೆಪಿಯ ಪೇಮಾ ಖಂಡು ಪ್ರಮಾಣ ವಚನ ಸ್ವೀಕರಿಸಿದರು. ಮುಖ್ಯಮಂತ್ರಿಯಾಗಿ ಇದು ಅವರ ಸತತ ಮೂರನೇ ಅವಧಿಯಾಗಿದೆ. ಇಟಾನಗರದಲ್ಲಿಂದು ಡಿಕೆ ರಾಜ್ಯ ಸಮಾವೇಶ ಕೇಂದ್ರದಲ್ಲಿ ನಡೆದ ಪ್ರಮಾಣ ವಚನ ಸಮಾರಂಭದಲ್ಲಿ ಕೇಂದ್ರ ಸಚಿವರಾದ ಅಮಿತ್ ಶಾ, ಜೆಪಿ ನಡ್ಡಾ, ಕಿರಣ್ ರಿಜಿಜು ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಉಪಸ್ಥಿತರಿದ್ದರು. 44 ವರ್ಷದ ಖಂಡು 2016ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾದರು. ಅವರನ್ನು ನಿನ್ನೆ ಅರುಣಾಚಲ ಪ್ರದೇಶದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಮರು ಆಯ್ಕೆ ಮಾಡಲಾಯಿತು. ಇದು ಸತತ ಮೂರನೇ ಅವಧಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲು ದಾರಿ ಮಾಡಿಕೊಟ್ಟಿತು.

ಅಪ್ರಾಪ್ತರಿಂದ ವಾಹನ ಚಾಲನೆ ವೇಳೆ

ಮೈಸೂರಲ್ಲಿ 8 ಅಪಘಾತ; 5 ವರ್ಷಗಳಲ್ಲಿ ಮೂವರು ಸಾವು

ಮೈಸೂರು, ಜೂ.13(ಆರ್‌ಕೆ)–ಮೈಸೂರು ನಗರದಲ್ಲಿ ಅಪ್ರಾಪ್ತರು ವಾಹನ ಚಾಲನೆ ಮಾಡಿ, ಕಳೆದ 5 ವರ್ಷಗಳಲ್ಲಿ 8 ಅಪಘಾತಗಳು ಸಂಭವಿಸಿದ್ದು, ಮೂವರು ಸಾವನ್ನಪ್ಪಿದ್ದಾರೆ.

ಅಪ್ರಾಪ್ತ ಬಾಲಕರು ವಾಹನ ಚಾಲನೆ ಮಾಡಿ ಸಂಭವಿಸಿದ ಅಪಘಾತಗಳಲ್ಲಿ ಸಾವು-ನೋವು ಗಳಾದರೆ, ಅದಕ್ಕೆ ಜವಾಬ್ದಾರರಾದ ಪೋಷಕರು, ಆರ್‌ಸಿ ಮಾಲೀಕರೇ ಹೊಣೆಗಾರರು. ಅವರೇ ಸಂತ್ರಸ್ತರಿಗೆ ಪರಿಹಾರ ನೀಡಬೇಕೇ ಹೊರತು, ವಾಹನ ವಿಮಾ ಕಂಪನಿಗಳಲ್ಲ ಎಂದು ನಿನ್ನೆ ರಾಜ್ಯ ಉಚ್ಚ ನ್ಯಾಯಾಲಯ ತೀರ್ಪು ನೀಡಿದೆ.

ಚಾಲನಾ ಪರವಾನಗಿ (ಡಿಎಲ್) ಇಲ್ಲ ಎಂದು ತಿಳಿದಿದ್ದರೂ ಅಪ್ರಾಪ್ತರಿಗೆ ವಾಹನ ಚಾಲನೆ ಮಾಡಲು ಅವಕಾಶ ನೀಡುವುದು ಅಪರಾಧ. ವಾಹನ ಚಾಲನೆ ಅರಿವಿಲ್ಲದ, ವಾಹನ ನಿಯಂತ್ರಿಸುವ ಸಾಮರ್ಥ್ಯ ಹೊಂದಿರದ ಅಪ್ರಾಪ್ತರಿಂದ ಸಂಭವಿಸಿದ ರಸ್ತೆ ಅಪಘಾತದಿಂದ ಅಮಾಯಕರು ಪ್ರಾಣ ಕಳೆದುಕೊಳ್ಳುವಂತಾಗುತ್ತದೆಯಲ್ಲದೆ, ಹಲವರು ಅಂಗವಿಕಲರಾಗಿ, ಅವರ ಕುಟುಂಬ ಸಂಕಷ್ಟಕ್ಕೆ ಸಿಲುಕುವುದರಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ, ವಾಹನ



ಜಖಂಗೊಂಡರೆ ಹಾನಿ ನಷ್ಟವನ್ನು ಪೋಷಕರೇ ನೀಡಬೇಕೇ ಹೊರತು, ವಿಮಾ ಕಂಪನಿಗಳಲ್ಲ ಎಂದು ನ್ಯಾಯಾಲಯ ಹೇಳಿದೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ಮೈಸೂರು ನಗರದಾದ್ಯಂತ ಕಳೆದ 5 ವರ್ಷಗಳಲ್ಲಿ ಅಪ್ರಾಪ್ತರು ವಾಹನ ಚಾಲನೆ ಮಾಡಿದ್ದರಿಂದ ಸಂಭವಿಸಿದ 8 ರಸ್ತೆ ಅಪಘಾತಗಳಲ್ಲಿ ಮೂವರು ಪ್ರಾಣ ಕಳೆದುಕೊಂಡು, ಹಲವರಿಗೆ ಗಾಯಗಳಾಗಿವೆ ಎಂದರು.

ಕೆಲವು ಪ್ರಕರಣಗಳಲ್ಲಿ ಅಪ್ರಾಪ್ತರು ಚಾಲನೆ ಮಾಡುತ್ತಿದ್ದ ವಾಹನಗಳು ರಸ್ತೆ ಬದಿಯ ಮರ, ವಿದ್ಯುತ್ ಕಂಬಗಳು, ಮೀಡಿಯನ್‌ಗೆ ಡಿಕ್ಕಿ ಹೊಡೆದಿದ್ದರೆ, ಮತ್ತೆ ಕೆಲವು ಪ್ರಕರಣಗಳಲ್ಲಿ ಮತ್ತೊಂದು ವಾಹನಕ್ಕೆ ಅಪ್ಪಳಿಸಿ ಅಪಾಯ ಸಂಭವಿಸಿವೆ. ಅಪ್ರಾಪ್ತ ಮಕ್ಕಳ ಕೈಗೆ ವಾಹನ ನೀಡದಂತೆ ಹಾಗೂ ಓಡಿಸಲು ಕೊಡದಂತೆ ಪೋಷಕರು ಎಚ್ಚರ ವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ಬೇಸಿಗೆ ರಜೆಗೆಂದು ಮೈಸೂರಿನ ಅಜ್ಜ ಮನೆಗೆ ಬಂದಿದ್ದ 8ನೇ ತರಗತಿ ವಿದ್ಯಾರ್ಥಿನಿಯೋರ್ವಳು ಸ್ಕೂಟರ್ ಚಾಲನೆ ಮಾಡಲು ಹೋಗಿ ಮರಕ್ಕೆ ಡಿಕ್ಕಿ ಹೊಡೆದು ಆಕೆಯ ತಲೆಗೆ ತೀವ್ರ ಗಾಯಗಳಾಗಿ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಸೇರಿದಂತೆ ಮೈಸೂರಲ್ಲಿ ಹಲವು ಪ್ರಕರಣಗಳು ಸಂಭವಿಸಿರುವುದನ್ನು ಪರಶುರಾಮಪ್ಪ ಸ್ಮರಿಸಿದರು.

ಆಟವಾಡಲು, ಅಂಗಡಿಯಿಂದ ಸಾಮಾನು ತರಲೆಂದು ದ್ವಿಚಕ್ರ ವಾಹನ ಕೊಟ್ಟು ಮಕ್ಕಳನ್ನು ಕಳುಹಿಸುವ ಪರಿಪಾಠ ಈಗಲೂ ಇದೆ. ಕೆಲವು ಮನೆಗಳಲ್ಲಿ ಮಕ್ಕಳು ಹಠ ಮಾಡಿ ತಂದೆ-ತಾಯಿಯಿಂದ ಸ್ಕೂಟರ್ ಪಡೆದು ಹೋಗುವುದುಂಟು. ಇನ್ನೇ ಮನೆ ಹತ್ತಿರ ಹೋಗಿ ಬರಲೆಂದು ವಾಹನ ಕೊಟ್ಟು ಕಳುಹಿಸುವುದರಿಂದಲೂ ಅಪಾಯ ಸಂಭವಿಸಿ, ಜೀವನ ಪೂರ್ತಿ ಸುಖ ಅನುಭವಿಸುವ ಬದಲು ಅಪ್ರಾಪ್ತರಿಗೆ ವಾಹನ ಕೊಡದಿರುವುದು ಸುರಕ್ಷಿತ ಎಂದು ಅವರು ತಿಳಿಸಿದ್ದಾರೆ.

■ ಸತ್ಯಮೂರ್ತಿ ತೋಳಹುಣಸೆ

ಇಂದು ಡಾಲಿಯ 'ಕೋಟಿ' ರಿಲೀಸ್



ಪತ್ರಕರ್ತನಾಗಿ ನಂತರ ಕಿರುತೆರೆ ಮುಖ್ಯಸ್ಥನಾಗಿ ದಶಕಗಳ ಕಾಲ ಕೆಲಸ ಮಾಡಿದ ಪರಮ್ ನಿರ್ದೇಶನದ ಕೋಟಿ ಇಂದು (ಶುಕ್ರವಾರ) ತೆರೆಕಾಣುತ್ತಿದೆ. ಡಾಲಿ ಧನಂಜಯ್, ಮೋಕ್ಷ ಕುಶಾಲ್ ನಟಿಸಿರುವ ಈ ಚಿತ್ರದ ಪ್ರೀ ರಿಲೀಸ್ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಕಿಚ್ಚ ಸುದೀಪ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ಇದೇ ವೇದಿಕೆಯಲ್ಲಿ ಚಿತ್ರತಂಡ ಸುದೀಪ್ ಅವರಿಗೆ ಕೋಟಿಯ ಮೊದಲ ಟಿಕೆಟ್‌ನ್ನು ನೀಡಿತು. ಹತ್ತಾರು ವರ್ಷ ಟಿವಿ, ಪತ್ರಿಕೋದ್ಯಮದಲ್ಲಿ ಕೆಲಸ ಮಾಡಿರುವ ಪರಮ್ ಅವರಿಗೆ ಎಲ್ಲೆಡೆ ಸ್ನೇಹಿತರಿದ್ದಾರೆ. ಗುರುವಾರ ಮೈಸೂರಿನಲ್ಲಿ ಚಿತ್ರದ ಪ್ರೀಮಿಯರ್ ಶೋ ನಡೆಯಿತು.

ಕೋಟಿ ಚಿತ್ರವು ಶುಕ್ರವಾರ ರಾಜ್ಯಾದ್ಯಂತ 200ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದ್ದು, ನಂತರದಲ್ಲಿ ಅಮೇರಿಕಾ, ಇಂಗ್ಲೆಂಡ್, ಯುರೋಪ್ ಮತ್ತು ಗಲ್ಫ್ ದೇಶಗಳಲ್ಲೂ ಬಿಡುಗಡೆಯಾಗಲಿದೆ. ಕೋಟಿ ಚಿತ್ರದ ಖಳನಾಯಕನಾಗಿ ರಮೇಶ್ ಇಂದಿರಾ ನಟಿಸಿದ್ದು, ಉಳಿದಂತೆ ಹಿರಿಯ ನಟರಾದ ರಂಗಾಯಣ ರಘು, ತಾರಾ, ಸರ್ದಾರ್‌ಸತ್ಯ ಜತೆಗೆ ಪೃಥ್ವಿ ಶಾಮನೂರು, ತನುಜಾ ವೆಂಕಟೇಶ್, ಅಭಿಷೇಕ್ ಶ್ರೀಕಾಂತ್ ಮುಂತಾದವರು ಅಭಿನಯಿಸಿದ್ದಾರೆ. ಈ ಚಿತ್ರದಲ್ಲಿ ಐದು ಹಾಡುಗಳಿದ್ದು ವಾಸುಕಿ ವೈಭವ್ ರಾಗ ಸಂಯೋಜಿಸಿದ್ದು, ಯೋಗರಾಜ್ ಭಟ್ ಮತ್ತು ವಾಸುಕಿ ವೈಭವ್ ಸಾಹಿತ್ಯ ರಚಿಸಿದ್ದಾರೆ. 777 ಚಾರ್ಲಿ ಖ್ಯಾತಿಯ ನೊಬಿನ್ ಪೌಲ್ ಹಿನ್ನೆಲೆ ಸಂಗೀತ ನೀಡಿದ್ದಾರೆ. ಅರುಣ್ ಈ ಚಿತ್ರದ ಕ್ಯಾಮರಾಮನ್ ಆಗಿ ಕೆಲಸ ಮಾಡಿದ್ದಾರೆ. ಜಿಯೋ ಸ್ಟುಡಿಯೋಸ್ ಈ ಚಿತ್ರವನ್ನು ನಿರ್ಮಿಸಿದೆ.





ಪ್ರಥಮ್-ಕೌರವ್ ವೆಂಕಟೇಶ್ ಜೋಡಿಯ 'ಕೊಕೇನ್'

ಬಿಗ್‌ಬಾಸ್ ಪ್ರಥಮ್ ಹಾಗೂ ಕೌರವ್ ವೆಂಕಟೇಶ್ ಸೇರಿ ದೊಡ್ಡ ಸಾಹಸಕ್ಕೆ ಕೈಹಾಕಿದ್ದಾರೆ, 1600ಕ್ಕೂ ಹೆಚ್ಚು ಚಿತ್ರಗಳಿಗೆ ಸಾಹಸ ಸಂಯೋಜನೆ ಮಾಡಿರುವ ಕೌರವ್ ವೆಂಕಟೇಶ್, ಪ್ರಥಮ್ ನಾಯಕನಾಗಿ ಅಭಿನಯಿಸುತ್ತಿರುವ ಕೊಕೇನ್ ಚಿತ್ರದ ಮೂಲಕ ನಿರ್ದೇಶಕರಾಗುತ್ತಿದ್ದಾರೆ, ಆಕ್ಷನ್, ಥ್ರಿಲ್ಲರ್ ಕಾಮಿಡಿ ಕಥಾಹಂದರ ಹೊಂದಿರುವ ಕೊಕೇನ್ ಚಿತ್ರದ ಮುಹೂರ್ತ ಸಮಾರಂಭ ಕಂಠೀರವ ಸ್ಟುಡಿಯೋದಲ್ಲಿ ನಡೆಯಿತು. ಈ ಚಿತ್ರಕ್ಕೆ ಪ್ರಥಮ್ ಅವರೇ ಕಥೆ ಬರೆದು ಸ್ನೇಹಿತರ ಜೊತೆ ನಿರ್ಮಾಣದಲ್ಲೂ ಸಾಥ್ ನೀಡಿದ್ದಾರೆ. ಈ ಚಿತ್ರದ ಮೊದಲ ದೃಶ್ಯಕ್ಕೆ ಮಾಜಿ ಸಚಿವ ಬಿ.ಸಿ. ಪಾಟೀಲ್ ಕ್ಲಾಪ್ ಮಾಡಿದರೆ, ಓಂಪ್ರಕಾಶ್‌ರಾವ್ ಕ್ಯಾಮೆರಾ ಚಾಲನೆ ಮಾಡಿದರು. ಚಿತ್ರದಲ್ಲಿ ಬಿ.ಸಿ.ಪಾಟೀಲ್ ಕೇಂದ್ರ ಸಚಿವರಾಗಿ ಮತ್ತು ಓಂಪ್ರಕಾಶ್‌ರಾವ್ ಒಬ್ಬ ಪೊಲೀಸ್ ಅಧಿಕಾರಿಯಾಗಿ ನಟಿಸುತ್ತಿದ್ದಾರೆ.

ಪ್ರಥಮ್ ಅವರೇ ಕಥೆ, ಚಿತ್ರಕಥೆ ಬರೆದು ನಾಯಕನಾಗಿ ಅಭಿನಯಿಸುತ್ತಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳು, 5 ಸಾಹಸ ದೃಶ್ಯಗಳಿದ್ದು, ಚಿತ್ರದ ಪ್ರತಿ ಸನ್ನಿವೇಶವೂ ನಾವು ಊಹಿಸದಂತೆ ನಡೆಯುತ್ತದೆ. ಬೆಂಗಳೂರು, ಮಂಗಳೂರು ಸುತ್ತಮುತ್ತ ಅಲ್ಲದೆ ರಷ್ಯಾದಲ್ಲೂ ಸಹ ಚಿತ್ರೀಕರಣ ನಡೆಸುವ ಯೋಜನೆಯಿದೆ. ಕಾಮಿಡಿ, ಮಾಸ್, ರೊಮಾನ್ಸ್‌ನಂಥ ಎಲ್ಲ ಮನರಂಜನಾತ್ಮಕ ಅಂಶಗಳೂ ಚಿತ್ರದಲ್ಲಿದ್ದು, ನೋಡುಗರಿಗೆ ಎಲ್ಲೂ ಸಹ ಬೋರ್ ಅನಿಸುವುದಿಲ್ಲ. ಅಲ್ಲದೆ ಚಿತ್ರದಲ್ಲಿ ತೂಕದ ಸಂದೇಶವೂ ಇರುತ್ತದೆ ಎಂದು ನಿರ್ದೇಶಕ ಕೌರವ್ ವೆಂಕಟೇಶ್ ಹೇಳಿದರು.

ನಂತರ ನಾಯಕ ನಟ ಪ್ರಥಮ್ ಮಾತನಾಡುತ್ತ, ದೇಶಪ್ರೇಮ ಸಾರುವ ಮಹಿಳಾ ಪ್ರಧಾನ ಕಥಾಹಂದರ ಈ ಚಿತ್ರದಲ್ಲಿದೆ. ಇನ್ನು ಕಥೆಯ ಬಗ್ಗೆ ಹೇಳಬೇಕೆಂದರೆ ನೈಜೀರಿಯಾದಿಂದ ಒಂದು ಸಾವಿರ ಕೋಟಿ ಮೌಲ್ಯದ ಕಂಟೈನರ್ ಒಂದು ಭಾರತಕ್ಕೆ ಬಂದಿರುತ್ತದೆ. ನಂತರ ಅದನ್ನು ಬೆಂಗಳೂರಿನಿಂದ ಗೋವಾಗೆ ಸಾಗಿಸುವ ಯೋಜನೆ ಸ್ಮಗ್ಲರ್‌ಗಳದ್ದು. ಯಾವುದೇ ಕಾರಣಕ್ಕೂ ಆ ಕಂಟೈನರ್ ಗೋವಾಗೆ ತಲುಪಬಾರದೆಂದು ನಾನು ಯಾವೆಲ್ಲ ರೀತಿ ಪ್ರಯತ್ನಿಸುತ್ತೇನೆ, ನನ್ನ ಪ್ರಯತ್ನಕ್ಕೆ ನಾಯಕಿ ಹೇಗೆ ಸಾಥ್ ಕೊಡುತ್ತಾಳೆ. ನಾವಿಬ್ಬರೂ ಸೇರಿ ಚಾಣಾಕ್ಷತನದಿಂದ ಅದನ್ನು ಯಾವ ರೀತಿ ನಾಶಮಾಡುತ್ತೇವೆ ಎನ್ನುವುದೇ ಕೊಕೇನ್ ಚಿತ್ರದ ಒನ್‌ಲೈನ್ ಸ್ಟೋರಿ ಎಂದು ಹೇಳಿದರು. ಬಳ್ಳಾರಿ ಮೂಲದ ಆರನ ಚಿತ್ರದ ನಾಯಕಿಯಾಗಿದ್ದು, ಪತ್ರಕರ್ತೆಯ ಪಾತ್ರದಲ್ಲಿ ನಟಿ ಅನ್ವಿತಿ ಶೆಟ್ಟಿ ನಟಿಸುತ್ತಿದ್ದಾರೆ. ಉಳಿದಂತೆ ಗೋಕುಲ್, ಮುನಿ, ಕಾಮಿಡಿಕಿಲಾಡಿ ಸಂತು, ರವೀಂದ್ರನಾಥ್, ಆಯುಕ್ತರುಗಳಾಗಿ ಶಶಿಕುಮಾರ್, ರವಿಕಾಳೆ ಅವರುಗಳು ನಟಿಸುತ್ತಿದ್ದಾರೆ.

'ತಾಜ್'-ಪ್ರೇಮಕಥೆ



ಕನ್ನಡದಲ್ಲಿ ಪ್ರೇಮ ಕಥೆಗಳು ಸಾಕಷ್ಟು ಬಂದಿವೆ. ಆಸಾಲಿಗೆ ಈಗ ತಾಜ್ ಹೊಸ ಸೇರ್ಪಡೆ. ರಾಜರತ್ನ ಅವರ ನಿರ್ದೇಶನದ ಈ ಚಿತ್ರದಲ್ಲಿ ಹಿಂದೂ ಯುವಕ ಮುಸ್ಲಿಂ ಯುವತಿಯ ದುರಂತ ಪ್ರೇಮಕಥೆಯನ್ನು ಹೇಳಲಾಗಿದೆ. ತೆರೆಗೆ ಸಿದ್ಧವಾಗಿರುವ ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಷಣ್ಮುಖ ಜೈ ಚಿತ್ರದ ನಾಯಕ ಮತ್ತು ನಿರ್ಮಾಪಕ. ಅಪ್ಸರಾ ಚಿತ್ರದ ನಾಯಕಿ. ಸದ್ಯ ಅಪ್ಸರಾ ನಮ್ಮ ಜೊತೆಗಿಲ್ಲ, ಇತ್ತೀಚೆಗಷ್ಟೇ ಆಕಸ್ಮಿಕವಾಗಿ ಮರಣ ಹೊಂದಿದರು.

ಪುನೀತ್ ರಾಜಕುಮಾರ್ ಅಭಿಮಾನಿಯೂ ಆಗಿರುವ ಬಸವರಾಜ್ ಕೆಲವು ಚಿತ್ರಗಳಿಗೆ ಸಂಭಾಷಣೆ ಬರೆಯುವುದರ ಜೊತೆಗೆ ಸಹಾಯಕ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. ಇದೇ ಮೊದಲ ಬಾರಿಗೆ ಅಂತರ್ಜಾತೀಯ ಪ್ರೇಮಕಥೆಯ ಮೂಲಕ ನಿರ್ದೇಶನಕ್ಕಿಳಿದಿದ್ದಾರೆ.

ಚಿತ್ರದ ಕುರಿತು ಮಾತನಾಡಿದ ಅವರು, ನನ್ನ ಸ್ನೇಹಿತನ ಜೀವನದಲ್ಲಿ ನಡೆದ ಕಥೆ ಇಟ್ಟುಕೊಂಡು ಈ ಚಿತ್ರದ ಸ್ಕ್ರಿಪ್ಟ್ ಮಾಡಿದ್ದೇನೆ. ಚಿತ್ರದಲ್ಲಿ ಶೇ.80ರಷ್ಟು ನೈಜಕಥೆ ಹಾಗೂ ಶೇ.20ರಷ್ಟು ಕಮರ್ಷಿಯಲ್ ಅಂಶಗಳನ್ನಿಟ್ಟುಕೊಂಡು ತಾಜ್ ಸಿನಿಮಾ ನಿರ್ದೇಶಿಸಿದ್ದೇನೆ. ಈ ಚಿತ್ರದ ಮೂಲಕ ಮೊದಲು ಮಾನವನಾಗು ಎಂದು ಸಂದೇಶ ಹೇಳಹೊರಟಿದ್ದೇವೆ. ದೇವರ ದೃಷ್ಟಿಯಲ್ಲಿ ನಾವೆಲ್ಲರೂ ಒಂದೇ. ಇಂದು ಮನುಷ್ಯತ್ವ ನಶಿಸುತ್ತಿದೆ. ಪ್ರೀತಿ ಕಡಿಮೆ ಆಗುತ್ತಿದೆ. ಈ ವಿಷಯವನ್ನು ಇಟ್ಟುಕೊಂಡು, ಇಂದಿನ ಸ್ಥಿತಿಗತಿಗೆ ಅನುಗುಣವಾಗಿ ಈ ಪ್ರೇಮಕಥೆ ನಿರೂಪಿಸಿದ್ದೇವೆ ಎಂದು ಹೇಳಿದರು.

ಅಂಬರೀಶ್ ಅಭಿಮಾನಿಯಾದ ಷಣ್ಮುಖ ಜೈ ಮಾತನಾಡಿ ಅಂಬರೀಶ್ ಅಭಿನಯದ ಇಂದ್ರಜಿತ್ ಸಿನಿಮಾ ನೋಡಿದಾಗಿನಿಂದ ಸಿನಿಮಾ ಮಾಡಬೇಕೆಂದುಕೊಂಡಿದ್ದೆ. ಅದೀಗ ನಿಜವಾಗಿದೆ. ನಾನು ಹೀರೋ ಆಗಬೇಕೆಂದು ಆಸೆ ಇರಲಿಲ್ಲ. ಸಿನಿಮಾ ನಿರ್ಮಿಸುವ ಆಸೆಯಂತೂ ಇತ್ತು. ಆದರೆ, ನಿರ್ದೇಶಕರು ನನಗೆ ನಟಿಸಲು ಹುರಿದುಂಬಿಸಿದರು. ನಿರ್ದೇಶಕರು ಹೇಳಿಕೊಟ್ಟಿದ್ದನ್ನು ಕಲಿತು ನಟಿಸಿದ್ದೇನೆ ಎಂದರು. ಈ ಚಿತ್ರಕ್ಕೆ ಜೆಸ್ಸಿ ಗಿಫ್ಟ್, ಬಿ.ಆರ್.ಸುರೇಂದ್ರನಾಥ್ ಮತ್ತು ಪ್ರೇಮ್ ಭರತ್ ಹೀಗೆ 3 ಜನ ಮ್ಯೂಸಿಕ್ ಮಾಡಿದ್ದು, ದೀಪಕ್ ಕೃಷ್ಣ ಛಾಯಾಗ್ರಹಣ ನಿರ್ವಹಿಸಿದ್ದಾರೆ. ಮುಂದಿನ ತಿಂಗಳು ಚಿತ್ರವನ್ನು ರಿಲೀಸ್ ಮಾಡುವ ಸಾಧ್ಯತೆಯಿದೆ. ಇನ್ನು, ಈ ಚಿತ್ರದಲ್ಲಿ ಬಲರಾಜವಾಡಿ, ವರ್ಧನ್, ಕಡ್ಡಿ ವಿಶ್ವ, ಪಟ್ರೆ ನಾಗರಾಜ್, ಶೋಭರಾಜ್, ಪದ್ಮಾವಾಸಂತಿ ಮುಂತಾದವರು ನಟಿಸಿದ್ದಾರೆ.

20 ವರ್ಷಗಳ ಏಕಾಂಗಿ ಬದುಕು ಸಾಗಿಸಿದ 'ಸಿಗ್ನಲ್‌ಮ್ಯಾನ್' ಕಥೆ



1971ರ ಸಮಯದಲ್ಲಿ ನಡೆದ ಇಂಡೋ - ಪಾಕ್ ಕದನದ ಹಿನ್ನೆಲೆ ಇಟ್ಟುಕೊಂಡು 'ಸಿಗ್ನಲ್ ಮ್ಯಾನ್' ಎಂಬ ಚಿತ್ರವನ್ನು ಕೆ.ಶಿವರುದ್ರಯ್ಯ ಅವರು ನಿರೂಪಿಸಿದ್ದಾರೆ. ಯಾರೂ ಹತ್ತದ, ಇಳಿಯದ ರೈಲ್ವೆ ನಿಲ್ದಾಣದಲ್ಲಿ ಇಪ್ಪತ್ತು ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಸಿಗ್ನಲ್‌ಮ್ಯಾನ್ ಒಬ್ಬನ ಜೀವನದ ಕಥೆಯನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಇಪ್ಪತ್ತು ವರ್ಷಗಳವರೆಗೆ ಯಾವುದೇ ಜನಸಂಪರ್ಕವಿಲ್ಲದ ಸ್ಥಳದಲ್ಲಿ ಬದುಕಿದ್ದ ಆ ಸಿಗ್ನಲ್ ಮ್ಯಾನ್ ಗೊಂದಲಕ್ಕೀಡಾಗುತ್ತಾನೆ. ಆ ಗೊಂದಲದಿಂದ ಆಚೆ ಬಂದನಂತರ ಹೇಗೆ ಆತ ರಾಜ್ಯ ಹಾಗೂ ರಾಷ್ಟ್ರಕ್ಕೆ ಬೇಕಾಗುವಂಥ ವ್ಯಕ್ತಿಯಾಗುತ್ತಾನೆ ಎನ್ನುವುದೇ ಈ ಚಿತ್ರದ ಕಥೆ. ಹಿರಿಯನಟ ಪ್ರಕಾಶ್ ಬೆಳವಾಡಿ ಅವರು ಸಿಗ್ನಲ್ ಮ್ಯಾನ್ ಆಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಹಿಂದೂಸ್ಥಾನ್ ಮುಕ್ತ ಮೀಡಿಯಾ ಎಂಟರ್‌ಟೈನರ್ ಲಾಂಛನದಲ್ಲಿ ಗಣೇಶ್‌ಪ್ರಭು ಬಿ.ವಿ. ಅವರ ನಿರ್ಮಾಣದ "ಸಿಗ್ನಲ್ ಮ್ಯಾನ್ 1971" ಇದೇ ಆಗಸ್ಟ್‌ನಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರದ ಹೆಚ್ಚಿನ ಭಾಗದ ಚಿತ್ರೀಕರಣ ಊಟಿಯಲ್ಲಿ ಹಾಕಲಾಗಿದ್ದ ರೈಲ್ವೆ ನಿಲ್ದಾಣದ ಸೆಟ್‌ನಲ್ಲೇ ನಡೆಸಲಾಗಿದೆ. ಶೇಖರ್ ಚಂದ್ರು ಅವರ ಛಾಯಾಗ್ರಹಣ, ಸುರೇಶ್ ಅರಸ್ ಅವರ ಸಂಕಲನ, ಒಸೆಪಚ್ಚನ್ ಅವರ ಸಂಗೀತ ಈ ಚಿತ್ರಕ್ಕಿದೆ. ಬೆಂಗಳೂರು ಚಲನಚಿತ್ರೋತ್ಸವ, ಚೆನ್ನೈ ಚಲನಚಿತ್ರೋತ್ಸವ, ಮುಂಬೈ ಚಲನಚಿತ್ರೋತ್ಸವ ಹಾಗೂ ಬಾಂಗ್ಲಾದೇಶದಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿ ಅನೇಕ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಈ ಚಿತ್ರ ಪ್ರದರ್ಶನಗೊಂಡು ಮೆಚ್ಚುಗೆ ಗಳಿಸಿದೆ ಎಂದು ನಿರ್ದೇಶಕ ಕೆ.ಶಿವರುದ್ರಯ್ಯ ಹೇಳಿದರು. ನಿರ್ಮಾಪಕ ಗಣೇಶ್ ಪ್ರಭು ಮಾತನಾಡಿ, ನಮ್ಮ ಸಂಸ್ಥೆಯಿಂದ ನಿರ್ಮಾಣವಾದ ಮೊದಲ ಚಿತ್ರವಿದು. ಈ ಚಿತ್ರದಲ್ಲಿ ನಾನೂ ಸಹ ಅಭಿನಯಿಸಿದ್ದೇನೆ. ಬಾಂಗ್ಲಾದೇಶದಲ್ಲಿ ನಡೆದ ಚಲನಚಿತ್ರೋತ್ಸವಕ್ಕೆ ನಾನೂ ಹೋಗಿದ್ದೆ. ಅದರಲ್ಲಿ ಬೆಸ್ಟ್ ಫ್ಯೂಚರ್ ಫಿಲಂ ಪ್ರಶಸ್ತಿ ಬಂದಿದೆ ಎಂದರು. "ಸಿಗ್ನಲ್ ಮ್ಯಾನ್ 1971" ಚಿತ್ರದಲ್ಲಿ ನಟಿಸಿ ರಾಜೇಶ್ ನಟರಂಗ, ಛಾಯಾಗ್ರಾಹಕ ಶೇಖರ್ ಚಂದ್ರು ಹಾಗೂ ಕಾರ್ಯಕಾರಿ ನಿರ್ಮಾಪಕ, ನಟ ವೆಂಕಟೇಶ್ ಪ್ರಸಾದ್ ಚಿತ್ರದ ಕುರಿತಂತೆ ಮಾತನಾಡಿದರು.

'ಸಮಯ' ತಂದೆ ಮಗನ ಬಾಂಧವ್ಯದ ಸುತ್ತ...



ಮಕ್ಕಳು ವಿದ್ಯಾವಂತರಾಗಿ ಕುಟುಂಬಕ್ಕೆ ಆಸರೆಯಾಗಬೇಕೆಂಬ ಆಸೆಯಿಂದ ಕಷ್ಟಪಟ್ಟು ಹಣಹೊಂದಿಸಿ ಅವರನ್ನು ಸಿಟಿಗೆ ಕಳಿಸುತ್ತಾರೆ, ಆದರೆ ಆ ಮಕ್ಕಳು ದುಶ್ಚಟಗಳನ್ನು ಕಲಿತು ತಾವೂ ಹಾಳಾಗುವುದಲ್ಲದೆ, ಹೆತ್ತವರ ಕನಸನ್ನು ಭಗ್ನ ಮಾಡುತ್ತಾರೆ, ಇಂಥದ್ದೇ ಕಥೆಯನ್ನಿಟ್ಟುಕೊಂಡು ಎಸ್.ಆರ್. ಪ್ರಮೋದ್ ಸಮಯ ಎಂಬ ಚಿತ್ರವನ್ನು ನಿರ್ದೇಶಿಸಿದ್ದಾರೆ. ಇದು ಅವರ ಐದನೇ ಚಿತ್ರ. ಇತ್ತೀಚೆಗೆ ಈ ಸಿನಿಮಾದ ಟ್ರೇಲರ್‌ನ್ನು ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್ಕೆ ವಿಶ್ವನಾಥ್ ಬಿಡುಗಡೆ ಮಾಡಿದರು. ಪ್ರಮೋದ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಪ್ರಮೋದ್ ಅವರೇ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ನಿರ್ದೇಶಕ ಪ್ರಮೋದ್ ಮಾತನಾಡುತ್ತ, ಫ್ಯಾಮಿಲಿ ರಿಲೇಶನ್‌ಶಿಪ್ ಬಗ್ಗೆ ಮಾಡಿರುವ ಕಥೆಯಿದು. ತಂದೆ ಹಳ್ಳಿಯಲ್ಲಿ ಸಾಲ-ಸೋಲ ಮಾಡಿ ಮಗನನ್ನು ಓದಿಸಲು ಪಟ್ಟಣಕ್ಕೆ ಕಳಿಸುತ್ತಾನೆ. ಆದರೆ ಆತ ನಗರದಲ್ಲಿ ಪುಂಡಾಟಿಕೆ ಮಾಡುತ್ತ ತನ್ನ ಬದುಕನ್ನೇ ಹಾಳು ಮಾಡಿಕೊಳ್ಳುತ್ತಾನೆ, ಇದೇ ಚಿಂತೆಯಲ್ಲಿ ಆ ತಂದೆ ಸತ್ತು ಹೋಗುತ್ತಾನೆ. ತಂದೆಯನ್ನು ಕಳೆದುಕೊಂಡ ಮೇಲೆ ಆ ಮಗನಿಗೆ ತಂದೆಯ ಮಹತ್ವದ ಅರಿವಾಗುತ್ತದೆ. ಅಷ್ಟರಲ್ಲಾಗಲೇ ಕಾಲ ಮಿಂಚಿಹೋಗಿರುತ್ತದೆ, ನಂತರ ಆ ಮಗನ ಪರಿಸ್ಥಿತಿ ಏನಾಗುತ್ತದೆ? ಆತ ಪ್ರೀತಿಸಿದವಳು ಏನಾಗುತ್ತಾಳೆ ಎಂದು ಮನಮಿಡಿಯುವ ಕಥೆ ಚಿತ್ರದಲ್ಲಿದೆ ಎಂದರು.

ನಂತರ ಮಾತನಾಡಿದ ಎನ್ನಾರ್ಕೆ ವಿಶ್ವನಾಥ್, ಯಾವುದೇ ಚಿತ್ರವನ್ನು ಸಣ್ಣದು, ದೊಡ್ಡದು ಅಂತ ವಿಂಗಡಣೆ ಮಾಡಬಾರದು. 90ರ ದಶಕದಲ್ಲಿ ಕೆ.ವಿ.ಜಯರಾಂ ಅವರು ಅತಿ ಕಡಿಮೆ ಬಜೆಟ್‌ನಲ್ಲಿ ನಿರ್ಮಿಸಿದ್ದ 'ರಂಜಿತಾ' ಸೂಪರ್‌ಹಿಟ್ ಆಯಿತು. ನಾವು ಜನರಿಗೆ ಯಾವ ರೀತಿಯ ಕಂಟೆಂಟ್ ಕೊಡುತ್ತೇವೆ ಎಂಬುದಷ್ಟೆ ಮುಖ್ಯವಾಗಿರುತ್ತದೆ. ಪ್ರಮೋದ್ ಅವರಿಗಿರುವ ಸಿನಿಮಾ ಪ್ರೀತಿಯೇ ಅವರನ್ನು ಗೆಲ್ಲಿಸುತ್ತದೆ ಎಂದರು.

ನವನಟಿ ರಮ್ಯ ಈ ಚಿತ್ರದ ನಾಯಕಿ. ಖಳನಟ ಭೀಮಣ್ಣನಾಯ್ಕ, ಕಿಟ್ಟಿ, ಚಂದ್ರಶೇಖರ್, ಮಂಜು ಮಡಬ, ಬನ್ನೂರು ರಂಗಸ್ವಾಮಿ ಇವರೆಲ್ಲ ತಮ್ಮ ಪಾತ್ರದ ಬಗ್ಗೆ ವಿವರಿಸಿದರು. ಕೆವಿನ್ ಅವರ ಸಂಗೀತ, ಗಿರೀಶ್ ಅವರ ಛಾಯಾಗ್ರಹಣ, ಅಲ್ಟಿಮೇಟ್ ಶಿವು ಅವರ ಸಾಹಸ, ಹೇಮಂತ್‌ಕುಮಾರ್ ಅವರ ಸಂಭಾಷಣೆ ಈ ಚಿತ್ರಕ್ಕಿದೆ. ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿರುವ ಈ ಚಿತ್ರಕ್ಕೆ ಸೆನ್ಸಾರ್‌ನಿಂದ ಯು/ಎ ಪ್ರಮಾಣಪತ್ರ ದೊರೆತಿದೆ.

ಸಿನಿಪದಬಂಧ-530

1			2		■	3	■	4		
	■	■		■	■		■		■	■
	■	5								
6		■		■	■		■		■	■
	■	7			■	■	■		■	8
9		■		■	10	■	11		12	
■	■	■	■	■		■	■	■		■
■	13					■	14	■		■
■		■	■	■	■	■		■		■
■		■	15		16					
17				■		■		■	■	■

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಡೈಲಾಗ್ ಕಿಂಗ್ ಬೆರಳುಗಳ ಮಾಲೆ ಧರಿಸಿದ್ದಾನೆ 5
4. ಕಿಶೋರ್ ನಾಯಕತ್ವದ ಗ್ರಾಮೀಣ ಕ್ರೀಡೆ 3
5. ಸ್ಕೂಲ್ ಮಾಸ್ಟರ್ ಚಿತ್ರದ ಹಾಡಿನ ಸಾಲಿನಲ್ಲಿ ಕಾಶಿನಾಥ್ ಚಿತ್ರವಿದೆ 9
6. ಉಲ್ಟಾ ಹೊಡೆದ 'ಶರ' 2
7. ಶಶಿಕುಮಾರ್ ದೇವಲೋಕದ ಗಾಯಕ 3
9. ಆಂಗ್ಲದ ನಕ್ಷತ್ರವಿಲ್ಲಿ ತಿರುಗಿದೆ 2
11. ಏಜೆಂಟ್ ಅಮರ್ ಕಾಣಿಸಿಕೊಂಡ ವಿದೇಶ 4
13. ಬೆಟ್ಟದ ಮೇಲೆ ಅರಳಿದ ಪುಷ್ಪ 5
15. ಬಾಲರಾಜ್, ಕಾವ್ಯ, ತಾರಾ ಅಭಿನಯಕ್ಕೆ ಗುರುಪ್ರಸಾದ್ ನಿರ್ದೇಶಕ 8
17. ಲೂಸ್ ಮಾದ ಆ ಕಡೆ ಈ ಕಡೆ ತಿರುಗುತ್ತಿದ್ದಾನೆ 4

ವಿಜೇತರು: ಎಂ.ಕವಿತಾ, ಎಲ್‌ಐಸಿ ಪ್ರತಿನಿಧಿ, ತಿಮ್ಮರಾಜೀಪುರ, ಕೊಳ್ಳೇಗಾಲ ತಾಲೂಕು, ಚಾಮರಾಜನಗರ ಜಿಲ್ಲೆ.



ಉಮ್ಮತ್ತೂರು ಇಂದುಶೇಖರ್

ಮೊ.9880820462

ಸಿನಿ ಪದಬಂಧ 529ರ ಉತ್ತರ

ಹ	ದ್ದಿ	ನ	ಕ	ಣ್ಣು	■	ಒಂ	■	ನಾ	ವಿ	ಕ
ರ	■	■	ನ್ನ	■	■	ದೇ	■	ರ	■	■
ಕೆ	■	ಎ	ಡ	ಕ	ಲ್ಲು	ಗು	ಡ್ಡ	ದ	ಮೇ	ಲೆ
ಯ	ಮ	■	ಕು	■	■	ರಿ	■	ವಿ	■	■
ಕು	■	ಶಿ	ವ	ಣ್ಣ	■	■	■	ಜ	■	ವೇ
ರಿ	ನಾ	■	ರ	■	ಪ	■	ಜ	ಯ	ಪ್ರ	ದ
■	■	■	■	■	ಗ	■	■	■	ಣ	■
■	ಹಾ	ವಿ	ನ	ಹೆ	ಡೆ	■	ಚಾ	■	ಯ	■
■	ಲು	■	■	■	■	■	ರು	■	ರಾ	■
■	ಜೇ	■	ಜ	ಲ	ಲ	ಜ	ಲ	ಲ	ಜ	ಲ
ಭಾ	ನು	ಪ್ರಿ	ಯ	■	ವ್	■	ತಾ	■	■	■

ಮೇಲಿನಿಂದ ಕೆಳಕ್ಕೆ

1. ಇದೊಂದು ಇಸ್ಪೀಟ್ ಆಟ ಶಿವಣ್ಣನಿಗೂ ಗೊತ್ತು! 6
2. ಬಿ.ಆರ್.ಪಂತುಲು ನಿರ್ದೇಶನಕ್ಕೆ ಗಂಗಾಧರ್, ಜಯಂತಿ ಅಭಿನಯವಿದೆ 6
3. ಅಕ್ಷರ ಕಲಿಸೋ ಅಜ್ಞಾನ ಅಳಿಸೋ ಗುರುವೇ ಪಾಠಶಾಲಾ "ಮಾಣಿಕ್ಯ" 4
4. ಅಣ್ಣಯ್ಯ ಚಿತ್ರದ ಹಾಡಿನಲ್ಲಿ ರವಿಚಂದ್ರನ್ ಪ್ರಿಯತಮೆಯನ್ನು ಕರೆದ ಬಗೆ! 6
8. ಟೈಗರ್ ಪ್ರಭಾಕರ್ ಇಂಗ್ಲೀಷಿನ ಅರಸ 2
10. ಶ್ರೀನಾಥ್ - ಮಂಜುಳಾ ಒಂದುಗೂಡಿದ್ದಾರೆ 3
12. ಶಿವರಾಜ್ ಕುಮಾರ್ ಏರಿದ ಹಿಮ ಶಿಖರ 5
13. ಅಂಬರೀಷ್ ಅಭಿನಯದ ಬೆಟ್ಟದ ಕನ್ಯೆ 4
14. ಮಾರಿ ಕಣ್ಣು ಹೋರಿ ಮ್ಯಾಗೆ ಚಿತ್ರದಲ್ಲಿ ಜಗ್ಗೇಶ್ ಪರಿಚಾರಕ 4
15. ಈ ನಟಿ ಸಂಪತ್ತು ಭರಿತಳಾಗಿದ್ದಾಳೆ 2
16. ವಿಷ್ಣುವರ್ಧನ್ ಇನ್ನೊಂದು ಜೀವಕೆ ಆಧಾರವಾದ ದಾನಿ! 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಸಿಎಂ ತವರು ಜಿಲ್ಲೆಯಲ್ಲೇ ಬಸ್‌ಗಾಗಿ ಸಾರ್ವಜನಿಕರು, ವಿದ್ಯಾರ್ಥಿಗಳ ಪರದಾಟ

ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಂತೆ ಒತ್ತಾಯ

ನಂಜನಗೂಡು, ಜೂ.13– ಹುಲ್ಲಹಳ್ಳಿಯಿಂದ ನಂಜನಗೂಡು ಕಡೆಗೆ ತೆರಳಲು ಗಂಟೆಗಟ್ಟಲೆ ಕಾದರೂ ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಇಲ್ಲದೇ ವಿದ್ಯಾರ್ಥಿಗಳು, ಸಾರ್ವಜನಿಕರು ಪರದಾಡುವ ಪರಿಸ್ಥಿತಿ ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲೇ ಎದುರಾಗಿದ್ದು, ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.



ಹುಲ್ಲಹಳ್ಳಿ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿರುವ ಸಾರ್ವಜನಿಕರು.

ಹುಲ್ಲಹಳ್ಳಿ ನಂಜನಗೂಡು ತಾಲೂಕಿನ ಬಹುದೊಡ್ಡ ಹೋಬಳಿ ಕೇಂದ್ರ, ನಂಜನಗೂಡಿಗಿಂತಲೂ ಹೆಚ್ಚಾಗಿ ವಾಣಿಜ್ಯ ವಹಿವಾಟು ನಡೆಯುವ ಹೋಬಳಿಯನ್ನು ತಾಲೂಕು ಕೇಂದ್ರವನ್ನಾಗಿ ಮಾಡಬೇಕು ಎಂಬುದು ಬಹುದಿನದ ಬೇಡಿಕೆ. ಇಂತಹ ದೊಡ್ಡ ಗ್ರಾಮಕ್ಕೆ ನಂಜನಗೂಡಿನಿಂದ ಹುಲ್ಲಹಳ್ಳಿ ಮಾರ್ಗವಾಗಿ ಸಾಕಷ್ಟು ಬಸ್ ವ್ಯವಸ್ಥೆ ಇಲ್ಲದೆ ಗಂಟೆಗಟ್ಟಲೇ ಕಾಯುವ ಸ್ಥಿತಿ ನಿರ್ಮಾಣವಾಗಿದೆ. ಕೊರೊನಾಗಿಂತ ಹಿಂದೆ ಮುಂಜಾನೆ 5 ರಿಂದಲೇ ಬಸ್ ಲಭ್ಯವಾಗುತ್ತಿತ್ತು. ಇದೀಗ ಬಸ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಿರುವ ಕಾರಣ ಬೆಳಗ್ಗೆ 6.30 ರಿಂದ ಬಸ್ ಲಭ್ಯವಾಗುತ್ತಿದೆ. ಅಲ್ಲದೆ ಪ್ರತಿ 15 ನಿಮಿಷಗಳಿಗೊಮ್ಮೆ ಬಸ್ ಸಂಚರಿಸುತ್ತಿದ್ದವು. ಈಗ ಶಕ್ತಿ ಯೋಜನೆ ಜಾರಿಯಾದ ನಂತರ 1 ಗಂಟೆ ಕಾದರೂ ಬಸ್ ಬಾರದೆ ಸಾರ್ವಜನಿಕರು ಪರದಾಡುವಂತಾಗಿದೆ. ಹುಲ್ಲಹಳ್ಳಿ ಪ್ರಮುಖ ದೊಡ್ಡ ಹೋಬಳಿ ಕೇಂದ್ರವಾಗಿರುವ ಕಾರಣ ತಾಲೂಕು ಕೇಂದ್ರದಿಂದ ನಿರಂತರವಾಗಿ ಪ್ರತಿ 15 ನಿಮಿಷಗಳಿಗೊಮ್ಮೆ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ಖಾಸಗಿ ಟೆಂಪೋಗಳ ಹಾವಳಿ: ಗಂಟೆಗಟ್ಟಲೇ ಬಸ್ ವ್ಯವಸ್ಥೆ ಇಲ್ಲದಿರುವುದನ್ನೇ ಬಂಡವಾಳ ಮಾಡಿಕೊಂಡಿರುವ ಖಾಸಗಿ ಟೆಂಪೋಗಳು ನಿಯಮ ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ತುಂಬಿಕೊಂಡು ಸಂಚರಿಸುತ್ತಿವೆ. ಇದರಿಂದ ದಿನನಿತ್ಯ ಈ ಮಾರ್ಗದಲ್ಲಿ ಒಂದಲ್ಲೊಂದು ಅಪಘಾತಗಳು ಜರುಗುತ್ತಿದ್ದು, ಸಾರ್ವಜನಿಕರ ಪ್ರಾಣಕ್ಕೆ ರಕ್ಷಣೆಯೇ ಇಲ್ಲದಂತಾಗಿದೆ. ಜೊತೆಗೆ ಟೆಂಪೋಗಳು ಬಸ್ ನಿಲ್ದಾಣದಿಂದ 100 ಮೀಟರ್ ದೂರದಲ್ಲಿ ನಿಲ್ಲಿಸಬಾರದೆಂಬ ನಿಯಮವಿದ್ದರೂ ಸಹ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ ಟೆಂಪೋಗಳನ್ನು ನಿಲ್ಲಿಸಿಕೊಂಡು ಬಸ್ ಬರಲು 1 ಗಂಟೆ ಕಾಯಬೇಕಾಗುತ್ತದೆ ಎಂದು ಹೇಳಿ ಟೆಂಪೋಗೆ ಹತ್ತಿಸಿಕೊಳ್ಳುವ ದೃಶ್ಯ ಸಾಮಾನ್ಯವಾಗಿದೆ. ಇದರಿಂದ ಕೆಎಸ್ ಆರ್‌ಟಿಸಿ ಅಧಿಕಾರಿಗಳು ಖಾಸಗಿ ವ್ಯಕ್ತಿಗಳ ಜೊತೆಗೆ ಶಾಮೀಲಾಗಿದ್ದಾರೆಯೇ ಎಂಬ ಅನುಮಾನವೂ ಕೂಡ ವ್ಯಕ್ತವಾಗಿದೆ.

> **ನಂಜನಗೂಡಿನಿಂದ ಹುಲ್ಲಹಳ್ಳಿ, ಹುಲ್ಲಹಳ್ಳಿಯಿಂದ ನಂಜನಗೂಡು ಮಾರ್ಗವಾಗಿ ಪ್ರತಿ ಅರ್ಧ ಗಂಟೆಗೊಮ್ಮೆ ಬಸ್ ವ್ಯವಸ್ಥೆಯಿದೆ. ಯಾವುದೇ ತೊಂದರೆಯಾಗಿಲ್ಲ. ಒಂದು ವೇಳೆ ಸಾರ್ವಜನಿಕರಿಗೆ ಸಮಸ್ಯೆಯಾಗಿದ್ದಲ್ಲಿ ಪರಿಶೀಲನೆ ನಡೆಸಿ ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸಲಾಗುವುದು.**
>
> *- ತ್ಯಾಗರಾಜ್, ನಂಜನಗೂಡು ಸಾರಿಗೆ ಬಸ್ ಡಿಪೋ ವ್ಯವಸ್ಥಾಪಕ.*

ಹುಲ್ಲಹಳ್ಳಿಯ ಗಿರೀಶ್ ಮತ್ತು ಕಪ್ಪಸೋಗೆ ಗ್ರಾಮದ ದೇವರಾಜು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಗುರುವಾರ ಬೆಳಗ್ಗೆ 8.30ಕ್ಕೆ ಹುಲ್ಲಹಳ್ಳಿ ಬಸ್ ನಿಲ್ದಾಣಕ್ಕೆ ಬಂದೆವು. 10 ಗಂಟೆಯಾದರೂ ಸಹ ಬಸ್ ಬಂದಿಲ್ಲ. ಇದರಿಂದ ನಮಗೆ ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹೋಗಲು ಸಾಧ್ಯವಾಗಿಲ್ಲ. ಜೊತೆಗೆ ವಿದ್ಯಾರ್ಥಿಗಳು ಸಹ ಶಾಲಾ ಕಾಲೇಜಿಗೆ ತೆರಳಲು ಸಾಧ್ಯವಾಗಿಲ್ಲ. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ತೊಂದರೆಯಾಗುತ್ತಿದೆ. ಇದಕ್ಕೂ ಮುಂಚೆ ಪ್ರತಿ 15 ನಿಮಿಷಗಳಿಗೊಮ್ಮೆ ಬಸ್ ಇರುತ್ತಿದ್ದವು. ಈಗ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಬಸ್ ನಿಲ್ದಾಣದ ವ್ಯವಸ್ಥಾಪಕರು ಡಿಪೋ ವ್ಯವಸ್ಥಾಪಕರನ್ನು ಪ್ರಶ್ನಿಸಿದಲ್ಲಿ ಅವರು ಹಾರಿಕೆಯ ಉತ್ತರ ನೀಡುತ್ತಾರೆ. ಈ ಬಗ್ಗೆ ಶಾಸಕರು ಮತ್ತು ಅಧಿಕಾರಿಗಳು ಕ್ರಮವಹಿಸಿ ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಕಲ್ಪಿಸಲು ಮುಂದಾಗಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಹರೋಂ ಹರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಚಂದು ಚಾಂಪಿಯನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಹಾರಾಜ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಹಾರಾಜ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಕರಟಕ ದಮನಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಹಾರಾಜ (ತ)	4 ಪ್ರದರ್ಶನಗಳು
ಪ್ರಭಾ	
ಅಮೀನ (ಹಿಂ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇನ್‌ಸೈಡ್ ಔಟ್ 2(3ಡಿ) (ಇಂ): ಬೆ.10.15ಕ್ಕೆ, ಮ.12.15ಕ್ಕೆ, ಮ.2.15ಕ್ಕೆ, ಚಂದು ಚಾಂಪಿಯನ್ (ಹಿಂ): ಸಂ.4.15ಕ್ಕೆ, ರಾ.7.05ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.11ಕ್ಕೆ, ರಾ.7ಕ್ಕೆ, ಮುಂಜ್ಯಾ (ಹಿಂ): ಮ.2.15ಕ್ಕೆ, ಶಿವಮ್ಮ ಯರೆಹಂಚಿನಾಳ (ಕ): ಸಂ.4.40ಕ್ಕೆ, ಹರೋಂ ಹರ (ತೆ): ರಾ.10.15ಕ್ಕೆ.
ಸ್ಕ್ರೀನ್ 3	ಮುಂಜ್ಯಾ (ಹಿಂ): ಬೆ.10.40ಕ್ಕೆ, ಮಹಾರಾಜ (ತ): ಮ.1.15ಕ್ಕೆ, ಸಂ.4.20ಕ್ಕೆ, ಚೆಫ್ ಚಿದಂಬರ (ಕ): ರಾ.7.20ಕ್ಕೆ, ಡಿಎನ್‌ಎ (ಮ): ರಾ.9.50ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.10ಕ್ಕೆ, ಮ.1.25ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಡ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
MVC
ದೂ : 0821–2973519

ಸ್ಕ್ರೀನ್ 1	ಚೆಫ್ ಚಿದಂಬರ (ಕ): ಬೆ.11.15ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಮ.1.30ಕ್ಕೆ, ಮ್ಯೂಸಿಕ್ ಶಾಪ್ ಮೂರ್ತಿ (ತೆ): ಮ.3.45ಕ್ಕೆ, ಹರೋಂ ಹರ (ತೆ): ಸಂ.6.15ಕ್ಕೆ, ಮಹಾರಾಜ (ತ): ರಾ.9.15ಕ್ಕೆ.
ಸ್ಕ್ರೀನ್ 2	ಇನ್‌ಸೈಡ್ ಔಟ್ (3ಡಿ)(ಇಂ): ಬೆ.11ಕ್ಕೆ, ಕೋಟಿ (ಕ): ಮ.1ಕ್ಕೆ, ಸಂ.4.15ಕ್ಕೆ, ರಾ.7.30ಕ್ಕೆ
ಸ್ಕ್ರೀನ್ 3	ಲವ್ ಲಿ (ಕ): ಮ.1ಕ್ಕೆ, ಮಹಾರಾಜ (ತ): ಸಂ.4.05ಕ್ಕೆ, ಸಂ.6.45ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ರಾ.9.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಚೆಫ್ ಚಿದಂಬರ (ಕ): ಮ.1.55ಕ್ಕೆ, ಲವ್ ಲಿ (ಕ): ಸಂ.4.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ರಾ.7.20ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಟಕೆರೆ ಗ್ರಾಪಂಗೆ ನಾಗೇಂದ್ರ ಅಧ್ಯಕ್ಷ



ಬಿ.ಮಟಕೆರೆ ಗ್ರಾಪಂ ಅಧ್ಯಕ್ಷರಾಗಿ ನಾಗೇಂದ್ರ ಆಯ್ಕೆಯಾಗಿದ್ದಾರೆ.

ಸರಗೂರು, ಜೂ.13– ತಾಲೂಕಿನ ಬಿ.ಮಟಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ನಾಗೇಂದ್ರ ಆಯ್ಕೆಯಾಗಿದ್ದಾರೆ. ಇಲ್ಲಿನ ಗ್ರಾಪಂ ಆವರಣದಲ್ಲಿ ಗುರುವಾರ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಾಗೇಂದ್ರ ಹಾಗೂ ಎಂ.ಡಿ. ರತ್ನಯ್ಯ ನಾಮ ಪತ್ರ ಸಲ್ಲಿಸಿದ್ದರು.

ನಂತರ ನಡೆದ ಚುನಾವಣೆಯಲ್ಲಿ ನಾಗೇಂದ್ರ 13 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೆ, ರತ್ನಯ್ಯ 7 ಮತ ಪಡೆದು ಪರಾಭವಗೊಂಡರು. ಚುನಾವ ಣಾಧಿಕಾರಿಯಾಗಿ ಉಷಾ, ಮಟಕೆರೆ ಪಿಡಿಒ ಭಾಗ್ಯ ಕಾರ್ಯ ನಿರ್ವಹಿಸಿದರು.

ಚುನಾವಣೆಯಲ್ಲಿ ಸದಸ್ಯರಾದ ರೂಪಾಬಾಯಿ, ದೇವದಾಸ್, ಬೆಟ್ಟಸ್ವಾಮಿ, ಚಿನ್ನಮ್ಮ, ವಿನೋದ, ಬೊಮ್ಮ, ಮೀನಾ ಕುಮಾರಿ, ಕಾಳಸ್ವಾಮಿ, ಭಾರತಿ, ರಾಣಿ ಬಾಯಿ, ಹೆಚ್.ಕೃಷ್ಣ, ಸುನೀತಾ ಬಾಯಿ, ನಾಗಯ್ಯ, ಸುಮತಿ, ರತ್ನಮ್ಮ, ಎಸ್.ಆರ್. ಅಶ್ವಿನಿ, ಗೌರಿಬಾಯಿ, ಹೆಚ್.ಜಿ. ಅಜಿತ್ ಕುಮಾರ್, ಎಂ. ನಾಗೇಂದ್ರ, ನಾಗೇಶ್, ನಾಗರತ್ನ, ಗ್ರಾಮದ ಮುಖಂಡರಾದ ಎಂ.ಎನ್ ಭೀಮರಾಜ್, ಎಂ.ಎನ್. ಅಣ್ಣಯ್ಯಸ್ವಾಮಿ, ಎಂ.ಬಿ. ಆನಂದ್, ಗುಣಪಾಲ್, ಅಭಿ, ಸಿಬ್ಬಂದಿ ವರ್ಗದವರಾದ ಹೆಚ್. ಮಹೇಶ್, ಸರಸ್ವತಿ, ರಾಮು, ಇನ್ನಿತರರಿದ್ದರು.

ಟಾಲೆಂಟ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ಹುಣಸೂರು, ಜೂ.13– ಅರಣ್ಯ ಇಲಾಖೆ ಸಹಯೋಗ ದೊಂದಿಗೆ ನಗರದ ಟಾಲೆಂಟ್ ಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.



ಈ ವೇಳೆ ಅರಣ್ಯ ವಲಯ ಅಧಿಕಾರಿ ನಂದ ಕುಮಾರ್, ಸಿಬ್ಬಂದಿ ಹಾಗೂ ಟ್ಯಾಲೆಂಟ್ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳು 50ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟರು. ಅರಣ್ಯ ವಲಯ ಅಧಿಕಾರಿ ನಂದ ಕುಮಾರ್ ಮಾತನಾಡಿ, ಮುಂದಿನ ಪೀಳಿಗೆಗೆ ಪರಿಸರ ಉಳಿಸಿ ಬೆಳೆಸುವ ಹೊಣೆಗಾರಿಕೆ ನಮ್ಮದಾಗಿದೆ. ಪರಿಸರ ಉಳಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಶಾಲೆಗಳು, ಸಂಘ ಸಂಸ್ಥೆಗಳು, ಗ್ರಾಪಂಗಳ ನೆರವಿನೊಂದಿಗೆ ಹೆಚ್ಚು ಗಿಡ ನೆಡುವ ಕಾರ್ಯದಲ್ಲಿ ತೊಡಗಿದೆ. ಈ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸುವ ಕೆಲಸವಾಗಬೇಕಿದೆ ಎಂದರು. ಈ ವೇಳೆ ಪ್ರಾಂಶುಪಾಲ ಮಂಜುನಾಥ್, ಅಧ್ಯಾಪದ ವೃಂದ ಹಾಜರಿದ್ದರು.



ಎಂಎಲ್‌ಸಿ ಡಾ.ಯತೀಂದ್ರಗೆ ಸನ್ಮಾನ

ನೂತನ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಮೈಸೂರು ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಎಂ.ಮಹೇಶ್ ಸನ್ಮಾನಿಸಿದರು. ಈ ವೇಳೆ ಹೊಸಕೋಟೆ ಕುಮಾರ್, ಸೂರ್ಯ ಕುಮಾರ್, ಸೋಮು ಮತ್ತಿತರರಿದ್ದರು.

ಹಸ್ತಿಕೇರಿ ಮಠದಲ್ಲಿ 101 ಲಿಂಗಗಳ ಪುನರ್ ಪ್ರತಿಷ್ಠಾಪನೆ



ಹಸ್ತಿಕೇರಿ ಮಠದಲ್ಲಿ 101 ಲಿಂಗಗಳ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯಿತು.

ತಲಕಾಡು, ಜೂ.13– ಇಲ್ಲಿನ ಹಸ್ತಿಕೇರಿ ಮಠದಲ್ಲಿ 101 ಲಿಂಗಗಳ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮ ಮಠದ ಅಧ್ಯಕ್ಷ ಡಾ.ಸಿದ್ದಮಲ್ಲಿಕಾರ್ಜುನ ಸ್ವಾಮೀಜಿ ನೇತೃತ್ವದಲ್ಲಿ ಯಶಸ್ವಿಯಾಗಿ ನೆರವೇರಿತು.

ಈ ವೇಳೆ ಬೆಂಗಳೂರಿನ ಶಂಕರ ದೇವರ ಮಠದ ಶ್ರೀಶಂಕರ ಸ್ವಾಮೀಜಿ, ಕಾರ್ಯದರ್ಶಿ ರೇಣುಕಾ ಪ್ರಸಾದ್, ಧರ್ಮದರ್ಶಿ ಬಸವಣ್ಣ, ಪ್ರದೀಪ್, ರವಿಕುಮಾರ್, ಪಟ್ಟದ ದೇವರ ಕುಟುಂಬ ವರ್ಗ ಹಾಗೂ ದಾನಿಗಳು, ವಿಜಯಪುರ, ಟಿ.ಮೇಗಡಹಳ್ಳಿ, ತಲಕಾಡು ಗ್ರಾಮಸ್ಥರು ಹಾಗೂ ಶಂಭುದೇವನಪುರ ಮುಖಂಡ ಸುಗಂಧ ರಾಜು, ಹೆಚ್.ಬಿ.ಮರಿಯಪ್ಪ, ವಕೀಲ ಶ್ರೀಕಂಠಪ್ರಸಾದ್, ರಾಜೇಶ್, ನಾಗೇಶ್, ನಿಜಗುಣ, ಆನಂದ್, ಅಭಿಲಾಷ್ ಇದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಾಲನೆ ನೀಡಿದರು.

ಸರಗೂರು, ಜೂ.13– ತಾಲೂಕಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಶಾಸಕ ಅನಿಲ್ ತಿಳಿಸಿದರು. ಲೋಕೋಪಯೋಗಿ ಇಲಾಖೆ ವತಿಯಿಂದ ತಾಲೂಕಿನ ಬೀರ್‍ವಾಳ್ ಗ್ರಾಮದಿಂದ ಮುಳ್ಳೂರು ಗ್ರಾಮದವರೆಗಿನ 3 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ತಾಲೂಕಿನಲ್ಲಿ ರಸ್ತೆ, ಕುಡಿಯುವ ನೀರು, ಚರಂಡಿ ಸೇರಿದಂತೆ ಮೂಲ ಸೌಕರ್ಯಕ್ಕೆ ಒತ್ತು ನೀಡಲಾಗುವುದು ಎಂದ ಅವರು ತಾಲೂಕಿನ ಜನತೆ ನನ್ನನ್ನು 2ನೇ ಬಾರಿ ಶಾಸಕನನ್ನಾಗಿ ಆಯ್ಕೆ ಮಾಡಿದ್ದೀರಿ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹಕಾರದೊಂದಿಗೆ ಹೆಚ್.ಡಿ. ಕೋಟೆ ಹಾಗೂ ಸರಗೂರು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ತಂದು ಶ್ರಮಿಸುತ್ತೇನೆ ಎಂದರು.

ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿ, ಮಾಜಿ ಶಾಸಕ ದಿ.ಚಿಕ್ಕಮಾದು ಹಾಗೂ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹಾಕಿಕೊಟ್ಟ ಹಾದಿಯಲ್ಲೇ ಶಾಸಕ ಅನಿಲ್ ಸಾಗುತ್ತಿದ್ದು, ತಾಲೂಕಿನ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಪಿ.ರವಿ, ಹೆಚ್.ಸಿ.ಮಂಜುನಾಥ್, ಚಿಕ್ಕವೀರನಾಯಕ, ಭಾಗ್ಯಲಕ್ಷ್ಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಶಂಭುಲಿಂಗ ನಾಯಕ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಮುಳ್ಳೂರು ಗ್ರಾಪಂ ಅಧ್ಯಕ್ಷೆ ಚಿನ್ನಮ್ಮ, ಸದಸ್ಯರಾದ ಶಿವಚನ್ನ, ಶ್ರೀನಿವಾಸ್, ಮುಖಂಡರಾದ ಚಿಕ್ಕಣ್ಣ, ಬಸವರಾಜು, ಸತೀಶ್‌ಗೌಡ, ಶಿವರಾಜು, ಮಂಜು, ಪುಟ್ಟಸ್ವಾಮಿ, ನಾಗರಾಜು, ಲೋಕೇಶ್, ಬೆಟ್ಟಸ್ವಾಮಿ, ಮಹೇಶ್, ಸಿದ್ದರಾಜು, ಹೇಮಂತ್ ಇನ್ನಿತರರಿದ್ದರು.

ಡಿಇಎಲ್‌ಇಡಿ ಪ್ರವೇಶಾತಿಗೆ ಅವಧಿ ವಿಸ್ತರಣೆ

ಮೈಸೂರು, ಜೂ.13– ಪ್ರಸಕ್ತ ಸಾಲಿನ ಡಿಇಎಲ್‌ಇಡಿ ಪ್ರವೇಶಾತಿ ಪ್ರಾರಂಭಗೊಂಡಿದ್ದು, ಅರ್ಜಿ ಸಲ್ಲಿಸಲು 3ನೇ ಹಂತದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಫಲಿತಾಂಶ ಬರುವವರೆಗೂ ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸಲು ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ಸಾಮಾನ್ಯ ಅಭ್ಯರ್ಥಿಗಳು ಶೇ.50, ಪ.ಜಾತಿ ಅಥವಾ ಪ.ಪಂಗಡ ವಿದ್ಯಾರ್ಥಿಗಳು ಶೇ.45ರಷ್ಟು ಅಂಕ ಪಡೆದಿರಬೇಕು. ಸಾಮಾನ್ಯ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ 150 ರೂ., ಪ.ಜಾತಿ ಅಥವಾ ಪ.ಪಂಗಡದ ವಿದ್ಯಾರ್ಥಿಗಳಿಗೆ 50 ರೂ., ಪ.ಜಾತಿ ಅಥವಾ ಪ.ಪಂಗಡದ ವಿದ್ಯಾರ್ಥಿ ಗಳಿಗೆ ಶುಲ್ಕ ವಿನಾಯಿತಿ ಇದ್ದು, ಸಾಮಾನ್ಯ ಹಾಗೂ ಇತರೆ ವರ್ಗದವರಿಗೆ ದಾಖಲಾತಿ ಶುಲ್ಕ 3015 ರೂ. ಇರುತ್ತದೆ. ಆಸಕ್ತರು ಪ್ರಾಂಶುಪಾಲೆ ಟಿ.ಎನ್.ಗಾಯತ್ರಿ ಹಾಗೂ ಉಪನ್ಯಾಸಕರ ಮೊ:9845621719, 9353326738 ಸಂಪರ್ಕಿಸಬಹುದು ಎಂದು ನಾರಾಯಣಶಾಸ್ತ್ರಿ ರಸ್ತೆಯ ಸರ್ಕಾರಿ ಮಹಾರಾಣಿ ಮಹಿಳಾ ಪ್ರತಿಕ್ಷಣ ಸಂಸ್ಥೆ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಣದಿಂದ ಉತ್ತಮ ಸಾಧನೆ ಸಾಧ್ಯ

ಪ್ರಾಂಶುಪಾಲ ಅರುಣ್ ಕುಮಾರ್



ಹೆಚ್.ಡಿ.ಕೋಟೆ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಎನ್ ಎಸ್ ಎಸ್ ಸಮಾರೋಪವನ್ನು ಗಣ್ಯರು ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಜೂ.13– ಶಿಕ್ಷಣದಿಂದ ಉತ್ತಮ ಸಾಧನೆ ಸಾಧ್ಯ ಎಂದು ಹೆಚ್.ಡಿ. ಕೋಟೆ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಅರುಣ್ ಕುಮಾರ್ ತಿಳಿಸಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ, ಕ್ರೀಡೆ, ಎನ್ ಎಸ್ ಎಸ್ ರೋವರ್ಸ್, ರೇಂಜರ್ಸ್, ರೆಡ್‌ಕ್ರಾಸ್ ಘಟಕಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣದಿಂದ ಎಲ್ಲವೂ ಸಾಧ್ಯವಿದೆ. ಅದನ್ನು ಸ್ಪರ್ಧಾತ್ಮಕವಾಗಿ ತೆಗೆದುಕೊಂಡರೆ ನಮ್ಮ ಬದುಕು ಬಂಗಾರವಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಪದವಿ ಮುಗಿಸಿದ ನಂತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ಓದಿನಲ್ಲಿ ತೊಡಗಿಸಿಕೊಂಡರೆ ಸಾಕಷ್ಟು ಸಾಧನೆ ಮಾಡಲು ಅವಕಾಶವಿದೆ. ನಮ್ಮ ತಾಲೂಕಿನ ಪ್ರಮೋದ್ ಮತ್ತು ಚಿದಾನಂದ ಇಬ್ಬರೂ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಇದು ನಮ್ಮ ತಾಲೂಕಿಗೆ ಹೆಮ್ಮೆ. ಅವರಂತೆ ನೀವು ಸಹ ಆಗಬೇಕು ಎಂದರು.

ಸರ್ಕಾರಿ ಕಾಲೇಜುಗಳೆಂದರೆ ಸಾಕಷ್ಟು ಜನ ಅಸಡ್ಡೆಯಾಗಿ ನೋಡುತ್ತಾರೆ. ಆದರೆ ನಮ್ಮ ಹೆಚ್.ಡಿ.ಕೋಟೆ ಪ್ರಥಮ ದರ್ಜೆ ಕಾಲೇಜು ಅತ್ಯುತ್ತಮವಾಗಿದ್ದು, ಕಾಲೇಜಿಗೆ ನ್ಯಾಕ್ ಬಿ ಪ್ಲಸ್ ಮಾನ್ಯತೆ ದೊರೆತಿರುವುದು ನಿಜಕ್ಕೂ ಶ್ಲಾಘನೀಯ. ಇದರಲ್ಲಿ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರ ಪಾತ್ರ ಬಹಳ ಇದೆ ಎಂದರು.

ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ಸಹಕಾರ ನೀಡಲಾಗುತ್ತಿದ್ದು, ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಬೇಕಾಗುವ ಮಾರ್ಗದರ್ಶನ ನೀಡಲಾಗುತ್ತಿದೆ ಎಂದರು.

ಇದೇ ವೇಳೆ ಪದ್ಮಶ್ರೀ ಪ್ರಶಸ್ತಿ ಪಡೆದ ತಾಲೂಕಿನ ಮೊತ್ತ ಹಾಡಿ ಆದಿವಾಸಿ ಸೋಮಣ್ಣ, ಮೈಸೂರು ವಿವಿಯಲ್ಲಿ ಹೆಚ್.ಡಿ.ಕೋಟೆ ಕಾಲೇಜನ್ನು ಪ್ರತಿನಿಧಿಸಿ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದ ಬೀಚನಹಳ್ಳಿ ಕವನ್ ಕುಮಾರ್ ಹಾಗೂ ರಾಷ್ಟ್ರೀಯ ಕುಸ್ತಿಪಟು ನಾಗೇಶ್ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಕೃಪಾ ಗಣೇಶ್, ಪುಟ್ಟರಾಜು, ಪುಷ್ಪಲತಾ, ನಾಗರಾಜ ನಾಯಕ, ಕಾತ್ಯಾಯಿನಿ, ಗುರುದತ್, ಬಾಲಾಜಿ, ಕೆಂಪರಾಜು, ನಿಂಗರಾಜು, ಕಾಮತ್, ಶಿವಕುಮಾರ್ ಪೂರ್ಣಿಮಾ, ಮಾದೇವಮ್ಮ, ಇದ್ದರು.

ಪ್ರತಿಭಾ ಪುರಸ್ಕಾರದಿಂದ ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಳ

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ



ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ತಿ.ನರಸೀಪುರ, ಜೂ.13– ಪ್ರತಿಭಾ ಪುರಸ್ಕಾರಗಳು ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸುತ್ತವೆ. ಇತರೆ ವಿದ್ಯಾರ್ಥಿಗಳಿಗೆ ಇದು ಪ್ರೇರಣೆಯಾಗಲಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ ತಿಳಿಸಿದರು.

ತಾಲೂಕಿನ ಕೊಳತ್ತೂರು ಗ್ರಾಮದಲ್ಲಿ ಸುಜಿತ್ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಲೋಕಸಭಾ ಚುನಾವಣೆಯಲ್ಲಿ ಸುನೀಲ್ ಬೋಸ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ 2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಿ, ಅಭಿನಂದನಾ ಪತ್ರ ನೀಡಿ ಮಾತನಾಡಿದ ಅವರು, ಗ್ರಾಮೀಣ ವಿದ್ಯಾರ್ಥಿಗಳ ಪ್ರತಿಭೆ ಗುರ್ತಿಸಿ ಅವರನ್ನು ಸನ್ಮಾನಿಸುತ್ತಿರುವುದು ಇತರೆ ಮಕ್ಕಳಿಗೆ ಪ್ರೇರಣೆ ನೀಡಿದಂತಾಗುತ್ತದೆ. ಇದರಿಂದ ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕೆ ಒತ್ತು ನೀಡಿದಂತಾಗುತ್ತದೆ. ಪ್ರತಿಭಾವಂತ ಮಕ್ಕಳು ಓದಿದ ಶಾಲೆಗೆ, ಪೋಷಕರಿಗೆ ಹಾಗೂ ಗ್ರಾಮಕ್ಕೆ ಕೀರ್ತಿ ತರುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ ಎಂದರು.

ಸಚಿವ ಹೆಚ್.ಸಿ.ಮಹದೇವಪ್ಪ ಕೊಳತ್ತೂರು ಗ್ರಾಮಕ್ಕೆ ಗ್ರಾಮೀಣ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಪ್ರೌಢಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಉತ್ತಮ ರಸ್ತೆ, ಚರಂಡಿಗಳನ್ನು ನಿರ್ಮಾಣ ಮಾಡಿ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡಿದ್ದಾರೆ ಎಂದರು.

ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅವರ ಪುತ್ರ ಅನಿಲ್ ಬೋಸ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರತಿಯೊಂದು ಮಕ್ಕಳಲ್ಲೂ ಒಂದೊಂದು ಪ್ರತಿಭೆ ಇರುತ್ತದೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ಪೋಷಕರು ಹಾಗೂ ಶಿಕ್ಷಕರು ಪ್ರೋತ್ಸಾಹಿಸಬೇಕು. ಆಗ ಮತ್ತಷ್ಟು ಸಾಧನೆಗೆ ಸಹಕಾರಿಯಾಗಲಿದೆ. ವಿದ್ಯಾರ್ಥಿಗಳ ಜೀವನದ ಪ್ರಮುಖ ಘಟ್ಟವಾದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಯಶಸ್ಸು ಸಾಧಿಸಿದರೆ ಮುಂದೆ ಸುಲಭವಾಗಿ ಗುರಿ ಮುಟ್ಟಬಹುದು ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಹೇಮಾ, ಪುಟ್ಟಲಕ್ಷ್ಮಿ, ಅಮೃತ ಅವರನ್ನು ಸನ್ಮಾನಿಸಲಾಯಿತು. ಸುಜಿತ್ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವ್ಯವಸ್ಥಾಪಕ ಸುರೇಶ್, ಜಾನಪದ ಕಲಾವಿದ, ಕಾಂಗ್ರೆಸ್ ಮುಖಂಡ ಕೊಳತ್ತೂರು ಪಿ.ಮಹದೇವಸ್ವಾಮಿ ಪ್ರೌಢಶಾಲಾ ಮಕ್ಕಳಿಗೆ ಉಚಿತ ನೋಟ್‌ಬುಕ್ ವಿತರಿಸಿದರು.

ಈ ವೇಳೆ ಮೈಸೂರು ವಕೀಲರ ಸಂಘ ಮಾಜಿ ಅಧ್ಯಕ್ಷ ಎಂ.ಮಹದೇವಸ್ವಾಮಿ, ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ, ಗ್ರಾಪಂ ಅಧ್ಯಕ್ಷ ರವಿಪ್ರಸಾದ್, ಸುರೇಶ, ಕೆ.ಶಂಕರ, ಅರುಣ, ಮಹದೇವಯ್ಯ, ಗುತ್ತಿಗೆದಾರ ಮಂಟೇಸ್ವಾಮಿ, ನಾಗಲಗೆರೆ ಶಾಂತರಾಜು, ಕೊಣಗಳ್ಳಿ ಮಹೇಶ, ಮಾದೇಶ, ನಾಗೇಗೌಡ್ರು, ಕೆ.ಟಿ.ನಂಜುಂಡಸ್ವಾಮಿ, ಪಟೇಲ್ ಶಿವಸ್ವಾಮಿ, ರಾಜು, ಚೆಲುವೆ, ಪುಟ್ಟಸ್ವಾಮಿ, ಗ್ರಾಮದ ಮುಖಂಡರು, ಜಾನಪದ ಕಲಾವಿದರು ಹಾಗೂ ಸುಜಿತ್ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಪದಾಧಿಕಾರಿಗಳು ಹಾಜರಿದ್ದರು.

ಮಿನಿ ವಿಧಾನಸೌಧ ಕಟ್ಟಡದ

ತಾರಸಿ ಪರಿಶೀಲಿಸಿದ ಡಿಸಿ



ಮೈಸೂರು, ಜೂ.13(ಆರ್‌ಕೆ)–ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ನಜರ್‌ಬಾದ್‌ನಲ್ಲಿರುವ ತಹಶೀಲ್ದಾರ್ ಕಚೇರಿ (ಮಿನಿ ವಿಧಾನಸೌಧ) ಕಟ್ಟಡದ ತಾರಸಿ ಪರಿಶೀಲಿಸಿದರು.

ಕಟ್ಟಡದ ಎರಡನೇ ಮಹಡಿಯಲ್ಲಿರುವ ಭೂ ಮಾಪನ ಸಹಾಯಕ ನಿರ್ದೇಶಕ (ADLR)ರ ಕಚೇರಿಯ ಛಾವಣಿ ಸೋರುತ್ತಿದ್ದ ಹಿನ್ನೆಲೆಯಲ್ಲಿ ಅಧಿಕಾರಿಗಳ ಮಾಹಿತಿಯನ್ವಯ ತಾರಸಿಗೆ ತೆರಳಿ ಪರಿಶೀಲಿಸಿದ ಅವರು, ಮಳೆ ನೀರು ಸರಾಗವಾಗಿ ಹರಿದು ಹೋಗಲು ಇರುವ ಪೈಪ್‌ಗಳನ್ನು ಸ್ವಚ್ಛಗೊಳಿಸಿ, ನೀರು ನಿಲ್ಲದಂತೆ ರಿಪೇರಿ ಮಾಡಿಸುವಂತೆ ತಹಶೀಲ್ದಾರ್ ಮಹೇಶ್ ಅವರಿಗೆ ತಾಕೀತು ಮಾಡಿದರು. ನಂತರ ಕಚೇರಿಯ ಸರ್ವೆ ಕಚೇರಿ, ರೆಕಾರ್ಡ್ ಕೊಠಡಿ, ಕಂದಾಯ ಶಾಖೆ, ಭೂಮಿ ಕೇಂದ್ರಗಳಿಗೆ ಭೇಟಿ ನೀಡಿ ಕಾರ್ಯವೈಖರಿ ಪರಿಶೀಲಿಸಿದರಲ್ಲದೆ, ಕಟ್ಟಡದ ಲಿಫ್ಟ್, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಕಂಪ್ಯೂಟರ್ ಸೆಕ್ಷನ್, ಟಪಾಲು ವ್ಯವಸ್ಥೆಯನ್ನು ವೀಕ್ಷಿಸಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದರು. ಸಿಬ್ಬಂದಿಗಳು, ಸಾರ್ವಜನಿಕರ ವಾಹನ ನಿಲುಗಡೆ ಸ್ಥಳ, ಕಟ್ಟಡ, ಆವರಣದ ಸ್ವಚ್ಛತೆ, ನಿರ್ವಹಣೆಯನ್ನು ನಿರಂತರವಾಗಿ ಮಾಡಬೇಕು. ಭದ್ರತೆ, ಸಿಸಿ ಕ್ಯಾಮರಾ ವ್ಯವಸ್ಥೆಯನ್ನು ಸರಿಯಾಗಿ ನೋಡಿಕೊಳ್ಳುವಂತೆಯೂ ಜಿಲ್ಲಾಧಿಕಾರಿಗಳು ತಹಶೀಲ್ದಾರ್ ಮಹೇಶ್ ಅವರಿಗೆ ನಿರ್ದೇಶನ ನೀಡಿದರು.

ಇಂದು ಕೆಂಪೇಗೌಡ ಜಯಂತಿ ಪೂರ್ವಭಾವಿ ಸಭೆ

ಮೈಸೂರು, ಜೂ.13– ಜೂ.27ರಂದು ನಾಡಪ್ರಭು ಕೆಂಪೇಗೌಡ ಜಯಂತಿಯ ಆಚರಣೆ ಸಂಬಂಧ, ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಜೂ.14ರಂದು ಬೆಳಗ್ಗೆ 11 ಗಂಟೆಗೆ ಸಿದ್ಧಾರ್ಥನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಬೆಂಗಳೂರು ಸಿಟಿ ಬನಶಂಕರಿ ಬಡಾವಣೆ 1ನೇ ಹಂತ 5ನೇ ಕ್ರಾಸ್ ಎಸ್.ಬಿ.ಎಂ ಕಾಲೋನಿ ಮನೆ ನಂ.81/ಏ ರಲ್ಲಿ ವಾಸವಾಗಿರುವ ಪ್ರಮೋದ್ ಚಂದ್ರ ರವರ ಧರ್ಮ ಪತ್ನಿಯಾದ ಶ್ರೀ ಚಾರು ಪ್ರಮೋದ್ ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ತಂಟೆ ತಕರಾರು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 7 ದಿವಸಗಳೊಳಗೆ ಈ ಕೆಳಕಂಡ ವಿಳಾಸದಾರರಿಗೆ ಯಾವುದೇ ವ್ಯಕ್ತಿಗಳು ದಾಖಲೆ ಸಹಿತ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮುಂದೆ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಂಟೆ – ತಕರಾರು ಇಲ್ಲವೆಂದು ತಿಳಿದು ವ್ಯವಹರಿಸುತ್ತಾರೆ. 7 ದಿನಗಳ ನಂತರ ಬಂದ ಯಾವುದೇ ದೂರನ್ನು ಸ್ವೀಕರಿಸಲಾಗುವುದಿಲ್ಲ. ನಮ್ಮ ಅಭಿಪ್ರಾಯದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವಿಧವಾದ ವ್ಯಾಜ್ಯಗಳಾಗಲಿ ದಾವೆಗಳಾಗಲಿ ಇರುವುದಿಲ್ಲ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಿಂದ ಖರೀದಿಸಬಹುದಾಗಿದೆ. ಯಾವುದೇ ದಾಖಲೆ ಇಲ್ಲದೆ ಸುಳ್ಳು ತಕರಾರನ್ನು ನೀಡಿದವರ ವಿರುದ್ಧ ಕ್ರಿಮಿನಲ್ ಕೇಸನ್ನು ದಾಖಲಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್

ಶ್ರೀ ಜಯ ಚಾಮರಾಜೇಂದ್ರ 'ಗೃಹ ನಿರ್ಮಾಣ ಕೋ ಆಪರೇಟಿವ್ ಸೊಸೈಟಿ ರವರು ಜಂಬ್ಗಾ ಗ್ರಾಮ ಕಸಬಾ ಹೋಬಳಿ ಮೈಸೂರು ತಾಲೂಕು ಸರ್ವೆ ನಂ 267/1 ರಲ್ಲಿ ನಿರ್ಮಾಣ ಮಾಡಿರುವ 'ಕಾವೇರಿ ನಗರ' ಬಡಾವಣೆ ಖಾತ ಜಂಬರ್ ನಂ.595/595 ನಿವೇಶನ ಸಂಖ್ಯೆ 595 ನಂಬರ್ ಸ್ವತ್ತಿಗೆ ಚಕ್ಕುಬಂದಿ.

ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಮೂಡ ಸ್ವತ್ತು, ಉತ್ತರಕ್ಕೆ ; ನಿವೇಶನ ಸಂಖ್ಯೆ 339 ಮತ್ತು 594, ದಕ್ಷಿಣಕ್ಕೆ ; ರಸ್ತೆ. ಈ ಮಧ್ಯೆ ಇರುವ ಪೂರ್ವ ಪಶ್ಚಿಮ ;100 ಅಡಿ ಉತ್ತರ ದಕ್ಷಿಣ 30 ಅಡಿ ಸುಮಾರು 3000 ಚದರಡಿವುಳ್ಳ ನಿವೇಶನ

Sd/- Umesh
M.S Vani
K Sheshaiah
Advocate
"Madhavabhavan" # 369, Jhansi Lakshmi Bai Road, Mysuru-570005
Ph: 0821-2429670, 3552106
Mob: 9448342677

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ನಂ: MYS-LBPAS-24365/23-24/BP

ಮೈಸೂರು ನಗರ, ಜೆ.ಪಿ.ನಗರ, 1ನೇ ಹಂತ, 'ಸಿ' ಬ್ಲಾಕ್, ಸ್ವತ್ತಿನ ಸಂಖ್ಯೆ : ಸಿ.ಎ-04 ರಲ್ಲಿ ಹೊಸದಾಗಿ ಧಾರ್ಮಿಕ ಕಟ್ಟಡವನ್ನು (ದೇವಸ್ಥಾನ) ನಿರ್ಮಿಸಲು ರಹದಾರಿ ಕೋರಿ ಸಿದ್ಧಲಿಂಗೇಶ್ವರ ಸ್ವಾಮಿ ಟ್ರಸ್ಟ್ (ರಿ) ಮೈಸೂರು ಇವರು ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಿರುತ್ತಾರೆ. ಈ ಜಾಗೆಯು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾದ ನಾಗರೀಕ ಸೌಲಭ್ಯ ನಿವೇಶನವಾಗಿರುತ್ತದೆ. ಪ್ರಸ್ತುತ ಈ ನಿವೇಶನದಲ್ಲಿ ಉದ್ದೇಶಿಸಲಾಗಿರುವ 'ಧಾರ್ಮಿಕ ಕಟ್ಟಡದ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು / ಸಲಹೆಗಳಿದ್ದಲ್ಲಿ ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿನದೊಳಗಾಗಿ ಲಿಖಿತ ರೂಪದಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ಮೈಸೂರು ಮಹಾನಗರ ಪಾಲಿಕೆಗೆ ಸಲ್ಲಿಸಬಹುದಾಗಿದೆ.

ಸಹಿ/– ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು

PUBLIC NOTICE

The Public at large is hereby notified that my clients have entered into an agreement to purchase the property more fully described in the schedule below from Sri. Shivanna and Others. If any person/s has/ have any right, title, interest or claim over the schedule property, they may lodge their claim / objections with the undersigned within FIFTEEN DAYS from the date of this notification with supporting documents by Registered Post Acknowledgement Due failing which, my clients will take it for granted that there are no claims / charges over the schedule property and he will proceed to purchase the property. Any claims/objections received after the stipulated period of fifteen days will not be considered.

SCHEDULE

Agricultural land bearing Sy No. 156/3 measuring 20 Guntas situated at Shettynayakanahalli Village, Yelwala Hobli, Mysuru District and bounded on the
East by Water Channel/Halla
West by Lands of B. M. Mahadevappa
North by Govt. Road
South by Lands of C. Mallesh

Sd/- Rohit Subbayya, BAL., LLM.
Advocate KAR 1162/11
#1230/A, CH 36/A, 2nd Cross, Behind Ramamandira, Krishnamurthypuram, Chamaraja Mohalla, Mysuru-04 Mob : 94800 04999
Date : 13.06.2024, Place : Mysore

ಕರ್ನಾಟಕರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಜಂಟಿ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, E3. ವಿಶ್ವವಿದ್ಯಾನಿಲಯ ವಸತಿ ಸಮುಚ್ಚಯ, ಅಗ್ನಿಶಾಮಕ ದಳದ ಎದುರು, 1ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು–570009
ದೂರವಾಣಿ:0821–2420173 ವೆಬ್‌ಸೈಟ್:aclacmysore@gmail.com

ಸಂಖ್ಯೆ:ಜಂ.ನಿ.ಕ/ಸ್ಥ.ಲೆ.ಪ.ವ./ಮೈ/ಹೊ.ಗು/2024–25 ದಿನಾಂಕ:13.06.2024

ಟೆಂಡರ್ ಅಧಿಸೂಚನೆ

2024–25 ನೇ ಸಾಲಿನ (01.07.2024 ರಿಂದ 31.03.2025ರವರೆಗೆ) ಆರ್ಥಿಕ ವರ್ಷಕ್ಕೆ ಜಂಟಿ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಮೈಸೂರು ಇಲ್ಲಿಗೆ ಡಾಟಾ ಎಂಟ್ರಿ ಅಪರೇಟರ್ & ಗ್ರೂಪ್ ಡಿ ಪರಿಚಾರಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಬಗ್ಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ದ 17 ರ ಉಪನಿಯಮ 2 ರ ಅನುಸಾರ ಟೆಂಡರ್ ಅನ್ನು ಕರೆಯಲಾಗಿದೆ.

ಟೆಂಡರ್ ವೇಳಾಪಟ್ಟಿ :–

ಟೆಂಡರ್ ಪ್ರಾರಂಭ ದಿನಾಂಕ	14.06.2024
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	24.06.2024 (ಸಂಜೆ 5.00 ಗಂಟೆ)
ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	26.06.2024 (ಬೆಳಿಗ್ಗೆ 11.00 ಗಂಟೆ)
ಹಣಕಾಸು ಬಿಡ್ ತೆರೆಯುವ ದಿನಾಂಕ	28.06.2024 ಅಥವಾ ನಂತರ
ಟೆಂಡರ್ ತೆರೆಯುವ ಸ್ಥಳ	ಜಂಟಿ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, E3, ವಿಶ್ವವಿದ್ಯಾನಿಲಯ ವಸತಿ ಸಮುಚ್ಚಯ, ಅಗ್ನಿಶಾಮಕ ದಳದ ಎದುರು, 1ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು–570009.

ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. ಪೂರ್ಣ ವಿವರಗಳು ಟೆಂಡರ್ ಡಾಕ್ಯೂಮೆಂಟ್ನಲ್ಲಿ ದೊರೆಯುತ್ತದೆ.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮೈಸೂರು

DIPR/MYS/KAVITA/76/24-25

ರೇಷ್ಮೆ ಜಂಟಿ ನಿರ್ದೇಶಕರವರ ಕಛೇರಿ, ಮೈಸೂರು

ನಂ:932, 1ನೇ ಮುಖ್ಯ ರಸ್ತೆ, ಲಕ್ಷ್ಮೀಪುರಂ, ಮೈಸೂರು–570004
ದೂ.: 0821–2333750 E-Mail : jdserimys@gmail.com
ಸಂ/ರೇಜಂನಿ/ಮೈ/ಸಿಬ್ಬಂದಿ5/ವಾಹನ/ಹೊಗುಆ/01/2024–25 ದಿ: 10.06.2024

ಪ್ರಕಟಣೆ

ರೇಷ್ಮೆ ಜಂಟಿ ನಿರ್ದೇಶಕರ ಕಛೇರಿ, ಮೈಸೂರು ಇಲ್ಲಿಗೆ 2024–25ನೇ ಸಾಲಿಗೆ ಆಡಳಿತ ಹಿತದೃಷ್ಟಿಯಿಂದ ವಾಹನ ಚಾಲಕರ ಸಮೇತ ವಾಹನವನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಒದಗಿಸಲು ನಿಬಂಧನೆಗಳಿಗೆ ಒಳಪಟ್ಟು ದಿನಾಂಕ: 01.07.2024 ರಿಂದ 31.03.2025ರ ಅವಧಿಗೆ ಒದಗಿಸಿಕೊಡಲು ಅರ್ಹರಾಗಿರುವಂತಹ ಸಂಸ್ಥೆಗಳಿಂದ ಸ್ಪರ್ಧಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ವಿವರ: ರೇಷ್ಮೆ ಜಂಟಿ ನಿರ್ದೇಶಕರ ಕಛೇರಿ, ಮೈಸೂರು ಇಲ್ಲಿಗೆ ವಾಹನ ಚಾಲಕರ ಸಮೇತ ವಾಹನ ಸೇವೆಗೆ – 01 ಸಂ. ಒಂಭತ್ತು ತಿಂಗಳ ಒಟ್ಟು ಮೌಲ್ಯ ಅಂದಾಜು: 4.99 ಲಕ್ಷಗಳು. ಸ್ಪರ್ಧಾತ್ಮಕ ದರಪಟ್ಟಿ ಹಾಗೂ ವಿವರಗಳನ್ನು ಸಲ್ಲಿಸಲು ಅಂತಿಮ ದಿ: 20.06.2024ರ ಸಂಜೆ 04:00 ಘಂಟೆ ಒಳಗೆ. ಸ್ಪರ್ಧಾತ್ಮಕ ದರಪಟ್ಟಿಗಳನ್ನು ತೆರೆಯುವ ಅಂತಿಮ ದಿ: 20.06.2024ರ ಸಂಜೆ 04:30 ಘಂಟೆಗೆ.

ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ರೇಷ್ಮೆ ಜಂಟಿ ನಿರ್ದೇಶಕರು, ಮೈಸೂರು.

DIPR/DDMYS-68/KSMCA-58/2024-25

ಸಾರ್ವಜನಿಕ ಪ್ರಕಟಣೆ

ಮೈಸೂರು ನಗರ, ಜಯನಗರ, 12 ನೇ ಕ್ರಾಸ್, 2 ನೇ ಮೇನ್, ಮನೆ ನಂ. 163, ಸಿ.ಹೆಚ್–5 ರಲ್ಲಿ ವಾಸವಾಗಿರುವ ಚಂದ್ರಹಾಸಾ ರವರ ಮಗನಾದ ಸುಮಾರು 60 ವರ್ಷ ವಯಸ್ಸುಳ್ಳ ಶ್ರೀ.ರಾಜಕುಮಾರ್.ಸಿ.ಕಾಟವಾ ಹಾಗೂ ಇವರ ಧರ್ಮಪತ್ನಿಯಾದ ಸುಮಾರು 61 ವರ್ಷ ವಯಸ್ಸುಳ್ಳ ಶ್ರೀಮತಿ ಇಂದುಮತಿ ಇವರ ಈರಾದೆ ಮೇರೆಗೆ ತಿಳಿಸುವುದೇನೆಂದರೆ,

ಆದಾಗಿ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳು ಶ್ರೀ.ರವಿ ಮತ್ತು ಶ್ರೀ.ಆರ್.ರವಿ ರವರುಗಳಿಗೆ ಸೇರಿದ ಸ್ವತ್ತಾಗಿದ್ದು, ಅವರ ಹೆಸರಿಗೆ ಖಾತೆ ವಗ್ಯೆರೆ ಮಾಡಿಕೊಂಡು ಅವರ ಸ್ವಾಧೀನಾನುಭವದಲ್ಲಿರುತ್ತದೆ. ಈ ಸ್ವತ್ತನ್ನು ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆಯುವ ಉದ್ದೇಶವನ್ನು ಹೊಂದಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳ ಸಂಬಂಧ ಯಾವುದಾದರೂ ಋಣಭಾರ ತಂಟೆ ತಕರಾರುಗಳು ಹಕ್ಕು, ಹಿತಾಸಕ್ತಿ, ಬಾಧ್ಯತೆ, ಕೋರ್ಟ್ ಕೇಸು, ಸಾಲ ಆಧಾರ ಭೋಗ್ಯ, ಇತರೆ ಆಕ್ಷೇಪಣೆಗಳೇನಾದರೂ ಇದ್ದ ಪಕ್ಷದಲ್ಲಿ ಈ ಪ್ರಕಟಣೆ ದಿನಾಂಕದಿಂದ 7 ದಿನಗಳ ಒಳಗಾಗಿ ಈ ಮೇಲ್ಕಂಡ ವಿಳಾಸದಲ್ಲಿ ವಕೀಲರನ್ನು ಖುದ್ದಾಗಿ ಅಥವಾ ದೂರವಾಣಿ ಸಂಪರ್ಕದ ಮುಖಾಂತರವಾಗಲಿ ಸೂಕ್ತ ದಾಖಲಾತಿಗಳೊಡನೆ ಸಂಪರ್ಕಿಸತಕ್ಕದ್ದು. 7 ದಿನಗಳ ನಂತರ ಬಂದ ಆಕ್ಷೇಪಣೆ ತಂಟೆ ತಕರಾರುಗಳು ಅಹವಾಲುಗಳಿಗೆ ನಮ್ಮ ಕಕ್ಷಿದಾರರು ಯಾವುದೇ ರೀತಿ ಜವಾಬ್ದಾರರಾಗಿರುವುದಿಲ್ಲವೆಂದು ಈ ಮೂಲಕ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ನಗರ, ಚಾಮರಾಜ ಮೊಹಲ್ಲಾ, ಬೋಗಾದಿ, ಆನಂದ ಹೌಸಿಂಗ್ ಕೋ–ಅಪರೇಟೀವ್ ಸೊಸೈಟಿ ಲೇಔಟ್, ಸಿ ಬ್ಲಾಕ್, ವಾಣಿಜ್ಯ ನಂ. 85/21 ರಲ್ಲಿರುವ ವಿಸ್ತೀರ್ಣ 15+21/2X50 ಅಡಿಗಳು ಹಾಗೂ ಮೈಸೂರು ನಗರ, ಚಾಮರಾಜ ಮೊಹಲ್ಲಾ, ಬೋಗಾದಿ, ಆನಂದ ಹೌಸಿಂಗ್ ಕೋ–ಅಪರೇಟೀವ್ ಸೊಸೈಟಿ ಲೇಔಟ್, ಸಿ ಬ್ಲಾಕ್, ವಾಣಿಜ್ಯ ನಂ. 84/19 ರಲ್ಲಿರುವ ವಿಸ್ತೀರ್ಣ 10+15/2X30 ಅಡಿಗಳುಳ್ಳ ಒಟ್ಟು ವಿಸ್ತೀರ್ಣ 1275 ಚದರಡಿಗಳುಳ್ಳ ಪೂರ್ತಾ ನಿವೇಶನ ಹಾಗೂ ಈ ನಿವೇಶನದಲ್ಲಿ ಕಟ್ಟಿರುವ ನೆಲ, ಮೊದಲನೇ, ಎರಡನೇ, ಮೂರನೇ ಮಹಡಿಯಲ್ಲಿ ಪ್ರತಿ ಮಹಡಿಯಲ್ಲಿ 900 ಚದರಡಿ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಸ್ವತ್ತಿನ ನಂ 79/14 ಮತ್ತು 78/13, ಪಶ್ಚಿಮಕ್ಕೆ : 30 ಅಡಿ ರಸ್ತೆ, ಉತ್ತರಕ್ಕೆ : ಸ್ವತ್ತಿನ ನಂ 88/22, ದಕ್ಷಿಣಕ್ಕೆ : 30 ಅಡಿ ರಸ್ತೆ

Sd/- M.GEETHA M.A., L.L.B,ADVOCATE & NOTARY
Office address: No. 4, C.I.T.B Building, Agrahara, Mysore.
Cell: 9844240769, 9845728638
Mail: geetha.swamy2022@gmail.com

ಸ್ಥಳ: ಮೈಸೂರು
ದಿನಾಂಕ: 13-06-2024